

ಕಲ್ಯಾಣ ಕಿರಣ

ಮಾರ್ಚ್ - 2002

ಬೆಲೆ : ರೂ. 5-00



Digitalized by e-Sahithya Documentation Forum
Sponsored by arayu Foundation Trust



ಬೀದರದಲ್ಲಿ ದಿ. 24-1-2002 ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಅವರ ಪ್ರವಚನ ಉದ್ಘಾಟನೆ. ಶರಣೆ. ಚಂದ್ರಮ್ಮ ಪಾಟೀಲ್ ಅವರಿಂದ ದೀಪೋಜ್ವಲನ



ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರಿಂದ
ಮುಖ್ಯ ಲೆಕ್ಕಾದಿಕಾರಿ ಶರಣ. ರವಿ ಕಲಾಮಾಪುರ ಇವರಿಗೆ ಸನ್ಮಾನ

ಓಂ ಶ್ರೀ ಗುರು ಬಸವಲಿಂಗಾಯ ನಮಃ
86666

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -3 | ಮಾರ್ಚ 2002 | ವಾರ್ಷಿಕ ಚಂದಾ 50/- ರೂ

ನುಡಿ ನೈವೇದ್ಯ

ಕಲ್ಯಾಣದ ಕರೆ ಕಲ್ಯಾಣಕೆ ಕರೆ

ಕಲ್ಯಾಣ ಕರೆದಿದೆ ಕಲ್ಯಾಣ, ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ, ವಿಶ್ವಕೆ ಬಯಸುತ ಕಲ್ಯಾಣ ॥ ಪಲ್ಲವಿ ॥

ಭಾರತ ಮಾತೆಯ ಮುಕುಟ ಕಾಶ್ಮೀರ, ಪಾವನ ಪಾದವು ಕನ್ಯಾಕುಮಾರಿ
ದೇಶ ವಿದೇಶದ ಮೂಲಗಳಿಂದ ಶರಣರ ಕರೆದಿದೆ ಕಲ್ಯಾಣ ॥ ಅನುಪಲ್ಲವಿ ॥

ಗುರು ಬಸವಣ್ಣನ ಪ್ರಭೆಯನು ಬೆಳಗಲು ಪ್ರಣತೆಯಾಯಿತು ಕಲ್ಯಾಣ
ಸತ್ಯದ ಶೋಧಕ ಸಾಧಕರೆಲ್ಲರ ಅರಿವಿನ ನೆಲೆಯಾಯ್ತು ಕಲ್ಯಾಣ ॥ 1 ॥

ಕಾಯಕವೇ ಕೈಲಾಸವೆಂದು ಸಂದೇಶ ಸಾರಿದ ಕಲ್ಯಾಣ
ದಯವೇ ಧರ್ಮದ ಮೂಲವೆಂದು ಪ್ರೇಮವ ಮೆರೆದ ಕಲ್ಯಾಣ ॥ 2 ॥

ನಾಡ ಬಲ್ಲಿದರೆಲ್ಲ ಕೂಡಿದರಂದು ಸೂಡ ಕಟ್ಟಿದರು ವಚನಗಳ
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ ಸಮತೆಯ ಸಾರಿತು ಕಲ್ಯಾಣ ॥ 3 ॥

ಅಲ್ಲಮಪ್ರಭುದೇವ ಅಕ್ಕಮಹಾದೇವಿ ಚಿನ್ಮಯಜ್ಞಾನಿ ಚನ್ನಬಸವಣ್ಣ
ಸಿದ್ಧರಾಮೇಶ್ವರ ಮಡಿವಾಳ ಮಾಚಯ್ಯ ಮಹಾಮನೆ ಹೊಂದಿದ್ದ ಕಲ್ಯಾಣ ॥ 4 ॥

ಹರಳಯ್ಯ ಮಧುವಯ್ಯ ಮೋಳಿಗೆ ಮಾರಯ್ಯ ನೀಲಮ್ಮ ನಾಗಮ್ಮ ಶರಣೆಯರು
ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಒಕ್ಕಲಿಗ ಮುದ್ದಣ್ಣನ ಕಲ್ಯಾಣ ॥ 5 ॥

ಅನುಭವ ಮಂಟಪ ರಚಿಸಿದರಂದು ಅನುಭಾವ ಗೀತೆಯ ಹಾಡಲಿಕೆಂದು
ವಚನ ಪುಷ್ಪಗಳ ಬಂಡನು ಸವಿಯಲು ಧಾವಿಸಿ ಬಂದಿತು ಶರಣರ ದಂಡು ॥ 6 ॥

ಬನ್ನಿರಿ ಶರಣರೆ ಬಸವ ಕಲ್ಯಾಣಕೆ ಬಸವ ಮಹಾಮನೆ ಕಟ್ಟುವ ಬನ್ನಿ
ತನುಮನಧನಗಳ ಧಾರೆಯನೆರೆದು ನವ ಕಲ್ಯಾಣವ ನಿರ್ಮಿಸ ಬನ್ನಿ ॥ 7 ॥

ಕಲ್ಯಾಣ ಪರ್ವದಿ ನಲಿಯುವ ಬನ್ನಿ ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸಬನ್ನಿ ಬಸವಾತ್ಮಜೆಯ ಬಿನ್ನಹವಿದುವು ॥ 8 ॥

-ಮಾತಾಜಿ

ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

Digitalized by e-Sahithya Documentation Forum
Sponsored by arayu Foundation Trust

★ ಕಲ್ಯಾಣ ಕಿರಣ ★

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ
ಸಂಚಿಕೆ - 3	ಮಾರ್ಚ 2002	ವಾರ್ಷಿಕ ಚಂದಾ 50 ರೂ

.ಲೇಖನಗಳು ಕಿರಣಗನ್ನಡಿ



ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿಯವರ 57ನೆಯ ವರ್ಧಂತಿ ನಿಮಿತ್ತ ಭಕ್ತಿಪೂರ್ವಕ ನಮನ

ದಿ. 13-3-2002ನೆಯ ದಿನಾಂಕಕ್ಕೆ ಪೂಜ್ಯ ಶ್ರೀ ಮಾತಾಜಿಯವರು, 56 ವರ್ಷಗಳನ್ನು ಪೂರೈಸಿ 57ಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ ಕಲ್ಯಾಣ ಕಿರಣದ ಸಿಬ್ಬಂದಿ ವರ್ಗವು ಪೂಜ್ಯರಿಗೆ ನಮನವನ್ನು ಸಲ್ಲಿಸುತ್ತದೆ.

KALYANA KIRANA- Reg. No. 19988/70. Monthly Magazine printed and published by B.Shambulingaiah. at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ : ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335 / 3322790

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ



ಧರ್ಮಗುರು ಬಸವಣ್ಣ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥
86666
ಕಾಯಕವೇ ಕೈಲಾಸವೆಂದು ಸಾರಿದ
ಬೀದರ್ ಜಿಲ್ಲೆಯ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ
ವಿಶ್ವ ಕಾಯಕ ದಿನದ ಅಂಗವಾಗಿ ಪ್ರಪ್ರಥಮ



ಗಣ ಧ್ವಜ

ಕಲ್ಯಾಣ ಪರ್ವ

2002ರ ಮೇ 1, 2 ಮತ್ತು 3 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಬಸವ (ಲಿಂಗಾಯತ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು ಪ್ರತಿವರ್ಷ ಜನವರಿ 11ರಿಂದ 15ರವರೆಗೆ ಶರಣ ಮೇಳ ಎಂಬ ಧಾರ್ಮಿಕ ಸಮಾವೇಶವನ್ನು 1988ರಿಂದ ನಡೆಸಿಕೊಂಡು ಬರಲಾಗುತ್ತಿದೆ.

ಅದೇ ರೀತಿ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ಧಾರ್ಮಿಕ ಸಮಾವೇಶವನ್ನು ಪ್ರತಿವರ್ಷದ ಏಪ್ರಿಲ್ 30, ಮೇ 1 ಮತ್ತು 2 ರಂದು ನಡೆಸಲು ಸಂಕಲ್ಪಿಸಲಾಗಿದೆ. ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿದ್ದಕ್ಕಾಗಿ ತಪ್ತರಾದ ಸಂಪ್ರದಾಯವಾದಿಗಳಿಂದಾಗಿ ಧರ್ಮಪಿತ ಬಸವಣ್ಣನವರು ಗಡಿಪಾರು ಶಿಕ್ಷೆ ಅನುಭವಿಸಬೇಕಾಯಿತು. ಹರಳಯ್ಯ-ಮಧುವರಸ-ಶೀಲವಂತರು ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ವಚನ ಸಾಹಿತ್ಯವನ್ನು ಜಾತಿವಾದಿಗಳು ನಾಶಮಾಡಲು ಯತ್ನಿಸಿದಾಗ ಅದನ್ನು ಸಂರಕ್ಷಿಸಲು ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ವಚನ ವಾಙ್ಮಯವನ್ನು ಹೊತ್ತು ಕಲ್ಯಾಣದಿಂದ ಹೊರನಡೆದರು. ಶರಣರ ಈ ಬಲಿದಾನದ ಸಂಸ್ಮರಣೆಗಾಗಿ ಕಾಯಕವೇ ಕೈಲಾಸ ಎಂಬ ದುಡಿಮೆಯ ಸಪ್ತಾಕ್ಷರಿ ಮಂತ್ರವನ್ನು ಸಾರಿದ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ ವಾರ್ಷಿಕ, ಧಾರ್ಮಿಕ ಸಮಾವೇಶ ನಡೆಸಲಾಗುತ್ತಿದೆ. ಉದ್ಘಾಟನಾ ಗೋಷ್ಠಿ, ಸಾಮೂಹಿಕ ಇಷ್ಟಲಿಂಗಾರ್ಚನೆ, ಸಮುದಾಯ ಪ್ರಾರ್ಥನೆ-ಶರಣರ ಸ್ಮರಣೆ, ಮೆರವಣಿಗೆ ಪಥ ಸಂಚಲನ ಕಲ್ಯಾಣ ಪರ್ವದ ಮುಖ್ಯ ಧಾರ್ಮಿಕ ವಿಧಿಗಳು. ಮೇ 1 ರಂದು ಬೆಳಿಗ್ಗೆ 10 ರಿಂದ ಬಸವ ಧ್ವಜಾರೋಹಣ, ಸಮುದಾಯ ಪ್ರಾರ್ಥನೆ ಮತ್ತು ಶರಣಾರ್ಥಿ(ಶರಣ ವಂದನೆ) ಕಾರ್ಯಕ್ರಮ ನೆರವೇರಲಿವೆ. ಚಿಂತನಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಕಲ್ಯಾಣ ಪರ್ವವು ಉತ್ತಮ ಜ್ಞಾನದಾಸೋಹದೊಡನೆ ಅನ್ನ ದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ.

ತನ್ನ ಜೀವಮಾನದಲ್ಲಿ ಆಯುಷ್ಯ ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳ/ ಕಲ್ಯಾಣ ಪರ್ವದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಇಂತಹ ಪವಿತ್ರ ಸಮಾಗಮ ಕಲ್ಯಾಣಪರ್ವಕ್ಕೆ ಜಾತಿಮತಪಂಥಗಳ ಭೇದವಿಲ್ಲದೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

Digitalized by e-Sahithya Documentation Forum
Sponsored by arayu Foundation Trust

ಸಂಪಾದಕೀಯ :

ಬಸವ ಕಲ್ಯಾಣದ ಶಾಪ ವಿಮೋಚನೆ

ಮಾನವ ಸಮಾನತೆಗಾಗಿ ಗುರು ಬಸವಣ್ಣನವರ ನೇತೃತ್ವದಲ್ಲಿ ಒಂದು ದೊಡ್ಡ ಚಳುವಳಿ ನಡೆಯಿತು. ಅದೇ ಶರಣರ ಚಳುವಳಿ. ಅದಕ್ಕೆ ಕಲ್ಯಾಣವೇ ಆಡುಂಬೊಲವಾಯಿತು. ಭಾರತ ದೇಶದ ಮೊಟ್ಟಮೊದಲ ಅಧಿಕೃತ ವರ್ಣಾಂತರ ವಿವಾಹ ಧರ್ಮಪಿತ ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪದಲ್ಲಿ ನಡೆಯಿತು. ಧರ್ಮಪಿತ ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ನೀಡಿದರು. ಜಾತಿವಾದಿಗಳು ಬಿಜ್ಜಳರಾಜನನ್ನು ಮತಿಭ್ರಾಂತನನ್ನಾಗಿ ಮಾಡಿ ಗಡಿಪಾರು ಶಿಕ್ಷೆ ವಿಧಿಸಿದರು. ಗಡಿಪಾರಿನ ''ದಂಡಗೊಂಡ ಬಸವಣ್ಣನವರು'' ಕಲ್ಯಾಣವನ್ನು ತೊರೆದರು. ಶರಣರು ದಿಗ್ಭ್ರಾಂತರಾದರು, ನೊಂದು ನಲುಗಿದರು. ದುಃಖತಪ್ತ ಶರಣ ಸಮೂಹ ಧರ್ಮಪಿತರನ್ನು ಬೀಳ್ಕೊಡುವಾಗ ಶರಣೆ. ಕಲ್ಯಾಣಮ್ಮ ಶರಣ. ಹರಳಯ್ಯನವರ ಪತ್ನಿ ದುಃಖಿಸುತ್ತಾ ಹೇಳಿದಳು :

''ಕಲ್ಯಾಣದ ಭಾಸ್ಕರ ಬಸವಣ್ಣನವರು ಅಸ್ತಂಗತರಾದರು. ಇನ್ನು ಬಿಜ್ಜಳರಾಜನೆಂಬ ಚಂದ್ರ ಕಳಾಹೀನನಾಗುವನು. ''ಬಸವಣ್ಣನಿಲ್ಲದ ಕಲ್ಯಾಣ ಕಟುಕರ ಕೇರಿಯಾಗುವುದು''

ಧರ್ಮಪಿತರು ಕೂಡಲ ಸಂಗಮ ಮುಖಿಯಾಗಿ ಹೋಗುವಾಗ ಮುಂದೆ ಆಗಬಹುದಾದ ದುರಂತಗಳನ್ನು ಅಂತಃಸ್ಫುರಣದಿಂದ ಕಂಡುಕೊಂಡು ಕಲ್ಯಾಣಕ್ಕೆ ಸಂದೇಶವಾಹಕರನ್ನು ಕಳಿಸಿದರು. ಅದನ್ನು ತಾಯಿ ನೀಲಾಂಬಿಕೆ ಹೀಗೆ ಹೇಳಿದ್ದಾರೆ.

ನೋಡು ನೋಡು ನೋಡು ನೋಡು ನೋಡು ಲಿಂಗವೇ
ನೋಡು ಬಸವಣ್ಣನವರು ಮಾಡಿದಾಟವ ॥ ಪಲ್ಲವಿ ॥
ಹರಳಯ್ಯ ಮಧುವಯ್ಯನವರಿಗೆ ಎಳಹೂಟಿ
ದುರುಳ ಬಿಜ್ಜಳನು ಕಟ್ಟಿದನೆಂದರೆ ।
ಇರಬಾರದಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದನಂತೆ ॥1॥
ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆದನಂತೆ
ತಡಮಾಡಬೇಡಿರಿ ಮಡದಿಗೆ ಅರುಹಿರೆಂ
ದೊಡೆಯ ಬಸವರಾಜ ನುಡಿದನಂತೆ ॥2॥
ಅಲ್ಲಿಗೆ ಎಮ್ಮನು ಬರಲು ಹೇಳಿದರಂತೆ
ಅಲ್ಲಿರ್ಪ ಸಂಗಯ್ಯನಿಲ್ಲಿಲ್ಲವೇ ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವಿದು
ಬಲ್ಲ ಮಹಾತ್ಮರಿಗಿದು ತರವೆ ? ॥3॥
ಅಪ್ಪ ಅಣ್ಣಯ್ಯಗಳು ಕರೆಯಲು ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ !
ಪುಷ್ಪಕ್ಕೆ ಪರಿಮಳ ಬೆರೆದಂತೆ ಎನ್ನ
ನಪ್ಪಿದ ಲಿಂಗವೇ ಮಾತನಾಡೋ ॥4॥

ಸಂಗನ ಬಸವ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ
ಸಂಗನ ಬಸವಯ್ಯನಾತನೆ ಈತನೆ
ನ್ನಂಗಯ್ಯ ಲಿಂಗವೆ ಮಾತನಾಡೋ ॥5॥

ಧರ್ಮಪಿತರು ನುಡಿದಿದ್ದರು :

ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು
ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು. ಸಲಗೆ ತುಂಬಿತ್ತು
ಲಿಂಗದೇವಯ್ಯಾ, ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ.

ಜನಪದ ಗೀತೆಯಲ್ಲಿ ಹೀಗೆ ದಾಖಲಿಸಲಾಗಿದೆ.

ಬಸವ ಹೋಗಲು ಭೂಮಿ ಕಸವಾಗಿ ಸುಖವುಂಟೆ
ಮಸಣ ಮಸಣಾತು ಕಲ್ಯಾಣ । ಮಂತ್ರಿಗಳಲಿ
ಬಸವಗಧಿಕ ಮಂತ್ರಿ ಇನ್ನುಂಟೆ ॥

ಹರಳಯ್ಯ-ಮಧುವಯ್ಯ-ಶೀಲವಂತರ ವಧೆಯಾಯಿತು ; ಎಳೆಹೂಟೆ ಶಿಕ್ಷೆಗೊಳಗಾಗಿ ಅವರು ಪ್ರಾಣಬಿಟ್ಟರು.

ಖೂಳ ಬಿಜ್ಜಳರಾಯ ತಾಳಲಾರದೆ ಕೋಪ
ಕೀಳಿಸಿದ ಕಣ್ಣ ನಿಂತಲ್ಲೆ । ನಿಲ್ಲದಲೆ
ಗಾಳಕವರನ್ನು ಎಳೆಸೆಂದ ॥
ಎಳೆಸುತಲಿ ಬೀದಿಯಲಿ ಬಳಲಿಸುತ ಮೂವರನು
ಹಳಿದು ಶೂಲಕ್ಕೆ ಏರಿಸಲು । ಶಿವನೆಂದು
ನಲುಮೆಯಲಿ ಜೀವ ನೀಗಿದರು
ಹೂವಿನಾ ಮಳೆಯಾಗಿ ಹೂವಿನಾ ತೇರೇರಿ
ಹೂವಾದರವರು ಶಿವಪದಕೆ । ಶಿವಶರಣ
ಪಾವನದ ಮಾಲೆ ಸೇರಿದರು.

ವಚನ ವಾಙ್ಮಯವನ್ನು ಸಂಪ್ರದಾಯ ಜಡರು ನಾಶ ಮಾಡಬೇಕು ಎಂದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರಮಾತೆ ಅಕ್ಕನಾಗಲಾಂಬಿಕೆ, ವೀರಗಣಾಚಾರಿ ಮಡಿವಾಳ ಮಾಚಿದೇವರು ಸಾಹಿತ್ಯವನ್ನು ಹೊತ್ತು ಸಹ್ಯಾದ್ರಿಯ ಕಡೆಗೆ ಸಾಗಿದರು. ಅಸಂಖ್ಯಾತ ಶರಣರು ಕ್ರೌರ್ಯವನ್ನು ಸಹಿಸಲಾರದೆ ದೇಶದ ನಾನಾ ದಿಕ್ಕುಗಳಿಗೆ ಚದುರಿಹೋದರು. ಕೈಲಾಸವನ್ನು ನಾಚಿಸುವಂತಿದ್ದ ಕಲ್ಯಾಣ ಕಟುಕರ ಕೇರಿಯಾಯಿತು.

ಬಿಜ್ಜಳನ ತಮ್ಮ ಕರ್ಣದೇವ ಪಟ್ಟಗಟ್ಟಿಸಿಕೊಳ್ಳಬೇಕಾದಾಗ ಅದರ ನೇತೃತ್ವ ವಹಿಸಲು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರಿಗೆ ಗೌರವಪೂರ್ವಕ ಆಹ್ವಾನ ಕಳಿಸಿದನು. ಅವರು ನುಡಿದರು, ''ಬಸವಣ್ಣನಿಲ್ಲದ ಕಲ್ಯಾಣ ಆತ್ಮವಿರಹಿತ ದೇಹ ; ನಾನಲ್ಲಿಗೆ ಬರಲಾರೆ'' ಎಂದು ಆಹ್ವಾನವನ್ನು ನಿರಾಕರಿಸಿದರು. ಎರಡನೆ ಬಾರಿ ಆಹ್ವಾನ ಕಳಿಸಿದರೂ ನಿರಾಕರಿಸಿದರೆ, ಕಡೆಗೆ ರಾಜಬಲವನ್ನು ಪ್ರಯೋಗಿಸಿ ಕರೆತರಲು ಕಳಿಸಿದಾಗ ಮೇನೆಯಲ್ಲಿ ಕುಳಿತು ಹೊರಟರಂತೆ.

Digitalized by e-Sahithya Documentation Forum
Sponsored by arayu Foundation Trust

ಒಂದೆಡೆಯಲ್ಲಿ ರಾತ್ರಿ ವಾಸ್ತವ್ಯ ಮಾಡಿದ್ದಾಗ ಮರುದಿನ ಬೆಳಿಗ್ಗೆ ನೋಡುವಷ್ಟರಲ್ಲಿ ಕಣ್ಮರೆಯಾಗಿದ್ದರಂತೆ.

"ಶರಣರೆಲ್ಲ ಹೊರಗೆ ಹೋಗಿ, ಕೊಂಡೆಯ ಮಂಚಣ್ಣ, ನಾರಣ ಕ್ರಮಿತರ ಸಂತತಿಯಷ್ಟೇ ಉಳಿಯಿತು. ಇದರಿಂದ ಕಲ್ಯಾಣವು ಶಾಪಗ್ರಸ್ತ ಭೂಮಿಯಾಗಿದೆ." ಎಂದು ಜನರು ಮಾತನಾಡುವುದನ್ನು ಕೇಳಿದಾಗಲೆಲ್ಲ ಬಹಳ ನೋವೆನಿಸಿ, ಕರುಳು ಮಿಡಿಯುತ್ತಿತ್ತು.

ದಿ. 13-12-2001ರಂದು ಬಸವ ಕಲ್ಯಾಣದ ಶ್ರೀ ಶಿವಭರತ್‌ಲಾಲ್ ಓರ್ವ ಎಂಬ ಗಣ್ಯರು ಸಾಂದರ್ಭಿಕವಾಗಿ ಮಾತನಾಡುತ್ತ "ಇದು ಶಾಪಗ್ರಸ್ತಭೂಮಿ, ಶರಣರು ಶಾಪಕೊಟ್ಟು ಹೋಗಿದ್ದಾರೆ." ಎಂದುಬಿಟ್ಟರು. ನನಗೆ ಅತೀವ ದುಃಖವಾಯಿತು.

ಪಾವನ ಮೂರ್ತಿ ಬಸವಣ್ಣನವರು, ಅಸಂಖ್ಯಾತ ಶರಣರು ಮೆಟ್ಟಿದ ಶರಣಭೂಮಿ ಕಲ್ಯಾಣವನ್ನು ಶಾಪಗ್ರಸ್ತ ನೆಲೆ ಎಂದರೆ ನನಗೆ ಕಿವಿಯಲ್ಲಿ ಕೂರಲಗು ನೆಟ್ಟಂತಾಗುತ್ತದೆ.

"ಶರಣರು ಎಷ್ಟೇ ನೊಂದರೂ ಶಾಪ ಕೊಡುವವರಲ್ಲ. ಅದೇ ಶರಣರು ಧರ್ಮಪಿತ ಬಸವಣ್ಣನವರು ಕಲ್ಯಾಣವನ್ನು ಬಿಟ್ಟ 780 ವರ್ಷಗಳ ನಂತರ ಬರುತ್ತೇವೆ ಎಂದಿದ್ದಾರೆ. ಆದ್ದರಿಂದ ಈಗ ಜನಗಳ ಬಾಯಿಯಲ್ಲಿ ನೆಲೆಗೊಂಡಿರುವ ಆ ಮಾತನ್ನು ಈಗ ಬದಲಾಯಿಸುವಂತೆ ಅಂದರೆ ಶಾಪ ವಿಮೋಚನೆಯಾಗುವಂತೆ ಮಾಡಬೇಕು. ಶರಣ ಸ್ಮರಣೆ ಮಾಡಿದರೆ ಕಲಂಕ ತೊಡೆದುಹೋಗುತ್ತದೆ. ಬಸವ ಕಲ್ಯಾಣ ಈ 21ನೆಯ ಶತಮಾನದಲ್ಲಿ ಪುನಃ 12ನೆಯ ಶತಮಾನದ ವೈಭವ, ಅರ್ಥವಂತಿಕೆ ಪಡೆಯಲು ಸಾಧ್ಯವಿದೆ. ಅದಕ್ಕಾಗಿ ಬಸವ ಸಂತಾನವಾದ ನಾವು ಸಂಕಲ್ಪತೊಟ್ಟು ದುಡಿಯಬೇಕು" ಎಂದು ಹೇಳಿದೆನು.

ಈ ಹಿನ್ನೆಲೆಯಲ್ಲಿ ಕಲ್ಯಾಣ ಪರ್ವದಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ರೂಪಿಸಬೇಕೆಂದಿದ್ದೇನೆ.

1. ಸಮುದಾಯ ಪ್ರಾರ್ಥನೆ, 2. ಶರಣ ಸಂಸ್ಮರಣೆ

3. ಸಾಮೂಹಿಕ ಇಷ್ಟಲಿಂಗ ಪೂಜೆ. 770 ಜನರಾದರೂ ಕಡ್ಡಾಯವಾಗಿ ಬಿಳಿಯ ಬಟ್ಟೆಯ ಸಮವಸ್ತ್ರ ಉಟ್ಟು ಕಾವಿಯ ಪವಿತ್ರ ವಸ್ತ್ರ ಧರಿಸಿ ಇಷ್ಟಲಿಂಗಾರ್ಚನೆ ಮಾಡಬೇಕು.

4. ವಿಶ್ವವಸು ಸಂವತ್ಸರದ ಚೈತ್ರ ಮಾಸದ ಯುಗಾದಿಯ ಪ್ರತಿಪದೆಯಂದು (ಕ್ರಿ.ಶ. 1184) ಶೂನ್ಯ ಪೀಠವನ್ನು ಅಲ್ಲಮ ಪ್ರಭುಗಳು ಆರೋಹಣ ಮಾಡಿದರು. ಆ ಕಾರ್ಯಕ್ರಮದ ಸಂಸ್ಮರಣೋತ್ಸವ.

5. ಮೆರವಣಿಗೆ - ಪಥ ಸಂಚಲನ.

800 ವರ್ಷಗಳ ದೀರ್ಘ ನಿದ್ರೆ, ಕ್ಲೈಬ್ಯದಿಂದ ಎಚ್ಚೆತ್ತು ಈಗಲಾದರೂ ಶರಣರ ಋಣ ತೀರಿಸೋಣ ಬನ್ನಿರಿ. ಈ ಪವಿತ್ರ ಸೇವೆಯಲ್ಲಿ ತನುಮನಧನಗಳನ್ನು ತೊಡಗಿಸಿ ದುಡಿಯಲು ಬನ್ನಿರಿ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮಪೀಠ,
ಕೂಡಲ ಸಂಗಮ-ಬಸವಕಲ್ಯಾಣ

ವಚನ ಚಿಂತನೆ :

ನಿಷ್ಠಾವಂತಿಕೆ

-ಮಾತಾಜಿ

ಗುರು ನಿಷ್ಠೆ ಲಿಂಗ ನಿಷ್ಠೆ, ಜಂಗಮ ನಿಷ್ಠೆ
ಇಂತೀ ತ್ರಿವಿಧ ನಿಷ್ಠೆಯಲಿ,
ಏಕಾಂಗ ಲಿಂಗನಿಷ್ಠೆ,
ವೀರಧೀರಂಗಲ್ಲದಾಗದು
ಇದು ಸಂಗನಬಸವಣ್ಣನಿಂದ ಬಂದ ಸಂತತಿಗಲ್ಲದಾಗದು
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ
ತ್ರಿಗುಣಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ.

ಇದು ಬಾಹೂರ ಬ್ರಹ್ಮಯ್ಯನೆಂಬ ಓರ್ವ ಶರಣರ ವಚನ. ಇದು 'ನಿಷ್ಠೆ'ಯನ್ನು ಒತ್ತಿ ಒತ್ತಿ ಹೇಳುತ್ತದೆ. ನಿಷ್ಠೆ ಎಂದರೆ ನಿಯತ್ತು, ವಿಶಿಷ್ಟ ತತ್ತ್ವಕ್ಕೆ ಬದ್ಧನಾಗಿರುವುದು Loyalty ಎಂಬ ಇಂಗ್ಲೀಷ್ ಪದವನ್ನು ಸಮಾನಾಂತರವಾಗಿ ಸೂಚಿಸಬಹುದು. ಈ ನಿಷ್ಠೆಯು "ಸಂಗನ ಬಸವಣ್ಣನಿಂದ ಬಂದ ಸಂತತಿಗಲ್ಲದಾಗದು" ಎಂದು ನೂರಕ್ಕೆ ನೂರು ಆತ್ಮವಿಶ್ವಾಸದಿಂದ ಹೇಳಿದ ಬಾಹೂರ ಬ್ರಹ್ಮಯ್ಯ ನಮಗೆಲ್ಲ ಅಂದರೆ ಬಸವ ಪಥಿಕರು ಯಾರೇ ಇರಲಿ ಅವರಿಗೆ ಒಂದು ಎಚ್ಚರಿಕೆಯ ಸೂಚನಾಫಲಕ ತೋರಿದ್ದಾರೆ. ಇದಕ್ಕೆ ವಿರುದ್ಧವಾದುದು 'ವೇಶ್ಯೆ'ಯ ಮನೋಭಾವ, ಅಂದರೆ ಯಾರಿಗೂ ಬದ್ಧವಾಗಿಲ್ಲದೆ ಹಣಕ್ಕಾಗಿ ಬದುಕುವುದು. ಪತಿವ್ರತೆ ಬಡತನವಿರಲಿ-ಸಿರಿತನವಿರಲಿ ಗಂಡನಿಗೆ ನಿಷ್ಠಳಾಗಿ ಇರುತ್ತಾಳೆ.

ಅದೇ ರೀತಿ ಶರಣ ಮಾರ್ಗಿಯಾದವನು ಗುರು-ಬಸವ ನಿಷ್ಠೆ, ಏಕ (ಇಷ್ಟ) ಲಿಂಗ ನಿಷ್ಠೆ, ಜಂಗಮ ನಿಷ್ಠೆ ಅಳವಡಿಸಿಕೊಳ್ಳಬೇಕು. ಇದನ್ನು ಧರ್ಮಪಿತರು ಕಲಿಸಿದ್ದಾರೆ. ಇದನ್ನು ಅನ್ವಯಿಸಿ ನೋಡೋಣ.

1. ಗುರು ಬಸವ ನಿಷ್ಠೆ

ನಮ್ಮ ವಿರುದ್ಧ ಅಪಪ್ರಚಾರ ಮಾಡಲು ಅನೇಕ ಅಸ್ತ್ರಗಳನ್ನು ಜಾತಿವಾದಿ ಸ್ವಾಮಿಗಳು ಪ್ರಯೋಗಿಸುತ್ತಾರೆ. ಅದರಲ್ಲಿ ಒಂದು 'ಲಿಂಗದೇವ'- ವಚನಾಂಕಿತ ಇನ್ನೊಂದು ನಾವು ಜಂಗಮ ವಿರೋಧಿಗಳು ಎಂದು, ಜಾತಿ ಜಂಗಮರನ್ನು ಎತ್ತಿ ಕಟ್ಟಲು ಹೀಗೆ ಮಾಡುತ್ತಾರೆ.

ನಾವು ತತ್ತ್ವ ಜಂಗಮರ ವಿರೋಧಿಗಳಲ್ಲ, ಪ್ರೋತ್ಸಾಹಕರು. ಜಾತಿ ಜಂಗಮರ ವಿರೋಧಿಗಳೂ ಅಲ್ಲ, ಅವರ ಬಗ್ಗೆ ಅನುಕಂಪ ಉಳ್ಳವರು.

ಅ. "ಜಂಗಮ" ಎನ್ನುವುದು ಅತ್ಯಂತ ಮಹತ್ವಪೂರ್ಣ, ಕ್ರಾಂತಿಕಾರಿ ತತ್ತ್ವ ಬಸವಣ್ಣನವರ ಸಮಗ್ರ ಕ್ರಾಂತಿಯ ಸಚೇತಕ ಶಕ್ತಿಯೇ ಜಂಗಮ. ಅವನು ತಿರುಕನಲ್ಲ, ಹೊಟ್ಟೆಯ ಪಾಡಿಗೆ ಪಿಟ್ಟು ಬೇಡುವವನಲ್ಲ.

ತಿರುಕರೆನ್ನದಿರಿಂ ಭೋ ಎನ್ನ ತಂದೆಗಳನು, ತಿರುಕರೆನ್ನದಿರಿಂ ಭೋ ಎನ್ನ ಬಂಧುಗಳನು
ತಿರುಕರೆನ್ನದಿರಿಂ ಭೋ ಎನ್ನ ದೇವರನು, ತಿರುಕರೆನ್ನದಿರಿಂ ಭೋ ಎನ್ನ ಒಡೆಯರನು
ದೇಹಿ ಎಂದಡೆ ನಾಸ್ತಿ ಎಂಬವರ ಬೇಹು, ನೋಡಬಂದ ಕಾಣಾ, ಲಿಂಗದೇವ.

Digitalized by e-Sahithya Documentation Forum
Sponsored by arayu Foundation Trust

ಎನ್ನುತ್ತಾರೆ ಧರ್ಮಪಿತರು. ಅವರು ಅಂದರೆ ಜಂಗಮರು ''ಒಡೆಯರಂತೆ'' ಅಂದರೆ ಸಮಾಜದ ಯಜಮಾನರು, ನೀತಿ ನಿರ್ಣಾಯಕರು, ಶಾಸನ ಮಾಡುವವರು, ಸಮಾಜದ ಹಿತಚಿಂತಕರು. ಭಕ್ತರಿಗೆ ತತ್ವ ಹೇಳುವುದಷ್ಟೇ ಅಲ್ಲ. ಕಷ್ಟಸುಖಗಳಲ್ಲಿ ಪಾಲ್ಗೊಳ್ಳುವ ಹಿತಚಿಂತಕರು, ಪಾವನಾತ್ಮರು (Holy souls). ಇಂಥ ಜಂಗಮರನ್ನು ನಾವು ವಿರೋಧಿಸಲುಂಟೆ ?

ಈ ತತ್ವದ ಏಳ್ಗೆಗಾಗಿಯೇ ನಾವು ಶ್ರಮಿಸುತ್ತಿರುವುದು. ಇಂಥವರ ಸಂಖ್ಯೆ ಜಾಸ್ತಿಯಾಗಬೇಕೆಂದೇ ನಾವು ಕನಸು ಕಾಣುತ್ತಿರುವುದು.

ಆ) ಇನ್ನು ಜಂಗಮತ್ವವನ್ನು ಜಾತಿ ಎಂದು ವಿಕೃತಗೊಳಿಸಲಾಗಿದೆ. ಇದೂ ಕೂಡ ಸಮಾಜದ ಅನಿವಾರ್ಯತೆಯಿಂದಲೇ ಆರಂಭದಲ್ಲಿ ಆಗಿರಬಹುದು. ಜಂಗಮತ್ವ ಹುಟ್ಟಿನಿಂದ ಬರದು, ಜಂಗಮನ ಮಗ ಜಂಗಮನಲ್ಲ. ಅರ್ಹತೆಯಿಂದ ಯಾವನೇ ಆಗಲಿ ಜಂಗಮನಾಗಬೇಕು. ಆದರೆ ಈ ಆದರ್ಶವು ಅಸಾಧ್ಯವಾಗಿ ತತ್ವಜಂಗಮರ ಸಂಖ್ಯೆ ಕಡಿಮೆಯಾದಾಗ ಧಾರ್ಮಿಕ ವಿಧಿ-ವಿಧಾನ ನೆರವೇರಿಸಲು ಜಾತಿ ಜಂಗಮತ್ವ ರೂಢಿಗೆ ಬಂದಿರಬಹುದು. ಯಾವುದೇ ಸೂಕ್ತ ತರಬೇತಿ ಇಲ್ಲದಿದ್ದರೂ ಆತನನ್ನು ಜಂಗಮನನ್ನಾಗಿ ಭಾವಿಸುವ ಸಂಪ್ರದಾಯ ಅನಿವಾರ್ಯವಾಗಿ ಆರಂಭವಾಗಿರಬಹುದು. ಇದಕ್ಕೂ ನಾವು ಅಂಕ(marks)ಗಳನ್ನು ಕೊಡೋಣ. ಉಳಿದೆಲ್ಲ ಭಕ್ತರು ಹೊಲ, ಮನೆ, ತೋಟ ವ್ಯಾಪಾರಗಳಲ್ಲಿ ತಲ್ಲೀನರಾಗಿ ಧನ ಸಂಪಾದನೆಯಲ್ಲಿ ನಿರತರಾದಾಗ ಇಂಥ ಜಂಗಮರು ಪೌರೋಹಿತ್ಯವನ್ನು ಅದರ ಫಲವಾಗಿ ಬಡತನವನ್ನು ಆಶ್ರಯಿಸಿಕೊಂಡುದು ನಮ್ಮ ಅನುಕಂಪವನ್ನು ಪಡೆಯಲರ್ಹವಾಗಿದೆ.

ಆದರೆ ನಮ್ಮ ಆಕ್ಷೇಪ ಅವರನ್ನು ಕುರಿತು ಹೀಗಿದೆ. 1. ಸಮಾಜದ ಹಿತರಕ್ಷಣೆಗಾಗಿ ಜಂಗಮ ಎಂಬ ವ್ಯವಸ್ಥೆಯನ್ನು ಹುಟ್ಟುಹಾಕಿದವರೇ ಧರ್ಮಪಿತ ಬಸವಣ್ಣನವರು. ಆದರೆ ಶಿವಯೋಗ ಮಂದಿರದ ಸ್ಥಾಪನೆಯ ನಂತರ ಜಂಗಮವು ಜಾತಿಯಾಗಿ ವಿಕೃತಗೊಳ್ಳುತ್ತ ಬಂದಂತೆ ಕೆಲವು ಸ್ವಾಮಿಗಳನ್ನು ಅವರ ಅನುಯಾಯಿಗಳನ್ನು ಬಿಟ್ಟು ಬಹುಪಾಲು ಸ್ವಾಮಿಗಳು ಅವರ ಅನುಯಾಯಿಗಳು ಕೆಲವರು ಬಸವ ವಿರೋಧಿಗಳಾದರೆ ಮತ್ತೆ ಕೆಲವರು ಬಸವಣ್ಣನವರ ಸ್ಥಾನವನ್ನು ಜನಮನದಲ್ಲಿ ಕೆಳಗಿಳಿಸಿ ತಮ್ಮ ಮಠದ ಮೂಲ ಕರ್ತೃಗಳನ್ನು ವೈಭವಿಸಲು ತೊಡಗಿದುದು.

2. ಧಾರ್ಮಿಕ ವಿಧಿ-ವಿಧಾನಗಳನ್ನು ಮಾಡುವ ತರಬೇತಿ ಇಲ್ಲದೆ ವಚನ ಸಾಹಿತ್ಯವನ್ನು ಓದುವ ಅಭ್ಯಾಸ ರೂಢಿಸಿಕೊಳ್ಳದೆ ಪೂರ್ಣ ಅಜ್ಞಾನದಲ್ಲೇ ಉಳಿದು ಕೇವಲ ಹುಟ್ಟಿನ ಕಾರಣದಿಂದ ಶ್ರೇಷ್ಠತೆ ಪಡೆದು ತಪ್ಪು ತಪ್ಪಾಗಿ ಧಾರ್ಮಿಕ ವಿಧಿಗಳನ್ನು ನೆರವೇರಿಸುವುದು.

3. ಲಿಂಗಾಯತ ಧರ್ಮದ ಸಾರ ಗುರು-ಲಿಂಗ-ಜಂಗಮ; ಗುರು-ಬಸವಣ್ಣ, ಲಿಂಗ-ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ, ಜಂಗಮ-ಬಸವ ಪಥಿಕರಾದ ತ್ಯಾಗಿಗಳು, ಯೋಗಿಗಳು. ಈ ಮೂರರ ಹೊರತು ಅನ್ಯ ಉಪಾಸ್ಯ ವಸ್ತುಗಳನ್ನು ಲಿಂಗಾಯತರು ಆರಾಧಿಸಬಾರದು. ಇವನ್ನು ಆಶ್ರಯಿಸಿದರೆ ಹೆಚ್ಚಿನ ಹಣ ಸಂಪಾದನೆಯಾಗದು ಎಂದು ಬಗೆಬಗೆಯ ಪೂಜೆಗಳಿಂದ ಹಣವನ್ನು ಸಂಪಾದಿಸಲು ಲಿಂಗಾಯತ ಜಂಗಮರು ಸಹ

ಹೋಮ-ಹವನ, ಗಣಪತಿ, ನವಗ್ರಹ, ಸತ್ಯನಾರಾಯಣ, ವರದಾ ಶಂಕರ, ಸಂಕಷ್ಟಿ ಇತ್ಯಾದಿ ವಚನ ವಾಙ್ಮಯ ವಿರೋಧಿ ಆಚರಣೆಗಳನ್ನು ಜನರಲ್ಲಿ ಬೆಳೆಸತೊಡಗಿದುದು.

4. ಶರಣರು ಸ್ಪಷ್ಟವಾಗಿ ಹೇಳಿದ್ದಾರೆ. ನಮಗೆ ಬಸವಣ್ಣನು ನುಡಿದುದೇ ವೇದ, ನಡೆದುದೇ ಮಾರ್ಗ ಎಂದು. ವಚನ ವಾಙ್ಮಯವೇ ಲಿಂಗಾಯತ ಧರ್ಮದ ವಿಧಿವಿಧಾನ, ಎಲ್ಲ ವಿಷಯ ಕುರಿತು ಮಾರ್ಗದರ್ಶನ ಮಾಡುವ ಕೈದೀವಿಗೆ. ಅದರ ಅವಲಂಬನೆ ಬಿಟ್ಟು ಪುನಃ ಲಿಂಗಾಯತ ಮಠಾಧೀಶರು ಶಾಸ್ತ್ರಿ-ಪುರೋಹಿತರು ಪುನಃ ಕಾಶಿಗೆ ಹೋಗಿ ವೈದಿಕ-ಆಗಮಿಕ ತರಬೇತಿ ಹೊಂದಿದುದಲ್ಲದೆ, ತಮ್ಮ ತಮ್ಮ ಮಠಗಳಲ್ಲೇ ವೇದಾಗಮ ಪಾಠಶಾಲೆ ತೆರೆದು ಲಿಂಗಾಯತ ಸಮಾಜಕ್ಕೆ ವೈದಿಕ-ಆಗಮಿಕ ಶೈಲಿಯ ಪೂಜೆಗಳನ್ನು ಹೊಸದಾಗಿ ಕಲಿಸಿ, ಸಮಾಜವನ್ನು ದಾರಿತಪ್ಪಿಸುವ ಕೆಲಸ ಮಾಡಿದರು.

ಆದಿ ಶರಣರು ಸೈದ್ಧಾಂತಿಕ ಸೂತ್ರಗಳನ್ನಲ್ಲದೆ ವೈಧಾನಿಕ ಸೂತ್ರಗಳನ್ನು ಸಹ ವಚನಗಳ ಮೂಲಕ ಹೇಳಿದರು. ಅವುಗಳನ್ನು ಕ್ರೋಢೀಕರಿಸುವ ಕಾರ್ಯ ಇನ್ನೂ ಪೂರ್ಣಗೊಳ್ಳದಿರು-ವಾಗಲೇ ಕಲ್ಯಾಣ ಕ್ರಾಂತಿಯಾಯಿತು ; ಸಮಾಜವು ಅಪ್ಪ ಬಸವಣ್ಣನನ್ನು ತಾಯಿ ವಚನ ಸಾಹಿತ್ಯವನ್ನು ಕಳೆದುಕೊಂಡು ಅನಾಥವಾಯಿತು. ಆದರೆ 800 ವರ್ಷಗಳ ಅವಧಿಯಲ್ಲಿ ಕಳೆದಿದ್ದ ಕೊಂಡಿ (missing links) ಗಳನ್ನು ಹಾಕುವ ಕೆಲಸವನ್ನು ಪ್ರಾಜ್ಞರಾದವರು ಮಾಡಬಹುದಿತ್ತು. ಆ ರೀತಿ ಕ್ರೈಸ್ತ, ಬೌದ್ಧ, ಜೈನ ಧರ್ಮಗಳಲ್ಲಿ ಪ್ರಯೋಗ ಮಾಡಲಾಯಿತು. ಏಸುಕ್ರಿಸ್ತ ಮುಗ್ಧ ಪ್ರವಾದಿ ; ಆತ ಕೊಟ್ಟುದು ಸ್ವಲ್ಪ ಆದರೆ ನಂತರ ಆ ಧರ್ಮದ ತ್ಯಾಗಿಗಳು ಏಸುವಿನಲ್ಲಿನ ಶ್ರದ್ಧೆಯನ್ನೇ ನ್ಯೂಕ್ಲಿಯಸ್ಸಾಗಿ ಇಟ್ಟುಕೊಂಡು ಬೆಳೆಸಿದ್ದು ಅಪಾರ. ಆದರೆ ಇಲ್ಲಿ ನಡೆದುದೇ ತದ್ವಿರುದ್ಧವಾದ ಕೆಲಸ. ಬಸವಣ್ಣನವರು ಅವರ ಸಮಕಾಲೀನರು ಕೊಟ್ಟುದು ಅಪಾರ, ಅದ್ಭುತ. ಅದೆಲ್ಲವನ್ನೂ ಗೌಣವಾಗಿಸಿ ಲಿಂಗಾಯತ ಧರ್ಮಕ್ಕೆ ವಿರುದ್ಧವಾದ ನಂಬಿಕೆ-ಆಚರಣೆಗಳನ್ನು ಸೇರ್ಪಡೆ ಮಾಡಲಾಯಿತು. ಏಕೆ ಹೀಗಾಯಿತು ? ಎಂದು ನಾನು ಆಲೋಚಿಸುವಾಗ ''ನಮ್ಮಲ್ಲಿ ಮೇಧಾವಿಗಳು ಇರಲಿಲ್ಲವೆ ? ಜ್ಞಾನಿಗಳು ಇರಲಿಲ್ಲವೆ ? ಏಕೆ ಈ ಆಚಾರಾತ್ಮಕ ಕೊರತೆ ಪೂರೈಸಲಿಲ್ಲ.'' ಎಂದು ಅಚ್ಚರಿ ಎನಿಸುತ್ತದೆ. ಈ ದಿಶೆಯಲ್ಲಿ ಪೂಜ್ಯ ಲಿಂಗೈಕ್ಯ ಲಿಂಗಾನಂದ ಅಪ್ಪಾಜಿಯವರು ಸತತವಾಗಿ ಚಿಂತಿಸಿ ಅಚ್ಚ ಕನ್ನಡದಲ್ಲಿ *ದೇವ(ಲಿಂಗ)ಪೂಜಾ ವಿಧಾನ* ಬರೆದರು. ನಂತರ ನಾನು ಬಸವೇಶ್ವರ ಪೂಜಾವ್ರತ, ಬಸವ ಧರ್ಮ ಸಂಸ್ಕಾರ ಕೃತಿಗಳನ್ನು ಪೂಜ್ಯರ ಒತ್ತಾಯದ ಮೇರೆಗೆ ರಚಿಸಿದೆ.

ಆದ್ದರಿಂದ ಜಾತಿ ಜಂಗಮತ್ವದಲ್ಲಿ ವಿಶ್ವಾಸವಿಟ್ಟವರೇ ಇರಲಿ, ಶರಣ ಪಥಿಕರೇ ಇರಲಿ ವಚನ ವಾಙ್ಮಯದ ಪ್ರಕಾರ ಧಾರ್ಮಿಕ ಕ್ರಿಯೆಗಳನ್ನು ಮಾಡುವುದಾದರೆ ನಮ್ಮದೇನೂ ವಿರೋಧವಿಲ್ಲ. ಅವರಿಂದ ನಾವು ನಿರೀಕ್ಷಿಸುವುದು ಗುರುನಿಷ್ಠೆ, ಲಿಂಗನಿಷ್ಠೆ, ಜಂಗಮನಿಷ್ಠೆ ಮಾತ್ರ. ತಾವು ಶರಣ ಪರಂಪರೆಯವರು ಎಂಬ ದೃಢಭಕ್ತಿ ಬೆಳೆಸಿಕೊಂಡರೆ ಸಾಕು. ಹಣದ ಆಸೆಗಾಗಿಯೇ ಬಸವ ಪಥದಿಂದ ದೂರಸರಿದರೆ ಅವರೆಷ್ಟೇ ದೊಡ್ಡವರಿದ್ದರೂ ಧರ್ಮದ್ರೋಹ, ಗುರುದ್ರೋಹ ಮಾಡಿದಂತೆಯೇ ಸರಿ. ■

Digitalized by e-Sahithya Documentation Forum
Sponsored by arayu Foundation Trust

ಸಮಸ್ಯೆ ?- ಸಮಾಧಾನ !

ಕೃಷ್ಣಪ್ಪ ಭರಮಪ್ಪ ಮುಸಳೆ, ಗಡಹಿಂಗ್ಲಾಜ್.- ಮಾತಾಜಿ ಏನೇನೋ ಗೋಟಾಳೆ(ಗೊಂದಲ) ಮಾಡುತ್ತಾರೆ. ಬಸವಣ್ಣನವರಿಗೆ ಇಬ್ಬರು ಪತ್ನಿಯರು ಗಂಗಾಂಬಿಕೆ, ನೀಲಾಂಬಿಕೆ ಎಂದು ಇಷ್ಟು ದಿನ ತಿಳಿದಿದ್ದೆವು. ಅವರೂ ಕ್ರಾಂತಿಯೋಗಿ ಬಸವಣ್ಣ ಸಿನಿಮಾದಲ್ಲಿ ಇಬ್ಬರನ್ನು ಚಿತ್ರಿಸಿದ್ದಾರೆ. ಈಗ ನೋಡಿದರೆ ಒಬ್ಬಳೇ ಹೆಂಡತಿ ಎನ್ನುತ್ತಾರೆ. ಇಷ್ಟು ದಿನದ ನಂಬಿಕೆಯನ್ನು ಕೈಬಿಡಲು ನಮಗೆ ಆಗುವುದಿಲ್ಲ. ಮಾತಾಜಿಯವರು ಸುಮ್ಮನೆ ಏಕಿರುವುದಿಲ್ಲ?'' ಎಂದು ನಮ್ಮೂರಲ್ಲಿ ಕೆಲವರ ಆಕ್ಷೇಪ ! ಇದಕ್ಕೆ ನಿಮ್ಮ ಉತ್ತರವೇನು ?

★ ನಮ್ಮ ಸಮಾಜ ಎಂಥಾ ಮೂಢ ಸ್ಥಿತಿಯಲ್ಲಿದೆ ಎಂದರೆ ಒಮ್ಮೊಮ್ಮೆ ಸಿಟ್ಟು ಬರುತ್ತದೆ; ಇನ್ನೊಮ್ಮೆ ಮರುಕವಾಗುತ್ತದೆ. ಬುದ್ಧ-ಮಹಾವೀರ ಆಗಿ ಹೋಗಿ ಸುಮಾರು 2500 ವರ್ಷ, ಏಸು ಆಗಿ ಹೋಗಿ 2000 ವರ್ಷ, ಮೊಹಮ್ಮದರು ಆಗಿ ಹೋಗಿ 1400 ವರ್ಷ. ಆದರೆ ಅವರ ಐತಿಹಾಸಿಕ ಜೀವನವನ್ನು ಅನುಯಾಯಿಗಳು ಅತ್ಯಂತ ನಿಖರವಾಗಿ ಕ್ರೋಢೀಕರಿಸಿದ್ದಾರೆ. ಮೂರ್ಖ ಲಿಂಗಾಯತರಿಗೆ ತಮ್ಮ ಧರ್ಮಗುರುವಿನ, ತಮ್ಮ ಧರ್ಮದ ಇತಿಹಾಸವೇ ಗೊತ್ತಿಲ್ಲ. ಬಾಯಿಗೆ ಬಂದಂತೆ ತಾವೇ ಹರಟುತ್ತಾರೆ. ಅಂದಾಗ ಡಾ|| ಪಿ.ವಿ. ನಾರಾಯಣರಂಥವರು ಏಕೆ ಶರಣರ ಅವಹೇಳನ ಮಾಡದೆ ಇರುತ್ತಾರೆ ? ಆದ್ದರಿಂದ ಧರ್ಮಪಿತ ಬಸವಣ್ಣನವರ ಹುಟ್ಟು-ತಾಯಿ-ತಂದೆಯಿಂದ ಹಿಡಿದು ಒಂದೊಂದು ಅಂಶಗಳನ್ನು ಗುರುತಿಸಿ ಖಚಿತಪಡಿಸಿ ಆಧಾರ ಸಹಿತವಾಗಿ ನಾನು ಪ್ರತಿಪಾದಿಸುವುದನ್ನು ಕಂಡು ತಿಳಿದು ಸಂತೋಷಿಸಲು ಸಹಿತ ಬಂದಷ್ಟು ಲಿಂಗಾಯತರು ಉಳ್ಳಾಗಡ್ಡೆ ತಲೆಯ ಜನರು ''ಲಿಂಗದೇವ''ದಂತಹ ತಾತ್ವಿಕ, ದಾರ್ಶನಿಕ ಪರಿಕಲ್ಪನೆ ಅರ್ಥವಾಗಲು ಆಳವಾದ ಅಧ್ಯಯನ, ಸೂಕ್ಷ್ಮ ಚಿಂತನೆ ಬೇಕು. ಇಷ್ಟು ಆಳ ಇಲ್ಲದಿದ್ದರಷ್ಟೆ ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ ಎಂಬ ಸಾಮಾನ್ಯ ವಿಷಯವನ್ನು ಸಾಧಾರಪೂರ್ವಕವಾಗಿ ತಿಳಿಸಿದರೂ ತಿಳಿಯಲಾರದಷ್ಟು ದಡ್ಡರಾದರೆ ಇನ್ನು ಏನು ಮಾಡಬೇಕು?

ಯೋಗಿರಾಜ ಶಿವನಿಗೆ ಇದ್ದುದು ಮೊದಲು ದಾಕ್ಷಾಯಿಣಿ ಎಂಬ ಪತ್ನಿ; ಆಕೆ ಸುಟ್ಟುಕೊಂಡು ತೀರಿಕೊಂಡನಂತರ ಪಾರ್ವತಿಯನ್ನು ವಿವಾಹವಾದನು. ಪಾರ್ವತಿಗೇ ಗಿರಿಜೆ, ಶಿವೆ ಎಂಬ ಅನ್ವರ್ಥಕನಾಮವಿದೆ. 'ಗಂಗೆ' ಕಾಲ್ಪನಿಕ ವ್ಯಕ್ತಿ. ನೀರ್ಗಲ್ಲು, ಹಿಮಗಡ್ಡೆಗಳಿಂದ ಆಚ್ಛಾದಿತವಾದ ಬೆಳ್ಳಿಯ ಬೆಟ್ಟ ಕೈಲಾಸದಲ್ಲಿ ಇರುತ್ತಿದ್ದ ಶಿವನ ಹಿಂದೆ ಕಾಣುತ್ತಿದ್ದ ಹಿಮಪರ್ವತ ಶೃಂಗಗಳನ್ನು ಕಂಡ ಕವಿ ಗಂಗಾಧರ ಎಂದು ಶಿವನನ್ನು ಬಣ್ಣಿಸಿದ. ಆದರೆ ಮೂಢರು ಶಿವನ ತಲೆಯ ಮೇಲೆ ಗಂಗೆ ಎಂದು ಹೆಣ್ಣಿನ ಮುಖ ಇಟ್ಟುದಲ್ಲದೆ, ಅಧಿಕೃತ ಪತ್ನಿ ಪಾರ್ವತಿ, ಅನಧಿಕೃತ ಪ್ರೇಯಸಿ 'ಗಂಗೆ' ಎಂದು ಕಾಲ್ಪನಿಕ ಕಥೆ ಕಟ್ಟಿ ಭಾರತೀಯ ಪರಂಪರೆಯ ಮೂಲ ಪುರುಷ ಮಹಾನ್ ಯೋಗಿ ಶಿವನ ವ್ಯಕ್ತಿತ್ವಕ್ಕೆ ಚ್ಯುತಿ ತರಲಾಗಿದೆ. ಅದೇ ರೀತಿ ಆದರ್ಶ ಮೂರ್ತಿ ಬಸವಣ್ಣನವರಿಗೆ ಇದ್ದುದು ಒಬ್ಬಳೇ ಪತ್ನಿ ನೀಲಗಂಗಾ; ಸೋದರ ಮಾವನ ಮಗಳು. ಕಾಲಾನಂತರ ಕಾವ್ಯ ಬರೆದ ಕವಿಗಳು ನೀಲಮ್ಮ, ಗಂಗಮ್ಮ ಎಂದು ತಪ್ಪು ಭಾವಿಸಿ ಇಬ್ಬರನ್ನು

ಸೃಷ್ಟಿಮಾಡಿದರು. ಮೊದಲ ಪತ್ನಿ ಇದ್ದಾಗ ಎರಡನೆಯ ವಿವಾಹ ಏಕಾದರು ಎಂಬ ಸಂದೇಹ ಎಲ್ಲರನ್ನು ಕಾಡುತ್ತಿತ್ತು. ಮೊಹಮ್ಮದರು ಅಲ್ಲಿಯ ಸಂಸ್ಕೃತಿಗೆ ಅನುಗುಣವಾಗಿ ಹಲವಾರು ಪತ್ನಿಯರನ್ನು ಹೊಂದಿದ್ದರು. ಆದರೆ ಭಾರತೀಯರ ಆದರ್ಶ ಸ್ತ್ರೀಗೆ ಪಾತಿವ್ರತ್ಯ ಪುರುಷನಿಗೆ ಏಕಪತ್ನಿ ವ್ರತ. ಹೀಗಿದ್ದಾಗ ಕಾಲ್ಪನಿಕ ಪಾತ್ರ ಸೃಷ್ಟಿಸಿದ ಕವಿಗಳ ಅಜ್ಞಾನವನ್ನು ಬಯಲು ಮಾಡುವುದು ತಪ್ಪೇ ? ನಮ್ಮ ಸಂಶೋಧನೆಗೆ ನಿಜಕ್ಕೂ ಅಭಿನಂದಿಸಬೇಕು.

ಶಿವಲಿಂಗಸ್ವಾಮಿ, ಹುಲ್ಸೂರು, ಬಸವ ಕಲ್ಯಾಣ ತಾಲ್ಲೋಕು.- 'ಲಿಂಗದೇವ' ವಚನಾಂಕಿತವು ಬಸವ ಸಿದ್ಧಾಂತಕ್ಕೆ ಅತ್ಯಂತ ಸೂಕ್ತವಾದ ದೇವ ನಿರ್ದೇಶಕ ಪದ ಎಂದು ಬಹಳ ಜನರಿಗೆ ಮನವರಿಕೆಯಾಗಿ ಅಂತರಂಗದಲ್ಲಿ ನಿಮ್ಮ ಸಂಶೋಧನೆಗೆ ಬೆರಗಾಗಿದ್ದಾರೆ. ಆದರೆ ಎಂಥ ಸತ್ಯವನ್ನು ಬೆಳಕಿಗೆ ತಂದ ಕೀರ್ತಿ ನಿಮ್ಮ ಪಾಲಿಗೆ ಬಂದಿತಲ್ಲ ಎಂದು ಒಳಗೊಳಗೇ ಮತ್ಸರಿಸುತ್ತಿದ್ದಾರೆ. ಅದಕ್ಕಾಗಿ ಹೊರಗೆ ನಿಮ್ಮನ್ನು ವಿರೋಧಿಸುತ್ತಾರೆ.

★ ಯಾರು ವಿರೋಧಿಸಲಿ ಬಿಡಲಿ, ಮೆಚ್ಚಿಕೊಳ್ಳಲಿ ಮೆಚ್ಚಿಕೊಳ್ಳದಿರಲಿ, ಸತ್ಯವನ್ನು ಹೇಳುವುದು ನಮ್ಮ ಕೆಲಸ. ಜಗತ್ತು ಇಂದಲ್ಲ ನಾಳೆಯಾದರೂ ಅರ್ಥ ಮಾಡಿಕೊಂಡೀತು. ಮತ್ಸರಿಸುವವರು ಮಾತ್ರವಲ್ಲ ಸ್ಥಾವರಲಿಂಗದ ಮೋಹ, ಬಹುದೇವತೋಪಾಸನೆ, ವೀರಶೈವದ ಮೋಹ ಇರುವವರಿಗೂ ಏಕದೇವೋಪಾಸನೆಗೆ ಒತ್ತುಕೊಡುವ 'ಲಿಂಗದೇವ'ನ ಬಗ್ಗೆ ಅಲರ್ಜಿ. ಕೆಲವರು ಸತ್ಯವನ್ನು ಗ್ರಹಿಸಿಕೊಳ್ಳುವ ತೀಕ್ಷ್ಣಮತಿಗಳು ಆಗಿರುತ್ತಾರೆ.- 1000 ಕ್ಯಾಂಡಲ್ ಬಲ್ಬಿನಂತೆ, ಇನ್ನು ಕೆಲವರು ನಿಧಾನವಾಗಿ ಗ್ರಹಿಸುತ್ತಾರೆ; ಅಂತೂ ಗ್ರಹಿಸಲು ಸಮರ್ಥರಾಗಿರುತ್ತಾರೆ ಟ್ಯೂಬ್ ಲೈಟಿನಂತೆ, ಆದರೆ ಮತ್ತೆ ಕೆಲವರು ಒಟ್ಟು ಸತ್ಯವನ್ನು ಗ್ರಹಿಸಲೇ ಆರರು ತಂತಿ ಸುಟ್ಟ ಬಲ್ಬಿನಂತೆ. ಆದರೆ ಇಂಥವರ ಸಲುವಾಗಿ ಸತ್ಯವನ್ನು ಹೇಳುವುದನ್ನು ಬಿಡಲು ಆಗುವುದೆ ?

ನಾಗಶೆಟ್ಟಿ ಶೆಟಕಾರ್, ಬೀದರ್.- ದಿನಾಂಕ 11 ರಂದು ಭಾತಂಬ್ರಾ ಸ್ವಾಮಿಗಳು, ಹುಲ್ಸೂರು ಸ್ವಾಮಿಗಳು ಮುಂತಾದವರು ಬೀದರ್ ಡಿ.ಸಿ.ಗೆ ಮನವಿಯನ್ನು ಕೊಟ್ಟಿದ್ದಾರೆ. ಬಸವ ಕಲ್ಯಾಣದಲ್ಲಿ ನಿಮಗೆ ನೆಲೆಸಲು ಬಿಡಬಾರದೆಂದು, ನೀವು ಖರೀದಿಸಿರುವ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಮನವಿಯಲ್ಲಿ ಕೋರಿದ್ದಾರಂತೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ?

★ ಇವರ ಅದ್ಭುತವಾದ ಕಾನೂನು ಜ್ಞಾನವನ್ನು ನೋಡಿದರೆ ಸಂವಿಧಾನ ವಿಮರ್ಶೆ ಮಾಡಲು ಒಂದು ಸಮಿತಿ ಮಾಡಿ ಇವರಿಗೆ ಅದರ ಸದಸ್ಯತ್ವ ನೀಡುವುದು ಉಚಿತವೆನಿಸುತ್ತದೆ. ಕಾಶ್ಮೀರವನ್ನು ಬಿಟ್ಟರೆ (ಅಲ್ಲಿ ಭಾರತದ ರಾಷ್ಟ್ರಾಧ್ಯಕ್ಷರು ಸಹ ಭೂಮಿ ಹೊಂದಲಾರರು) ಇಡೀ ಭಾರತದಲ್ಲಿ ಭಾರತೀಯ ಪ್ರಜೆಯು ಎಲ್ಲಿ ಬೇಕಾದರೂ ಜಮೀನು ಖರೀದಿಸಬಹುದು, ನೆಲೆಸಬಹುದು. ಅದನ್ನು ತಡೆಗಟ್ಟಲು ರಾಷ್ಟ್ರಾಧ್ಯಕ್ಷ, ಪ್ರಧಾನಿಗೆ ಸಹ ಸಾಧ್ಯವಿಲ್ಲ ; ಇನ್ನು ಜಿಲ್ಲಾಧಿಕಾರಿ ಏನು ಮಾಡಬಲ್ಲರು ? ಅಂಥ ಹಕ್ಕುಗಳನ್ನು ಭಾರತೀಯ ಸಂವಿಧಾನ ತನ್ನ ನಾಗರೀಕರಿಗೆ ಕೊಡಮಾಡಿದೆ. ಕಾನೂನಿನ ಚೌಕಟ್ಟು ಹೊರತು ಪಡಿಸಿ ಇನ್ನಿತರರ ಜಮೀನನ್ನು

Digitalized by e-Sahithya Documentation Forum
Sponsored by arayu Foundation Trust

ಸರ್ಕಾರವಾಗಲಿ, ಅಧಿಕಾರಿಗಳಾಗಲಿ ಮುಟ್ಟುಗೋಲು ಹಾಕಿಕೊಳ್ಳಲು ಸಾಧ್ಯವೆ ? ಪಾಪ, ಸ್ವಾಮಿಗಳು ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಳ್ಳುವಂತೆ ತಮ್ಮ ಕಾನೂನು ಕುರಿತು ಅಜ್ಞಾನ, ನಮ್ಮ ಬಗ್ಗೆ ಮತ್ಸರ ಇವನ್ನು ಹೊರಹಾಕಿ ಜನರ ಕಣ್ಣನಲ್ಲಿ ನೆಲಕಚ್ಚಿದರು ಅಷ್ಟೆ.
ಅದಿರಲಿ, ಈ ಪುರುಷ ಸ್ವಾಮಿಗಳಿಗೆ ಹೆಣ್ಣುಮಕ್ಕಳು ಗುರುಗಳು ಮಾಡುವ ಕಾರ್ಯವಿಸ್ತಾರ ಕಂಡು ಏಕಿಷ್ಟು ಅಸಹನೆ ? ಮತ್ಸರವೋ ಅಥವಾ ಭಯವೋ ? ಭಯಗ್ರಸ್ತರಾಗಿರುವ ಅವರನ್ನು ಕಂಡು ನಮಗೆ ಅನುಕಂಪ ಮೂಡುತ್ತಲಿದೆ. ಲಿಂಗದೇವರು ಅವರನ್ನು ರಕ್ಷಿಸಲಿ !

ವೀರಣ್ಣ ಗೌಡಗಾಂವ, ಬಸವ ಕಲ್ಯಾಣ.- ನಿವೃತ್ತ ಮುಖ್ಯ ಕಾರ್ಯದರ್ಶಿ ಮುದ್ದಪ್ಪನವರು ಆಗಮಿಸಿ, ವೈಭವೋಪೇತ ಹೋಟೆಲ್‌ನಲ್ಲಿ ವಾಸ್ತವ್ಯಮಾಡಿ ಸ್ಥಳೀಯರ ಮೀಟಿಂಗ್ ಕರೆದು ಬಸವ ಕಲ್ಯಾಣದ ಶರಣರ ಸ್ಮಾರಕಗಳ ಸಂರಕ್ಷಣೆ ಬಗ್ಗೆ ಚರ್ಚಿಸಿದರು. ಆಗ ವಿನಾಕಾರಣ ನಿಮ್ಮ ವಿಷಯ ಪ್ರಸ್ತಾಪಿಸಿ ಬಸವಣ್ಣನವರಿಗೆ ಅಪಚಾರ ಮಾಡಿರುವ (?) ಮಾತಾಜಿಯವರಿಗೆ ಶರಣರ ಸ್ಮಾರಕಗಳ ಸಂರಕ್ಷಣೆ ಮಾಡುವ ನೈತಿಕ ಹಕ್ಕಿಲ್ಲ ಎಂದು ನುಡಿದರು. ಅಹುದೆ ?

★ ಇಡೀ ಜೀವಮಾನ ಪರ್ಯಂತರ ನೌಕರಿ ಮಾಡುತ್ತ ಹೆಂಡತಿ-ಮಕ್ಕಳು, ಆಸ್ತಿ-ಪಾಸ್ತಿಗಾಗಿ ದುಡಿದು, ನಿವೃತ್ತಿಯ ನಂತರ ಸರ್ಕಾರದ ನೆರವು ಪಡೆದು ಸಾರ್ವಜನಿಕರಿಂದ ಹಣ ಸಂಗ್ರಹ ಮಾಡಿ ಶರಣರ ಸ್ಮಾರಕ ರಕ್ಷಿಸುವ ಹಂಬಲವನ್ನು ಇದ್ದಕ್ಕಿದ್ದಂತೆಯೇ ಬೆಳಸಿಕೊಂಡ ಶ್ರೀ ಮುದ್ದಪ್ಪನವರಿಗೆ, ಇಡೀ ಜೀವಮಾನವನ್ನೇ ಬಸವಾದಿ ಪ್ರಮಥರ ತತ್ತ್ವಗಳ ಪ್ರಚಾರಕ್ಕೆ ಮೀಸಲಿಟ್ಟ ತ್ಯಾಗಿಗಳಿಗಿಂತಲೂ, ಹೆಚ್ಚಿನ ನೈತಿಕ ಹಕ್ಕು ಇದ್ದಂತೆ ತೋರುತ್ತದೆ. ಬಹಳ ಸಂತೋಷ ಮತ್ಸರ ಯಾರನ್ನೂ ಬಿಡದು. ಅವರೂ ಉಪ್ಪು, ಹುಳಿ, ಖಾರ ತಿನ್ನುವ ಮನುಷ್ಯರಲ್ಲವೆ ?

ಕೆ.ಎಸ್. ಯೋಗೀಶ್. ಕೊಮ್ಮನಾಳ.- ನಮ್ಮ ಗ್ರಾಮದಲ್ಲಿ ಕೆಲವು ಜನರು ಮಂದಮತಿಗಳಿದ್ದಾರೆ. ಅವರು ಹೇಳುತ್ತಾರೆ ನಮ್ಮ ಹಣೆ ಬರಹ ಚೆನ್ನಾಗಿದ್ದರೆ ಮುಟ್ಟಿದ್ದೆಲ್ಲ ಹೊನ್ನಾಗುತ್ತದೆ. ಹಣೆ ಬರಹವು ಕೆಟ್ಟಾಗ ಯಾವ ದೇವರು ಏನೂ ಮಾಡಲಾರ. ಪೂಜೆ ಮಾಡಿದರೇನು ಬಿಟ್ಟರೇನು ?

★ ಧರ್ಮಪಿತ ಬಸವಣ್ಣನವರು ಹೀಗೆ ಹೇಳುತ್ತಾರೆ :

ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತಕರ್ಮ ಉಂಡಲ್ಲದೆ ಬಿಡದು ?
ಪ್ರಾರಬ್ಧಕರ್ಮಭೋಗಿಸಿದಲ್ಲದೆ ಹೋಗದೆಂದು
ಶ್ರುತಿ ಸಾರುತ್ತೈದಾವೆ, ನೋಡಾ ;
ತಾನಾವ ಲೋಕದೊಳಗಿದ್ದಡೆಯೂ ಬಿಡದು,
ಕರ್ಮಫಲಗೂಡಿ ಲಿಂಗದೇವಂಗೆ ಆತ್ಮ ನೈವೇದ್ಯವ ಮಾಡಿದವನೆ ಧನ್ಯ.

"ಮಾಡಿದ ಕರ್ಮಫಲವನ್ನು ತಪ್ಪಿಸಿಕೊಳ್ಳಲು ಆಗುವುದಿಲ್ಲ. ಅನುಭವಿಸಲೇ ಬೇಕು" ಇದು ಕರ್ಮಾಧ್ಯಕ್ಷನಾದ ಸೃಷ್ಟಿಕರ್ತ ದೇವನೇ ಮಾಡಿರುವ ಶಾಸನ. ಹಿಂದಿನ ಜನ್ಮದ ಕರ್ಮಕ್ಕೆ ತಕ್ಕಂತೆ ಈ ಜನ್ಮದಲ್ಲಿ ಎಲ್ಲವೂ ನಡೆಯುತ್ತದೆ. ಆದರೆ ಸರ್ವಶಕ್ತನಾದ ಪರಮಾತ್ಮನ ಅನುಗ್ರಹವಾದರೆ ದುಷ್ಕರ್ಮಗಳ ಫಲದ ತೀವ್ರತೆ ಕಡಿಮೆಯಾಗುವುದು. ದೇವನಿಗೆ ಶರಣಾಗತನಾದಾಗ ಆ

ಕರ್ಮಗಳ ಉತ್ಕಟತೆ ಕರಗಿ ಹೋಗಿ ಅದೃಷ್ಟವು ಅಂದರೆ ಹಣೆ ಬರಹವು ಪಲ್ಲಟವಾಗುವುದು. ಕರ್ಮಫಲದ ಪರಿಣಾಮವಾಗಿ ಹಣೆ ಬರಹ ಕೆಟ್ಟಾಗ ಹೊನ್ನು ಮುಟ್ಟಿದರೆ ಮಣ್ಣಾಗುವುದಾದರೆ ದೇವರ ಕೃಪೆಯಾದರೆ ಮಣ್ಣುಮುಟ್ಟಿದರೆ ಹೊನ್ನಾಗುವುದು. ಯಾವ ದೇವರೂ ಏನೂ ಮಾಡಲಾರ ಎಂಬ ನಿಮ್ಮ ಮಿತ್ರರ ಮಾತಿನಲ್ಲೇ ಅಜ್ಞಾನವು ತುಂಬಿದೆ. ಯಾವುಯಾವವೋ ಕಾಕು ಪೋಕು ದೇವರುಗಳನ್ನು ನಂಬಿದರೆ ಅವು ಏನೂ ಮಾಡಲಾರವು. ಸರ್ವಶಕ್ತನು, ಏಕಮೇವಾ ದ್ವಿತೀಯನೂ ಆದ ಸೃಷ್ಟಿಕರ್ತನನ್ನು ನಂಬಿದರೆ ಏನೆಲ್ಲವನ್ನು ಗಳಿಸಬಹುದು.

ಜಯಶ್ರೀ ಕೂಪನೂರು.- ಅಲ್ಲಮ ಪ್ರಭುಗಳು ತಮ್ಮ ಒಂದು ವಚನದಲ್ಲಿ ಧರ್ಮಪಿತರನ್ನು ಪರಮ ವಿರಕ್ತ, ಗುಹೇಶ್ವರ ಲಿಂಗದಲ್ಲಿ ಅಖಂಡ ಬ್ರಹ್ಮಚಾರಿ ಬಸವಣ್ಣನೊಬ್ಬನೇ ಎನ್ನುತ್ತಾರೆ. ಏನಿದರ ಅರ್ಥ ?

★ ಅಲ್ಲಮ ಪ್ರಭುಗಳು ವಿವಾಹವಾಗದೆ ವಿರಕ್ತರಾದರು. ಧರ್ಮಪಿತ ಬಸವಣ್ಣನವರು ಪೃಥ್ವಿಗಗ್ಗಳ ಚೆಲುವೆ ನೀಲಲೋಚನೆಯನ್ನು ಸತಿಯನ್ನಾಗಿ ಹೊಂದಿದ್ದೂ ಸಹ ಸಂಯಮದ ಜೀವನವನ್ನು ಸ್ವೀಕರಿಸಿ ಆ ತಾಯಿಯನ್ನೂ ವೈರಾಗ್ಯ ಜೀವನಕ್ಕೆ ಪ್ರೇರೇಪಿಸಿದರು. ಒಂದು ವಸ್ತು ಇಲ್ಲದಿದ್ದಾಗ, ಸಿಗದಿದ್ದಾಗ ಅದರ ಬಗ್ಗೆ ನಿರಾಸಕ್ತಿ ತಳೆಯುವುದು ಶ್ರೇಷ್ಠ ಸಾಧನೆಯೆ. ಆದರೆ ಆ ವಸ್ತುವು ಕೈಗೆ ಸಿಗುವಂತಿದ್ದೂ ಅದರ ಬಗ್ಗೆ ನಿರಾಸಕ್ತಿ, ನಿರ್ಲಿಪ್ತತೆ ತಾಳುವುದು ಇನ್ನೂ ಹೆಚ್ಚಿನ ಸಾಧನೆಯಲ್ಲವೆ ? ಓರ್ವ ಬಡವಿ ತನಗೆ ಬಗೆಬಗೆಯ ಬಟ್ಟೆ, ಆಭರಣ ಇಲ್ಲ ಎಂದು ಕೊರಗುವುದು ಅನಾದರ್ಶ. ಇದ್ದುದರಲ್ಲೇ ತೃಪ್ತಿಯಿಂದಿರುವುದು ಆದರ್ಶ. ಆದರೆ ಓರ್ವ ಸಿರಿವಂತಳು ಈ ವಸ್ತುಗಳಿಂದಲೇ ಮನುಷ್ಯನ ಯೋಗ್ಯತೆ ಹಿರಿದಾಗದು ಎಂದು ಅವುಗಳನ್ನು ದೂರವಿಟ್ಟು ಸರಳವಾಗಿದ್ದರೆ ಅದು ಪರಮ ಆದರ್ಶವಲ್ಲವೆ ?

ಚಂದ್ರಕಾಂತ ಪಾಟೀಲ್, ಗುಲಬರ್ಗಾ.- ಮದುವೆಯ ಆಹ್ವಾನ ಪತ್ರಗಳಲ್ಲಿ ವಧು-ವರರ ಹೆಸರು ಬಳಸುವಾಗ ಚಿರಂಜೀವಿ ರಾಜಶ್ರೀ (ಚಿ.ರಾ), ಚಿರಂಜೀವಿ ಸೌಭಾಗ್ಯವತಿ(ಚಿ.ಸೌ) ಎಂದು ಕೆಲವರು, ಅಷ್ಟಾವರಣ ಸಂಪನ್ನ/ಸಂಪನ್ನೆ, ಲಿಂಗಗುಣ ಸಂಪನ್ನ/ಲಿಂಗಗುಣ ಸಂಪನ್ನೆ ಎಂದೆಲ್ಲ ಬಳಸುತ್ತಾರೆ. ಯಾವುದು ಸರಿ ?

★ ಲಿಂಗಾಯತ ಧರ್ಮವು ಶರಣ ಸಂಸ್ಕೃತಿಯ ಧರ್ಮ. ಇದರಲ್ಲಿ ಅನುಯಾಯಿಯನ್ನು ಶರಣ, ಶರಣೆ ಎಂದು ಕರೆಯಲಾಗುವುದು. ಆದ್ದರಿಂದ ಏನೇನೋ ಬಳಸುವುದಕ್ಕಿಂತಲೂ ಶರಣ ಸಂಸ್ಕೃತಿಯ ಪದಗಳಾದ ಶರಣ, ಶರಣೆ ಬಳಸುವುದು ಎಲ್ಲ ದೃಷ್ಟಿಯಿಂದಲೂ ಸೂಕ್ತ. ಅಷ್ಟಾವರಣ ಸಂಪನ್ನ ಎಂದರೆ ಹಾಗಾದರೆ ಪಂಚಾಚಾರಗಳ ಪರಿಣತೆ ಇಲ್ಲವೆ ? ಲಿಂಗಗುಣ ಸಂಪನ್ನ ಎಂದರೆ ಲಿಂಗಗುಣವಳಿದವನು ಎಂದರ್ಥ. ಲಿಂಗಗುಣವಳಿದವನಿಗೆ ಕಾಯದ ಮೋಹ, ಮದುವೆಯ ಬಯಕೆ ಹೇಗಿರಲು ಸಾಧ್ಯ ? "ಶರಣ" ಎಂಬುದು ಷಟಸ್ಥಲದಲ್ಲಿ ಉನ್ನತ ಸ್ಥಿತಿ. ಸಾಮಾನ್ಯ ಅರ್ಥದಲ್ಲಿ ಶರಣ ಎಂದರೆ ದೇವನಿಗೆ ಶರಣಾದವನು. ಆದ್ದರಿಂದ ಶರಣ-ಶರಣೆ ಪದಗಳೇ ಸೂಕ್ತ.

ಪಾರ್ವತಿ ಸುರಪುರ, ಹುಬ್ಬಳ್ಳಿ.- ಅಪ್ಪ ಬಸವಣ್ಣನವರಲ್ಲಿ ನಿಮಗೆ ಅಪಾರ ಶ್ರದ್ಧೆ, ಹಾಗೆಯೇ ನಿಮ್ಮ ಮೇಲೆ ಅವರ ಅನುಗ್ರಹ ಅಪಾರ. ನೀವು ಪ್ರಾಮಾಣಿಕವಾಗಿ ಬಸವಾದಿ

Digitalized by e-Sahithya Documentation Forum
Sponsored by arayu Foundation Trust

ಪ್ರಮಥರ ಸೇವೆ ಮಾಡುತ್ತೀರಿ. ಆದರೂ ಕೆಲವು ಬಸವಾಭಿಮಾನಿಗಳು ಎನ್ನಿಸಿಕೊಂಡು ನಿಮಗೆ ನಿರಂತರವಾಗಿ ಕಿರುಕುಳ ಕೊಡುವರಲ್ಲ ; ಅವರನ್ನು ಏಕೆ ಮಹಿಮಾಪುರುಷರಾದ ಬಸವಣ್ಣನವರು ಪರಿವರ್ತಿಸುವುದಿಲ್ಲ ? ಇದರಿಂದ ನಿಮಗೆ ಬಸವಣ್ಣನವರ ಶಕ್ತಿ ಮತ್ತು ಅನುಗ್ರಹದಲ್ಲಿ ಅಪನಂಬಿಕೆ ಬರುವುದಿಲ್ಲವೆ ?

★ ಖಂಡಿತಾ ಅಪನಂಬಿಕೆ ಬರುವುದಿಲ್ಲ. ಕುಸ್ತಿ ಆಡಬೇಕಾದರೆ ಒಬ್ಬ ಎದುರಾಳಿ ಬೇಕು. ಕರಾಟೆಯ ಪಟ್ಟು ಕಲಿಯಬೇಕಾದರೆ, ಪ್ರಯೋಗಿಸ ಬೇಕಾದರೆ ಪ್ರತಿಸ್ಪರ್ಧಿ ಇರಲೇಬೇಕು. ಅಪ್ಪ ಬಸವಣ್ಣನವರು ಹೇಳುವುದಿಲ್ಲವೆ ?

ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ ಎನ್ನನು ಅವನೊಡನೆ ಹೋರಿ
ಶಿವಾಚಾರದ ಧ್ವಜವನೆತ್ತಿಸಿ

ಎಂದು "ಮಕ್ಕಳೇ, ವಿರೋಧಿಗಳನ್ನು ಜಯಿಸಿ ಮುಂದುವರಿಯ ಬೇಕು. ಅಂದು ಜನ್ನಿವಾರ ಧರಿಸಿ, ನಾಮ ಧರಿಸುತ್ತಿದ್ದವರು ನನ್ನ ತತ್ತ್ವದ ವಿರೋಧಿಗಳಿದ್ದರು. ಅವರೊಡನೆ ಸ್ಪರ್ಧಿಸಿ ನಾನು ಗೆದ್ದೆ. ಇಂದು ಅವರು ವಿಭೂತಿ ಧರಿಸಿ, ಲಿಂಗಕಟ್ಟಿ ಒಳಗಿದ್ದೇ ನನ್ನನ್ನು ವಿರೋಧಿಸುತ್ತಾರೆ. ನನ್ನ ಹೆಸರಿನಿಂದಲೇ ನಿಮ್ಮನ್ನು ಸತಾಯಿಸುತ್ತಾರೆ. ನಾನೆಂತು ಜಯಿಸಿದೆನೋ ಹಾಗೆಯೇ ನೀವೂ ಹೊರ-ಒಳಗಿನ ಪಿತೂರಿ, ವಿರೋಧ ಜಯಿಸಿ ಗೆಲ್ಲಬೇಕು." ಎಂದು ಬೋಧಿಸುತ್ತಾ ಅಪ್ಪ ಬಸವಣ್ಣನವರು ನಮ್ಮನ್ನು ಹುರಿದುಂಬಿಸತ್ತ ಹೋರಾಟದ ತರಬೇತಿ ನೀಡುತ್ತಿದ್ದಾರೆ. ಆದಕ್ಕೆ ಅವರ ಅನುಗ್ರಹದಲ್ಲಿ ನಮಗೆ ಪೂರ್ಣವಿಶ್ವಾಸ.

ನೀಲಾಂಬಿಕಾ ಇಂಗಳಳ್ಳಿ, ಧಾರವಾಡ.- ಮದುವೆಯಲ್ಲಿ ಮಾಂಗಲ್ಯವನ್ನು ಕಟ್ಟಲಾಗುವುದಷ್ಟೆ. ಕೆಲವು ಕಡೆ ಎರಡು ತಾಳಿ ಕಟ್ಟುವರು, ಕೆಲವು ಕಡೆ ಒಂದೇ ತಾಳಿ ಅಗಲವಾಗಿರುವುದು. ತಾತ್ತ್ವಿಕವಾಗಿ ಹೇಗಿರಬೇಕು ? ಎಷ್ಟಿರಬೇಕು ?

★ ವಿವಾಹದ ಸಮಯದಲ್ಲಿ ಕೊಡಲ್ಪಡುವ ಆಭರಣಗಳಲ್ಲಿ ಮಾಂಗಲ್ಯ ಅಥವಾ ತಾಳಿ ಬಹುಮುಖ್ಯ. ಎಂತಹ ಬಡವರೇ ಇರಲಿ, ಮದುವೆಯಲ್ಲಿ ಕನಿಷ್ಠ ಮಾಂಗಲ್ಯವನ್ನಾದರೂ ಕೊಡುತ್ತಾರೆ. ಪತಿಯು ಸತಿಯ ಮೇಲೆ ತನ್ನ ಸ್ವಾಮಿತ್ವ ಸ್ಥಾಪಿಸಲು ಮಾಂಗಲ್ಯ ಧಾರಣೆ ಮಾಡುವ ಮೂಲಕ ಆಕೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳುತ್ತಾನೆ. ಕೆಲವು ಕಡೆ ಚಿಕ್ಕ ಚಿಕ್ಕ ಎರಡು ತಾಳಿ ಹಾಕಿಕೊಳ್ಳುತ್ತಾರೆ. ಒಂದು ತೌರಿನದು ಇನ್ನೊಂದು ಗಂಡನ ಮನೆಯದು ಎನ್ನುತ್ತಾರೆ. ಕೆಲವು ಕಡೆ ಒಂದೇ ತಾಳಿ, ತುಸು ಅಗಲವಾಗಿ ಇರುತ್ತದೆ. ಮತ್ತೆ ಕೆಲವು ಕಡೆ ಕಪ್ಪೆ ಚಿಪ್ಪಿನ ತರಹ ಆಕಾರದಲ್ಲಿರುತ್ತದೆ. ಮಹಾರಾಷ್ಟ್ರದ ಕೆಲವು ಭಾಗದಲ್ಲಿ ತಾಳಿ ಡುಬ್ಬ (ರೊಟ್ಟಿ ಹೆಂಚಿನಂತೆ) ಹೊಂದಿದ್ದರೆ, ಮರುಮದುವೆಯಲ್ಲಿ ಧರಿಸುವ ತಾಳಿ ಸಮವಾಗಿರುವದಂತೆ ದೋಸೆ ಹೆಂಚಿನಂತೆ.

ಲಿಂಗಾಯತ ಧರ್ಮದ ಆಚಾರ-ವಿಚಾರಗಳಲ್ಲಿ ಏಕರೂಪತೆ ಇಲ್ಲದೆ ಇರುವುದಕ್ಕೆ ಕಾರಣ ಒಂದು ಗ್ರಂಥ ಇಲ್ಲದೆ ಇರುವುದು. ವಿವಿಧ ಜಾತಿ ಪಂಗಡ, ಬಣ, ಬುಡಕಟ್ಟುಗಳ ಜನರು ದೀಕ್ಷಾವಂತರಾಗಿ, ಲಿಂಗಾಯತ ಧರ್ಮ ಸ್ವೀಕರಿಸಿದ್ದರೂ ಸರಿಯಾದ

ಮಾರ್ಗದರ್ಶನವಿಲ್ಲದೆ ಏನೇನೋ ಮಾಡುತ್ತಾರೆ.

ನಾವು ತಾತ್ತ್ವಿಕವಾಗಿ ವಿಮರ್ಶೆ ಮಾಡೋಣ. ದೇವನು ಒಬ್ಬ. ಅವನ ಪ್ರತೀಕವಾಗಿ ಒಂದು ಇಷ್ಟಲಿಂಗವನ್ನು ಕಟ್ಟಲಾಗುವುದು. ಅದೇ ರೀತಿ ಪರಮ ಪತಿವ್ರತೆಗೆ ಗಂಡನೊಬ್ಬ ಅವನು ಒಂದು ತಾಳಿಯನ್ನು ಕಟ್ಟಬೇಕು. ತೌರು ಮನೆಯ ಸಂಕೇತವಾಗಿ ತಾಳಿಯನ್ನು ಕಟ್ಟುವುದು ಅಸಂಬದ್ಧ. ಏಕೆಂದರೆ ತೌರು ಮನೆಯ ಬಾಂಧವ್ಯ ಹರಿದುಕೊಂಡು ಪತಿಯ ಅರ್ಧಾಂಗಿಯಾಗುವುದು ತಾಳಿ ಧಾರಣೆಯ ಅರ್ಥ. ಸಿಕ್ಕಷ್ಟು ಬಂಗಾರ ಸಿಗಲಿ ಎಂಬ ಅಲ್ಪ ಆಕಾಂಕ್ಷೆಯಿಂದ ಗಂಡನ ಮನೆಯ ತಾಳಿಯೊಡನೆ ತೌರುಮನೆಯ ತಾಳಿಯನ್ನು ಪಡೆಯುವ ಪರಿಪಾಠ ಬಂದಂತೆ ಕಾಣುತ್ತದೆ. ದ್ರೌಪದಿಯಂತೆ 5 ಜನ ಗಂಡರನ್ನು ಹೊಂದಿದ್ದರೆ 5 ತಾಳಿ ಬೇಕಾದರೆ ಕಟ್ಟಿಕೊಳ್ಳಲಿ. ತಾತ್ತ್ವಿಕವಾಗಿ ವಿಮರ್ಶಿಸಿದರೆ ಪತಿಯು ಒಂದು ತಾಳಿಯನ್ನು ಕಟ್ಟುವುದೇ ಸರಿ.



ಸ್ವತಂತ್ರ ಧರ್ಮಾನುಯಾಯಿಗಳು ನಾವಾದ ಕಾರಣ ನಮ್ಮ ಧರ್ಮದ ಚಿಹ್ನವು ಮಾಂಗಲ್ಯದಲ್ಲಿ ಬರುವಂತೆ ಆಕಾರ ನೀಡುವುದು ಒಳ್ಳಿತು. ತೀರಾ ಚಿಕ್ಕದು ಮಾಡುವ ಬದಲು ವೃತ್ತ, ಷಟ್ಕೋನ ಮಧ್ಯೆ ಇಷ್ಟಲಿಂಗ ಬರುವಂತೆ ಸ್ವಲ್ಪ ದೊಡ್ಡದಾಗಿದ್ದರೆ ಒಳ್ಳೆಯದು. ಈ ಬಗ್ಗೆ ಒಂದು ಮಾದರಿಯನ್ನು ಮಾಡಿಸಲಾಗಿದೆ. ಅದನ್ನು ಗಮನಿಸಿರಿ.

ಮಲ್ಲಿಕಾರ್ಜುನ ಫಲದಿನ್ನಿ, ಬಿಜಾಪುರ.- ಕೂಡಲ ಸಂಗಮವನ್ನು ಅನೇಕ ಬಾರಿ ಸಂದರ್ಶಿಸಿದ್ದೇವೆ. 1982 ಕ್ಕೆ ಮೊದಲು ಹೋಗುವಾಗ ಅತೀವ ದುಃಖ ಎನಿಸುತ್ತಿತ್ತು. ನೀವು ಬಂದಿರಿ ಸುಧಾರಣೆ ಪ್ರಾರಂಭವಾಯಿತು. ಧರ್ಮಕ್ಷೇತ್ರವೆಂದು ಗುರುತಿಸಿದಿರಿ. ಸರ್ಕಾರದ ಗಮನವೂ ಹರಿದು, ಸರ್ಕಾರವು ಕೋಟಿಗಟ್ಟಳೆ ಹಣವನ್ನು ವ್ಯಯ ಮಾಡಿ, ಅಭಿವೃದ್ಧಿ ಪಡಿಸುತ್ತಿದೆ. ಮಹಾಮನೆಗೆ ಬಂದರಂತೂ 12ನೆಯ ಶತಮಾನದ ಅನುಭವ ಮಂಟಪ ಕಣ್ಣ ಮುಂದೆ ನಿಲ್ಲುತ್ತದೆ. ಆದರೆ ಬಸವೇಶ್ವರ ಸರ್ಕಲ್‌ದಲ್ಲಿ ಸರ್ಕಾರದವರು ಕೂರಿಸಿರುವ ಬಸವಣ್ಣನವರ ಮೂರ್ತಿ ಅತ್ಯಂತ ಕುರೂಪದ್ದಾಗಿದ್ದು, ನೋಡಿದರೆ ಆಘಾತವಾಗುತ್ತದೆ. ಕೃಶವಾದ ಆಕಾರಗೆಟ್ಟ ದೇಹ, ವಿಶಿಷ್ಟ ರೋಗಗ್ರಸ್ತ (ರಿಕೆಟ್) ಮಕ್ಕಳಿಗೆ ದೊಡ್ಡ ತಲೆ ಇರುವಂತೆ ಭಯಂಕರವಾದ ತಲೆ. ಸಣ್ಣ ಮಕ್ಕಳು ಸಹ "ಇದು ಬಸವಣ್ಣನವರ ಮೂರ್ತಿ" ಎಂದರೆ "ಇಲ್ಲ, ಇಲ್ಲ ನಮ್ಮ ಬಸವಣ್ಣ ಸುಂದರವಾಗಿದ್ದಾರೆ. ಇದು ಬಸವಣ್ಣ ಅಲ್ಲ" ಎನ್ನುತ್ತಾರೆ. ಆ ಕುರೂಪದ ಮುದ್ದೆಯನ್ನು ಅಲ್ಲಿಂದ ತೆಗೆಸಲು ಸಾಧ್ಯವಿಲ್ಲವೆ ?

★ ನಿಮ್ಮ ಕೊರಗು ನಮಗೂ ಅರ್ಥವಾಗುತ್ತದೆ. ಈಗಾಗಲೇ ಕೂಡಲ ಸಂಗಮದ ಅನೇಕ ನಾಗರಿಕರು, ಹುನಗುಂದದ ತರುಣ ಸಂಘದವರು ಪ್ರತಿಭಟನೆ ಮಾಡಿದ್ದಾರೆ. ಆದರೆ ಅಲ್ಲಿಯ ಯೋಜನಾಧಿಕಾರಿಗಳಾದ ಶ್ರೀ ಶಿವಾನಂದ ಜಾಮದಾರ್ ಬಹಳ ಹಟವಾದಿಗಳು. ಸಣ್ಣ ಮಕ್ಕಳಿಂದ ದೊಡ್ಡವರವರೆಗೆ ನೋಡಿದ ಎಲ್ಲರೂ ನಿಮ್ಮಂತೆ ಅಭಿಪ್ರಾಯಪಟ್ಟರೂ ಶ್ರೀ ಜಾಮದಾರರಿಗೆ ತಮ್ಮ ಕಣ್ಣಿನ ಬಗ್ಗೆ ಅಪಾರ ಅಭಿಮಾನ. ಅವರ ಕಣ್ಣಿಗೆ ಅದು ಚಂದವಾಗಿಯೇ ಕಾಣುತ್ತಿದೆ. ಲಕ್ಷಾಂತರ ರೂಪಾಯಿ ಸುರಿದು ಮಾಡಿರುವ ಅದನ್ನು ಏಕೆ ವ್ಯರ್ಥ ಮಾಡುವುದು

Digitalized by e-Sahithya Documentation Forum
Sponsored by arayu Foundation Trust

ಎಂದು ಬಸವಣ್ಣನವರನ್ನು ಅಷ್ಟಾವಕ್ರರನ್ನಾಗಿ ಮಾಡಿ ತೋರಿಸುತ್ತಿದ್ದಾರೆ. ಗದಗಿನ ಜಗದ್ಗುರುಗಳು, ಇಳಕಲ್ ಶ್ರೀಗಳ ನೀಡಿದ ಸಲಹೆ ಪ್ರಕಾರವೇ ಇದನ್ನು ಮಾಡಲಾಗಿದೆ ಎಂದೂ ಶ್ರೀ ಜಾಮದಾರ್ ಅವರು ಸಮರ್ಥಿಸಿಕೊಳ್ಳುತ್ತಾರೆ. ಶ್ರೀಯುತರ ಯಾರ ಸಲಹೆಯನ್ನೂ ಸ್ವೀಕರಿಸದೆ ಇರುವ ಸ್ವಭಾವ ನೋಡಿ ನಾವು ಮೌನ ತಾಳಿದ್ದೇವೆ. ಕುರೂಪದ ಆ ಮೂರ್ತಿಯು ಬಸವಣ್ಣನವರನ್ನು ಅವಮಾನಿಸುವುದೇ ಅಲ್ಲದೆ ಶ್ರೀ ಜಾಮದಾರ್, ಇಳಕಲ್ ಶ್ರೀಗಳು, ತೋಂಟದ ಜಗದ್ಗುರುಗಳು ಇನ್ನಿತರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರ ಅಂಗರಚನಾ ಶಾಸ್ತ್ರದ ತಿಳುವಳಿಕೆಯನ್ನು ಪ್ರದರ್ಶನಕ್ಕಿಟ್ಟಿರುವುದರಿಂದ ಜನರೇ ಹಳಿಯುತ್ತಿರಲಿ ಎಂದು ನಾವೂ ಸುಮ್ಮನಿದ್ದೇವೆ.

ವನಜಾ ಶ್ರೀನಿವಾಸ್, ಲತಾ ಶಂಕರ್, ಕಮಲಾನಗರ, ಬೆಂಗಳೂರು.- ಬಸವ ಕಲ್ಯಾಣದ ಬಗ್ಗೆ ನಾವು ಬಹುಬಗೆಯ ಕನಸನ್ನು ಕಟ್ಟಿದ್ದೆವು. ಈ ಸಲ ಶರಣಮೇಳಕ್ಕೆ ಬರುವ ಮೊದಲು ದಿ. 10 ರಂದು ಅಲ್ಲಿಗೆ ಹೋಗಿದ್ದೆವು. ಆಧುನಿಕವಾಗಿ ಕಟ್ಟಿರುವ ಅನುಭವ ಮಂಟಪ ಎಂಬಲ್ಲಿಗೆ ಹೋಗಿದ್ದೆವು. ಎಲ್ಲಿ ಹೋದರೂ ನಾವು ಪೂಜೆ-ಪ್ರಾರ್ಥನೆ-ಧ್ಯಾನ ಮಾಡುತ್ತೇವೆ. ನಮ್ಮನ್ನು ಗಮನಿಸಿ ನೀವಾರು ಎಂದು ಅಲ್ಲಿದ್ದರೊಬ್ಬರು ಕೇಳಿದರು. ನಾವು ಮಾತಾಜಿಯವರ ಶಿಷ್ಯರು ಎಂದು ಹೇಳುತ್ತಲೇ ಅವರು ಕೋಪೋದ್ರಿಕ್ತರಾಗಿ ಸಿಕ್ಕಾಪಟ್ಟೆ ಜಗಳಕ್ಕೆ ನಿಂತರು. 'ಲಿಂಗದೇವ' ಪದದ ಮಹತ್ವ ಕುರಿತು ತಿಳಿಸಿ, ನಾವು ಹೊರಗೆ ಬಂದುಬಿಟ್ಟೆವು. ಶರಣರಲ್ಲಿ ಅಂಥ ಕೀಳುವರ್ತನೆ ಕಂಡು ದಿಗ್ಭ್ರಾಂತರಾದೆವು. ವಿಚಾರ ಭಿನ್ನಾಭಿಪ್ರಾಯವಿದ್ದರೇನು ಅಂಥ ಹೀನವರ್ತನೆ ಮಾಡಬಹುದೆ ?

★ ಈಚಲಕರಂಜಿಯ ಶರಣೆ. ಮಾಲೂತಾಯಿಯೂ ಇಂಥದೇ ಅನುಭವ ಹೊಂದಿದರಂತೆ. ನಾವು ಮಾತಾಜಿಯವರ ಅಭಿಮಾನಿಗಳಿಗೆ ಪ್ರಸಾದ (ಊಟ) ಕೊಡುವುದಿಲ್ಲ ಎಂದು ಅಧ್ಯಕ್ಷ ಸಿದ್ಧರಾಮಣ್ಣ ನುಡಿದಾಗ, ಇವರೂ ಸಹ ''ನೀವು ಕೊಡುವುದು ಪ್ರಸಾದವಲ್ಲ, ನಿಮ್ಮ ಊಟ ನಮಗೆ ಬೇಕೇ ಇಲ್ಲ.'' ಎಂದು ಎದ್ದು ಬಂದು ತಾವು ತಂದಿದ್ದ ಬುತ್ತಿಯನ್ನು ಬೇರೊಂದು ಸ್ಥಳದಲ್ಲಿ ಕುಳಿತು ಸ್ವೀಕರಿಸಿದರಂತೆ. ಅಂದಿನ (12 ನೆಯ ಶತಮಾನದ) ಅನುಭವ ಮಂಟಪದವರು ಪಾಪಿ, ಪತಿತರೂ ಸೇರಿ ಬಂದವರನ್ನು ಇಂಬಿಟ್ಟುಕೊಂಡು ಪರಿವರ್ತಿಸಿ, ಶರಣರನ್ನಾಗಿ ಮಾಡಿದರೆ ಇಂದಿನ ಈ ಅನುಭವ ಮಂಟಪದವರು ಓಣಿಯೊಳಕ್ಕೆ ಬಂದವರನ್ನು ಬೆದರಿಸುವ ಬೀದಿ ನಾಯಿಗಳಂತೆ ಬೌಗುಟ್ಟುತ್ತಾರೆ. ಸಾತ್ವಿಕತೆಯೇ ಮೂರ್ತಿಗೊಂಡಿದ್ದ ಲಿಂ॥ ಶರಣೆ. ಜಯದೇವಿ ಲಿಗಾಡೆ, ಅವರ ಪುತ್ರಿ ಲಲಿತಾ ಮೂಗಿ ಮತ್ತು ಕುಟುಂಬದವರಿಗೆ ಕೊಟ್ಟ ಕಿರುಕುಳವಂತೂ ಕಣ್ಣೀರು ತರಿಸುವ ಕಥೆ. ಯಾವ ಎಗ್ಗು ಇಲ್ಲದೆ ಪಾಪಮಯ, ಕ್ರೂರ ಕರ್ಮದಿಂದ ಆ ಕುಟುಂಬದವರಿಗೆ ಹಿಂಸೆ ಕೊಟ್ಟರು. 12ನೆಯ ಶತಮಾನದ ಶರಣರಿಗೆ ಮೃದು ವಚನವೇ ಸಕಲ ಜಪತಪ ಆಗಿದ್ದರೆ, ಜಗಳಗಂಟತನ, ಕುತಂತ್ರಗಳೇ ಈಗಿನ ಇವರ ಜಪತಪವಾಗಿದೆ.

ಸಿದ್ಧರಾಮ. ಶಿ. ಗೌಡಪ್ಪನವರ, ಬನಹಟ್ಟಿ, ಬಿ.ಎ. ಎರಡನೆಯ ವರ್ಷದ ವಿದ್ಯಾರ್ಥಿ.- ಪ್ರಜಾವಾಣಿ ಪತ್ರಿಕೆ ಭಾನುವಾರ 2001ರ ಜನವರಿ 14ರ ಸಾಪ್ತಾಹಿಕ ಪುರವಣಿಯ ಸಾಹಿತ್ಯ

ಸಂವಾದದಲ್ಲಿ ಖ್ಯಾತ ಕವಿ ಜಿ.ಎಸ್.ಶಿವರುದ್ರಪ್ಪ ಹೀಗೆ ಹೇಳಿದ್ದಾರೆ. '' ವೀರಶೈವ, ಲಿಂಗಾಯತ ಎರಡೂ ಸಮಾನಾರ್ಥಕ ಪದಗಳೇ. ನನಗೆ ಈ ಧರ್ಮವನ್ನು ವಾಸ್ತವವಾಗಿ ಶರಣ ಧರ್ಮ ಎಂದು ಕರೆಯುವುದೇ ಹೆಚ್ಚು ಸೂಕ್ತ ಎನ್ನಿಸುತ್ತದೆ.'' ಇದರಲ್ಲಿ ''ವಾಸ್ತವವಾಗಿ'' ಎಂಬ ಪದದ ಅರ್ಥವೇನು ? ಮತ್ತು ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ?.

★ ನಾವು ಹೇಳುತ್ತಿರುವ ಸತ್ಯವನ್ನೇ ಶ್ರೀ ಜಿ.ಎಸ್.ಶಿವರುದ್ರಪ್ಪನವರು ಸುತ್ತಿ ಬಳಸಿ, ಸೂಚ್ಯವಾಗಿ ಹೇಳುತ್ತಿದ್ದಾರೆ. ಹೇಗೆಂದರೆ, ಒಮ್ಮೆ ಅಕಬರನಿಗೆ ಬಿದ್ದ ಒಂದು ಕನಸಿನಲ್ಲಿ ಒಂದೇ ಹಲ್ಲು ಉಳಿದು ಉಳಿದುವು ಬಿದ್ದುಹೋದವಂತೆ. ಇದರ ಅರ್ಥ ಕೇಳಿದಾಗ ಆಸ್ಥಾನಿಕರು ಹೇಳಿದರಂತೆ, ''ಮಹಾರಾಜಾ, ನಿಮ್ಮ ಬಂಧು ಬಳಗದವರೆಲ್ಲ ನಿಮಗಿಂತ ಮೊದಲೇ ಸಾಯುತ್ತಾರೆ.'' ಎಂದರಂತೆ. ಎಂಥಾ ಕೆಟ್ಟ ನುಡಿ ! ಎಂದು ಅಕಬರ ಕೋಪಗೊಂಡನಂತೆ. ಬೀರಬಲ್ಲನನ್ನು ಕೇಳಿದಾಗ ಅವನು ''ಮಹಾರಾಜಾ ನೀವು ನಿಮ್ಮ ಬಂಧುಬಳಗಕ್ಕಿಂತ ಹೆಚ್ಚು ಕಾಲ ಬದುಕುವಿರಿ'' ಎಂದನಂತೆ. ರಾಜನಿಗೆ ಬಹಳ ಖುಷಿಯಾಯಿತಂತೆ.. ಎರಡೂ ಒಂದೇ ಸತ್ಯ, ಹೇಳುವ ರೀತಿ ಬೇರೆ. ಅದೇ ರೀತಿ ಕರ್ನಾಟಕದ ಸಾಹಿತಿಗಳು, ಸಂಶೋಧಕರು ಎಲ್ಲರಿಗೂ ಗೊತ್ತು. ವಚನ ಸಾಹಿತ್ಯದಲ್ಲಿ ಹೇಳಲ್ಪಟ್ಟುದು ಒಂದು ಸ್ವತಂತ್ರ ಧರ್ಮ. ಮಾನವೀಯ ಕಾಳಜಿಯುಳ್ಳುದು ಪ್ರಗತಿಪರ ಚಿಂತನೆಯುಳ್ಳುದು. ಇದೇ ಬಸವಣ್ಣನವರು ಆದಿಪ್ರಮುಥರಾಗಿ ಅಸಂಖ್ಯಾತ ಶರಣರು ಶಾಸಕರಾಗಿ ಕೊಟ್ಟ ವಚನ ಸಾಹಿತ್ಯ ಸಂವಿಧಾನ ಹೊಂದಿದ ಲಿಂಗಾಯತ ಧರ್ಮ. ವೀರಶೈವರು ವೀರಶೈವವನ್ನು ಸ್ವತಂತ್ರವಾಗಿ ಪ್ರತಿಪಾದಿಸಲು ಅಸಮರ್ಥರು ; ಜಗಳಗಂಟತನದಿಂದ ಶರಣರು ಬೆಳೆದ ವಚನ ಸಾಹಿತ್ಯದ ತೆನೆಗಳನ್ನು ಕದ್ದು ಒಯ್ಯುವವರು. ಶಿವರುದ್ರಪ್ಪನಂತಹವರು ನಮ್ಮಂತೆ ಧೈರ್ಯವಾಗಿ ''ಲಿಂಗಾಯತ-ವೀರಶೈವ ಬೇರೆ ಬೇರೆ, ಅದೊಂದು ಧರ್ಮ, ಇದೊಂದು ಪಂಥ ಎಂದು ಹೇಳಿಬಿಡಲಿ. ವೀರಶೈವವಾದಿಗಳು ಚಿರತೆ-ತೋಳಗಳಂತೆ ದಾಳಿ ಮಾಡುವರು. ಅದಕ್ಕೇ ಸಾಹಿತಿಗಳು ಧೈರ್ಯವಾಗಿ ಹೇಳದೆ ಸೂಚ್ಯವಾಗಿ ಹೇಳುವರು. ದಿ॥ ಎಂ.ಆರ್.ಶ್ರೀನಿವಾಸಮೂರ್ತಿಯವರು ''ವಚನ ಧರ್ಮ ಸಾರ'' ಎಂದರು ತಮ್ಮ ಕೃತಿಗೆ. ಜಿ.ಎಸ್.ಶಿವರುದ್ರಪ್ಪನವರು ಸಾಹಿತಿಗಳು. ಅದರಂತೆ ಎ.ಎಲ್.ಶಿವರುದ್ರಪ್ಪನವರಿದ್ದಾರೆ. ಹೆಸರೊಂದೇ ಇದ್ದರು ತಂದೆ ಹೆಸರು ಬೇರೆ, ಪರಿಣತಿಯ ಕ್ಷೇತ್ರ ಬೇರೆ. ಹಾಗೆಯೇ ಅಜ್ಞಾನದಿಂದ ಕೆಲವರು ಲಿಂಗಾಯತ, ವೀರಶೈವ ಒಂದೇ ಎಂದರೂ ಅವೆರಡೂ ಸ್ಪಷ್ಟವಾಗಿ ಬೇರೆ ಬೇರೆ.

ಪ್ರಶ್ನೆ-2.- ''ಲಿಂಗದೇವ'' ಇಷ್ಟಲಿಂಗ ಎಂಬ ಕುರುಹು ನಿರ್ದೇಶಿಸುವ ಸೃಷ್ಟಿಕರ್ತ ಎಂಬುದೀಗ ನಮಗೆ ಮನವಟ್ಟಾಯಿತು. ಆದರೆ ಮಹಾಜ್ಞಾನಿಗಳಾದ ಬಸವಣ್ಣನವರು ಸ್ಥಾವರ ಸೂಚಕವಾಗಿ ಕೂಡಲಸಂಗಮ ಅಂಕಿತ ಏಕೆ ಮುಂದುವರಿಸಿದರು ? ಈಗ ನಮ್ಮಂತಹ ಸಾಮಾನ್ಯರಿಗೂ, ವಚನ ಸಾಹಿತ್ಯ ಓದಿದ ಬಳಿಕ ತಿಳಿಯುತ್ತಿದೆ. ಹೀಗಿದ್ದಾಗ ಅವರಿಗೆ ತಿಳಿಯಲಿಲ್ಲವೆ ?

★ ಗದುಗಿನ ತೋಂಟದಾರ್ಯ ಮಠದ ವತಿಯಿಂದ ಮುದ್ರಿಸಿದ ಚೆನ್ನಬಸವಣ್ಣನವರ ವಚನ್ನೈಕೋತ್ತರ ಶತಸ್ಥಲ ಎಂಬ ಪುಸ್ತಕ ಓದುತ್ತಿದ್ದೆ. ಅದರಲ್ಲಿ 60 ವಚನ. (ಪುಟ 22) ಹೀಗಿದೆ.

Digitalized by e-Sahithya Documentation Forum
Sponsored by arayu Foundation Trust

ಹೊತ್ತಾರೆ ಎದ್ದು ಲಿಂಗದೇವನ
ನೋಡದವನ ಸಂಸಾರವೇನವನ ?

ಬೇರೆ ಅನೇಕ ಪುಸ್ತಕಗಳಲ್ಲಿ "ಲಿಂಗದೇವನ" ಎಂಬುದಕ್ಕೆ 'ಶಿವ' ಸೇರಿಸಿ ಶಿವಲಿಂಗದೇವನ ಎಂದು ಪ್ರಕಟಿಸಿದ್ದಾರೆ. ಲಿಂಗದೇವ ಎಂದರೆ ಇಷ್ಟಲಿಂಗ ; ಶಿವಲಿಂಗದೇವ ಎಂದರೆ ಸ್ಥಾವರಲಿಂಗ. ಎಷ್ಟು ವ್ಯತ್ಯಾಸವಾಗುತ್ತದೆ ನೋಡಿರಿ ! ಹಾಗೆ ಸ್ವತಂತ್ರ ಧರ್ಮದ ದ್ರಷ್ಟಾರರಾದ ನಂತರ ಧರ್ಮಪಿತರು ವಚನಾಂಕಿತ ಬದಲಿಸಿದ್ದರೂ ಶೈವ, ವೀರಶೈವವಾದಿಗಳು 15ನೆಯ ಶತಮಾನದ ನಂತರ ಪುನಃ ಕೂಡಲಸಂಗಮದೇವ ಸೇರಿಸಿ ವಚನ ಸಾಹಿತ್ಯದ ತಾತ್ವಿಕ ಶುದ್ಧಿಯನ್ನು ಕೆಡಿಸಿದ್ದಾರೆಂದೇ ನನ್ನ ದೃಢ ಅಭಿಪ್ರಾಯ.

ಹೆಚ್.ಕೆ.ಕಲ್ಲಪ್ಪ, ರಾಷ್ಟ್ರೀಯ ಬಸವ ದಳ, ತುಮಕೂರು.- ಕನ್ನಡ ಸಾಹಿತ್ಯ ಪರಿಷತ್, ಸಮ್ಮೇಳನ ನಡೆಸುತ್ತದೆ. ಪ್ರತಿನಿಧಿಗಳಿಗೆ ಊಟದ ವ್ಯವಸ್ಥೆ ಮಾಡುತ್ತದೆ. ಲಕ್ಷಾಂತರ ರೂಪಾಯಿ ಸರ್ಕಾರ ಅನುದಾನ ನೀಡುತ್ತದೆ. ಜನರಿಂದ ಸಿಕ್ಕಾಪಟ್ಟೆ ದುಡ್ಡು ಎತ್ತುತ್ತಾರೆ. ಪ್ರತಿನಿಧಿ ಬ್ಯಾಡ್ಜ ಇದ್ದವರಿಗೆ ಮಾತ್ರ ಊಟದ ಮನೆಗೆ ಪ್ರವೇಶ ಎಂಬ ಕಾರಣಕ್ಕೆ ಜನರು ಬ್ಯಾಡ್ಜ ಪಡೆಯಲು ಹೊಡೆದಾಡುತ್ತಾರೆ. ಪೋಲೀಸರ ಸರ್ಪಕಾವಲಿನಲ್ಲಿ ಬ್ಯಾಡ್ಜ ವಿತರಿಸಬೇಕಾಗುತ್ತದೆ. ಶರಣ ಮೇಳಕ್ಕೆ ಸರ್ಕಾರದ ಅನುದಾನವಿಲ್ಲ. ಬಡಭಕ್ತರ ಕಾಣಿಕೆ ಮಾತ್ರ ಬರುತ್ತದೆ. ಬಂದ ಎಲ್ಲರಿಗೂ ಪ್ರಸಾದ. ಕ್ಯೂನಲ್ಲಿ ನಿಂತು ಜನ ಶಾಂತವಾಗಿ ಪ್ರಸಾದ ಸ್ವೀಕರಿಸುತ್ತಾರೆ. ಇಲ್ಲಿಗಿಂತ ಹೆಚ್ಚು ಜನ ಶರಣ ಮೇಳದಲ್ಲಿ ಸೇರುತ್ತಾರೆ. ಇದಕ್ಕೆ ಬರುವವರು ಸಾಹಿತ್ಯಾಸಕ್ತರು, ವಿದ್ಯಾವಂತರು. ಶರಣ ಮೇಳಕ್ಕೆ ಹಳ್ಳಿಗಾಡುಗಳ ಜನ ಸಹ ಸೇರುತ್ತಾರೆ. ಆದರೆ ಅಲ್ಲಿ ಎಂಥಾ ಶಾಂತಿ ಎಂತಹ ಶಿಸ್ತು ? ಅಚ್ಚರಿ ಎನ್ನಿಸುತ್ತದೆ !

★ಕನ್ನಡ ಸಾಹಿತ್ಯ ಸಮ್ಮೇಳನದವರು ಸಮ್ಮೇಳನದಲ್ಲಿ ಚರ್ಚಿಸಲಾಗುವ ವಿಷಯಕ್ಕಿಂತಲೂ ಊಟದ ವೈಭವವನ್ನೇ ಪತ್ರಿಕಾಗೋಷ್ಠಿಗಳ ಮೂಲಕ ಪ್ರಚಾರ ಮಾಡುತ್ತಾರೆ. ಎಷ್ಟು ಅನಗತ್ಯ ಮತ್ತು ಅಸಹ್ಯ ?! ಹೀಗಾಗಿ ಜನರು ಊಟದ ಕಡೆಗೆ ಆಕರ್ಷಿತರಾಗಿ ಬರುವುದು ಸ್ವಾಭಾವಿಕ. ಶರಣ ಮೇಳದ ಜನರು (ಏನೂ ಗೊತ್ತಿಲ್ಲದೆ ಬರುವ ಕೆಲವು ಮುಗ್ಧಭಕ್ತರನ್ನು ಬಿಟ್ಟರೆ ಬಾಕಿಯವರು) ಚಿಂತನಶೀಲರು. ಯಾರು ಏನು ಜ್ಞಾನ ಕೊಡುವರೋ ಎಂದು ಮೈಯೆಲ್ಲ ಕಿವಿಯಾಗಿ ಭಾಷಣ ಕೇಳುತ್ತಾರೆ. ಮಧ್ಯಾಹ್ನ 3 ಗಂಟೆಯಾಗಿರಲಿ, ರಾತ್ರಿ 10 ಗಂಟೆಯಾಗಿರಲಿ ಜ್ಞಾನಾಮೃತ ಪಾನ ಮಾಡಲು ಉತ್ಸುಕರಾಗಿರುತ್ತಾರೆ. ಕೇವಲ ವಿದ್ಯಾವಂತರಷ್ಟೇ ಬುದ್ಧಿವಂತರಲ್ಲ, ಜ್ಞಾನವಂತರಲ್ಲ. ಶರಣ ಮೇಳಕ್ಕೆ ಕೇವಲ ವಿದ್ಯಾವಂತರು ಬರದಿದ್ದರಷ್ಟೆ ಜ್ಞಾನವಂತರು ಬರುತ್ತಾರೆ ಎಂಬುದು ಗಮನಾರ್ಹ.

ರಾಷ್ಟ್ರ-ಸಮಾಜ-ಸಾಹಿತ್ಯ ಕುರಿತು ಚರ್ಚೆ ಇಟ್ಟರೆ ಪ್ರೌಢವಾಗಿ ಚಿಂತಿಸುವವರು ಮಾತ್ರ ಬರುತ್ತಾರೆ. ರಜೆಯ ಸೌಲಭ್ಯದ ಆಮಿಷ ಒಡ್ಡುವುದು, ಊಟದ ವಸ್ತುಗಳ ಬಗ್ಗೆ ಪ್ರಚಾರ ಕೊಡುವುದು ಮುಂತಾದ ಕೆಳಮಟ್ಟದ ಆಮಿಷ ಒಡ್ಡಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂಘಟಕರು ಮೂಢ ಜಾತ್ರೆಯನ್ನಾಗಿ ಮಾಡಿರುವುದರಿಂದ ಅಂಥ ಅವಾಂತರ ನಡೆದಿದೆ.

ಪ್ರೊ. ವಸಂತ ಕುಷ್ಟಗಿ.- ಫೆಬ್ರವರಿ ಕಲ್ಯಾಣ ಕಿರಣ, ಬಸವ ಕಲ್ಯಾಣದ ಕಾರ್ಯಕ್ರಮ ಎಲ್ಲ ಕುರಿತು ಓದಿ ಸಂತೋಷವಾಯಿತು. ಷಟ್‌ಸೂತ್ರದಲ್ಲಿ 4ನೆಯ ಸೂತ್ರ ಧರ್ಮಕ್ಷೇತ್ರ ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ ಎಂಬುದರ ಜೊತೆ ಶರಣ ಭೂಮಿ ಬಸವ ಕಲ್ಯಾಣ ಎಂಬುದೂ ಸೇರ್ಪಡೆಯಾದುದು ಆನಂದವನ್ನು ತಂದಿತು. ಒಂದು ಆತ್ಮೀಯ ಸಲಹೆ ಎಂದರೆ ಬಸವ ಕಲ್ಯಾಣ ಬಸವಣ್ಣನವರ ಕಾರ್ಯಕ್ಷೇತ್ರ, ಕೂಡಲಸಂಗಮ ಐಕ್ಯಕ್ಷೇತ್ರ. ಆದ್ದರಿಂದ ಘೋಷಣೆ ಹೀಗಿದ್ದರೆ ಸಮಂಜಸವಲ್ಲವೆ ?

ನಮ್ಮ ಧರ್ಮಕ್ಷೇತ್ರ (ಗಳು) : ಬಸವಣ್ಣನವರ ಶರಣ ಭೂಮಿ ಬಸವ ಕಲ್ಯಾಣ ; ಐಕ್ಯ ಕ್ಷೇತ್ರ ಕೂಡಲಸಂಗಮ.

★ ಸಲಹೆ ಚೆನ್ನಾಗಿದೆ. ಆದರಿಷ್ಟೇ ಕಲ್ಯಾಣದ ಕಾರ್ಯಕ್ಷೇತ್ರದಲ್ಲಿ ಧರ್ಮಪಿತ ಬಸವಣ್ಣನವರು ಕ್ರಿಯಾರೂಪಕ್ಕೆ ತಂದ ಆಲೋಚನೆಗಳ ನೀಲನಕ್ಷೆ ಮೂಡಿದುದು ಕೂಡಲಸಂಗಮದಲ್ಲಿ. ಕೂಡಲಸಂಗಮವು ಐಕ್ಯಕ್ಷೇತ್ರ ಮಾತ್ರವಲ್ಲ ಅದು ಬಸವಣ್ಣನವರ ವಿದ್ಯಾಭೂಮಿ ತಪೋಸ್ಥಾನ. ಸಗುಣ ಸಾಕ್ಷಾತ್ಕಾರವಾದುದು, ಇಷ್ಟಲಿಂಗದ ಪರಿಕಲ್ಪನೆ ಮೂಡಿದುದು, ಸ್ವತಂತ್ರ ಧರ್ಮದ ರೂಪುರೇಷೆ ಉದಿಸಿದುದು, ಒಟ್ಟಾರೆ ಬಸವಣ್ಣನವರ ವ್ಯಕ್ತಿತ್ವ ನಿರ್ಮಾಣವಾದುದು ಕೂಡಲಸಂಗಮದಲ್ಲಿ. 1988ರ ಜನವರಿಯಲ್ಲಿ. ಜನವರಿ 14ರಂದು ಕೂಡಲಸಂಗಮವು ಧರ್ಮಕ್ಷೇತ್ರ ಎಂದು ಘೋಷಿಸಲಾಯಿತು. ಹೀಗಾಗಿ ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ ಎಂಬ ಮೊದಲನೆಯ ಸೂತ್ರಕ್ಕೆ ಶರಣ ಭೂಮಿ ಬಸವ ಕಲ್ಯಾಣ ಎಂದು ಇನ್ನರ್ಥ 2002ರ ಶರಣ ಮೇಳದಲ್ಲಿ ಸೇರಿಸಲಾಗಿದೆ. ■

2002 ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆ-ಉತ್ಸವಗಳು

ಗಣಮೇಳ (ಮಹಾಶಿವರಾತ್ರಿಯಂದು), ಸರ್ವಶರಣರ ದಿನಾಚರಣೆ	ಮಾರ್ಚ್ 12
ಪೂಜ್ಯ ಶ್ರೀ ಮಾತಾಜಿಯವರ ವರ್ಧಂತಿ	ಮಾರ್ಚ್ 13
806ನೆಯ ಕಲ್ಯಾಣ ಕ್ರಾಂತಿಯ ಸಂಸ್ಮರಣಾ ಕಾರ್ಯಕ್ರಮ	ಮಾರ್ಚ್ 25 ರಿಂದ 30
ಫಾಲ್ಗುಣ ದ್ವಾದಶಿ ಧರ್ಮಪಿತ ಗಡಿಪಾರು	ಮಾರ್ಚ್ 25
ತ್ರಯೋದಶಿ ಹರಳಯ್ಯ ಮಧುವರಸರ ಬಂಧನ	ಮಾರ್ಚ್ 26
ಚತುರ್ದಶಿ - ಶರಣರಿಗೆ ಎಳೆಹೂಟೆ ಶಿಕ್ಷೆ	ಮಾರ್ಚ್ 27
ಹೋಳಿ ಹುಣ್ಣಿಮೆ ಬಿಜ್ಜಳನ ವಧೆ	ಮಾರ್ಚ್ 28
ಕಲ್ಯಾಣದಿಂದ ಚನ್ನಬಸವಣ್ಣನವರ ನಿರ್ಗಮನ	ಮಾರ್ಚ್ 29
ಕಲ್ಯಾಣ ಕ್ರಾಂತಿ ಸಂಸ್ಮರಣಾ ದಿನ	ಮಾರ್ಚ್ 30
ಶೂನ್ಯ ಪೀಠ ಸ್ಥಾಪನೆಯ ಸಂಸ್ಮರಣಾ ದಿನ, ಅಲ್ಲಮಪ್ರಭು ಜಯಂತಿ (ಯುಗಾದಿ)	ಏಪ್ರಿಲ್ 13
ಡಾ|| ಅಂಬೇಡ್ಕರ್ ಜಯಂತಿ	ಏಪ್ರಿಲ್ 14
ಜಗನ್ಮಾತಾ ಅಕ್ಕಮಹಾದೇವಿ ಜಯಂತಿ	ಏಪ್ರಿಲ್ 27

Digitalized by e-Sahithya Documentation Forum
Sponsored by arayu Foundation Trust

ಆದೇಶ

ಸಹಿ
ಪ್ರಕಾಶ ರಾ. ಕಾವಗ
ಶಾಸನಾಚೆ ಕಕ್ಷ ಅಧಿಕಾರಿ

ಪ್ರತ :
ಆ. (ಕ್ಷೆ.ಪ್ರ) ಕಾರ್ಯಾಸನ, ಸಂಗ್ರಹಾರ್ಥ

ಮಹಾತ್ಮ ಬಸವೇಶ್ವರರ ಜಯಂತಿಯನ್ನು ರಾಜ್ಯದಲ್ಲಿ ಆಚರಿಸುವ ವಿಚಾರ

ಮಹಾರಾಷ್ಟ್ರ ಸರ್ಕಾರ, ಸಾಮಾನ್ಯ ಆಡಳಿತ ವಿಭಾಗ
ಶಾಸನ ನಿರ್ಣಯ ಕ್ರಮಾಂಕ : ಜಿಪ್ರಕಿ 2200/819/ಪ್ರ.ಕ್ರ.89/2000/29
ಮಂತ್ರಾಲಯ : ಮುಂಬಯಿ : 400032

ದಿನಾಂಕ 12 ಏಪ್ರಿಲ್ 2001

ಶಾಸನ ನಿರ್ಣಯ :

ಮಹಾತ್ಮ ಬಸವೇಶ್ವರರ ಜಯಂತಿಯನ್ನು ಪ್ರತಿವರ್ಷ ವೈಶಾಖ ಶುದ್ಧ ತೃತೀಯದಂದು ರಾಜ್ಯದಲ್ಲಿ ಆಚರಿಸಬೇಕೆಂದು ಶಾಸನ ನಿರ್ಣಯವನ್ನು ಹೊರಡಿಸಲಾಗಿದೆ. ಈ ವರ್ಷ ದಿನಾಂಕ 26 ಏಪ್ರಿಲ್ 2001ರಂದು ವೈಶಾಖ ಶುದ್ಧ ತೃತೀಯ (ಅಕ್ಷ ತೃತೀಯ) ಬರುತ್ತಿದ್ದು ಆ ದಿವಸದಂದು ಮಹಾತ್ಮ ಬಸವೇಶ್ವರರ ಜಯಂತಿಯನ್ನು ರಾಜ್ಯದಾದ್ಯಂತ ಸಾರ್ವತ್ರಿಕವಾಗಿ ಆಚರಿಸಬೇಕು.

ಸಮಸ್ತ ವಿಭಾಗೀಯ ಆಯುಕ್ತರು, ಜಿಲ್ಲಾಧಿಕಾರಿ ಮೊದಲಾದ ಅಧಿಕಾರಿಗಳು ತಮ್ಮ ತಮ್ಮ ಅಧಿಕಾರ ಕ್ಷೇತ್ರದಲ್ಲಿ ಈ ದಿನವನ್ನು ಆಚರಿಸತಕ್ಕದ್ದು ಮಹಾತ್ಮ ಬಸವೇಶ್ವರರ ಮಾನ್ಯತೆ ಪಡೆದ ಛಾಯಾಚಿತ್ರಗಳು ಮುಂಬಯಿಯ ಅಧಿಕೃತ ಮಧ್ಯವರ್ತಿ ಮುದ್ರಣಾಲಯದಲ್ಲಿ ಅಥವಾ ನಾಗಪುರ ಶಾಖೆಯಲ್ಲಿ ಉಪಲಬ್ಧವಿರುತ್ತದೆ. ಚಿತ್ರಗಳನ್ನು ಅಲ್ಲಿಂದ ಪಡೆದುಕೊಳ್ಳತಕ್ಕದ್ದು.

ಎಲ್ಲ ಸಚಿವಾಲಯಗಳ ವಿಭಾಗಗಳ ನಿಯಂತ್ರಣದಲ್ಲಿರುವ ಪ್ರಮುಖ ಅಧಿಕಾರಿಗಳು, ಕಾರ್ಯಾಲಯ ಮುಖ್ಯಾಧಿಕಾರಿಗಳು, ಮಹಾತ್ಮ ಬಸವೇಶ್ವರರ ಜಯಂತಿಯನ್ನು ಸೂಕ್ತ ರೀತಿಯಲ್ಲಿ ಆಚರಿಸಲು ಸೂಚನೆಯನ್ನು ನೀಡಲಾಗಿದೆ.

ಸಹಿ./ಶಂ.ವಿ. ನಲವಡೆ
ಉಪಸಚಿವ, ಮಹಾರಾಷ್ಟ್ರ ಶಾಸನ

ವಿಷಯ : ಮಹಾತ್ಮ ಬಸವೇಶ್ವರರ ಜಯಂತಿ ಆಚರಣೆಯ ವಿಚಾರ, ಸಾಮಾನ್ಯ ಶಾಸನ ವಿಭಾಗದ ಮಂತ್ರಾಲಯ : ಮುಂಬಯಿ ಶಾಸನ ನಿರ್ಣಯ : ಕ್ರಮಾಂಕ ಜಿಪುಕಿ2200/819/ಪ್ರ.ಕ್ರ/89/2000/29/12-4-2001ರ ಪ್ರತಿ. ಕ್ರಮಾಂಕ : ಸಂಕೀರ್ಣ/2000/(245)2001

ಆ (ಕ್ಷೇ.ಪ್ರ), ಅಧಿಕಾರಿ ವಿಭಾಗ
ಮಂತ್ರಾಲಯ ಮುಂಬಯಿ 400032. ದಿನಾಂಕ 24-4-2001

ಪ್ರತಿ :
1. ಪಾಠಬಂಧಾರೆ ವಿಭಾಗದ ಅಧಿಕಾರ ಕ್ಷೇತ್ರದ ಮತ್ತು ಮಹಾಮಂಡಳಿಗಳ ಕಾರ್ಯಕಾರಿ ಸಂಚಾಲಕರಿಗೆ
2. ಪಾಠಬಂಧಾರೆ ವಿಭಾಗದ ಅಧಿಕಾರ ಕ್ಷೇತ್ರದ ಮತ್ತು ಮಹಾ ಮಂಡಳಿಗಳ ಕಾರ್ಯಕಾರಿ ಸಂಚಾಲಯಕರಿಗೆ.
3. ಪಾಠಬಂಧಾರೆ ವಿಭಾಗದ ಅಧಿಕಾರ ವ್ಯಾಪ್ತಿಯ ಸರ್ವ ಅಧೀಕ್ಷಕ ಅಭಿಯಂತರರಿಗೆ.
4. ಪಾಠಬಂಧಾರೆ ವಿಭಾಗದ ಅಧಿಕಾರ ವ್ಯಾಪ್ತಿಯ ಸರ್ವಕಾರ್ಯಕಾರಿ ಅಭಿಯಂತರರಿಗೆ.

ಮೇಲೆ ಸೂಚಿಸಿದ ಅಧಿಕಾರಿಗಳು ಮಹಾತ್ಮ ಬಸವೇಶ್ವರರ ಜಯಂತಿಯನ್ನು ಶಾಸನ ನಿರ್ಣಯದಂತೆ ಆಚರಿಸಲು ವಿನಂತಿಸುತ್ತಾ.

ಬಸವ ಮಂತ್ರ ಕುರಿತು ವ್ಯಾಖ್ಯಾನಗಳು

1. ಪರ್ವತ ಶಿವಯೋಗಿಯು ಚನ್ನಬಸವಣ್ಣನವರ "ಮಿಶ್ರಾರ್ಪಣ" ಎಂಬ ಕೃತಿಗೆ ವ್ಯಾಖ್ಯಾನ ಮಾಡುವಾಗ ಆರಂಭದಲ್ಲಿ ಬಸವ ಲಿಂಗ ಮಂತ್ರದ ವ್ಯಾಖ್ಯಾನವನ್ನು ಹೀಗೆ ಮಾಡುತ್ತಾನೆ.

ಶ್ರೀ ಗುರು ಬಸವಲಿಂಗಾಯ ನಮಃ

ಶ್ರೀ - ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳ
ಗುರು - ಮುಕ್ತಿ ಮೌಲ್ಯ ಪ್ರದಾಯಕನಾದ
ಬಸವ - ನಾದಬಿಂದು ಕಲಾಸ್ವರೂಪನಾದ
ಲಿಂಗಾಯ - ಲಯಗಮನಂಗಳಿಗೆ ಕಾರಣವಾದ ವಸ್ತು ವಿದ್ಯೆಗೆ
ನಮಃ - ನಮಸ್ಕಾರವು
ಶ್ರೀ - ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳ
ಗುರು - ಗುಣಗಂಭೀರ ರುಚಿಯನುಳ್ಳಂಥ
ಬಸವ - 'ಬ' ಕಾರವೇ ಭವಹರ ಸದ್ರೂಪವಾದ ಗುರುಸ್ವರೂಪವು
'ಸ' ಕಾರವೇ ಸಕಲ ಚೈತನ್ಯ ಸ್ವರೂಪ
'ವ' ಕಾರವೇ ಆನಂದ ಸ್ವರೂಪವಾದ ಜಂಗಮವನೇ
ತನ್ನಾತ್ಮಾಂಗದಲ್ಲಿ ಸಾಹಿತ್ಯವ ಮಾಡಿಕೊಂಡ
ಸಂಗನ ಬಸವೇಶ್ವರನೆಂಬ ಗುರುಮೂರ್ತಿಯ
ಲಿಂಗಾಯ - ಲಯಗಮನಂಗಳಿಗೆ ಕಾರಣವಾದ ಮುಕ್ತಿಪದ
ಪ್ರವಿಷ್ಟ ಲಿಂಗದೇವೇಶಗೋಸ್ಕರ
ನಮಃ - ನಮಸ್ಕಾರವು

ಓಂ ಶ್ರೀ ಗುರುಬಸವಲಿಂಗಾಯನಮಃ

2. ಮಂತ್ರ ದ್ರಷ್ಟಾರರು - ಬಸವಾತ್ಮಜೆ ಮಾತಾಜಿ

ಅರ್ಥ :

ಓಂ ಶ್ರೀ ಗುರು ಬಸವ
ಓಂಕಾರದ ಪ್ರತಿನಿಧಿಯಾದ ಶ್ರೀ ಗುರು ಬಸವಣ್ಣನವರಿಗೆ
ಲಿಂಗಾಯ ನಮಃ
ಓಂಕಾರ ಸ್ವರೂಪವೇ ಆದ ಸಚ್ಚಿದಾನಂದ ನಿತ್ಯ ಪರಿಪೂರ್ಣನು
ಸೃಷ್ಟಿ-ಸ್ಥಿತಿ-ಲಯಗಳ ಕಾರಣ ಕರ್ತನೂ ಆದ ಲಿಂಗದೇವನಿಗೆ ನಮಸ್ಕಾರ.

ದೇವರ ಹೆಸರು ಬಸವ ಲಿಂಗ ?

ಭಾವ ಭಾವವನೆ ಭಾವಿಸಲು, ಅನುಭಾವ ನಿ
ರ್ಭಾವ ಏಕಾರ್ಥವೆಂದರಿದ ಗುರುವೆ
ಕೂಡಲಚನ್ನಸಂಗಯ್ಯ ನಿಮ್ಮುವನು
ಬಸವ ಲಿಂಗಾ, ಲಿಂಗ ಎನುತಿರ್ದೆನು !

- ಚನ್ನಬಸವಣ್ಣನವರು ಶಿವದಾಸ ಗೀತಾಂಜಲಿ, ಪುಟ 188

Digitalized by e-Sahithya Documentation Forum
Sponsored by arayu Foundation Trust

ಲಿಂಗಾಯತ

ಮುಂದೆ ಬರಲಿರುವ ಜನಗಣನೆಯಲ್ಲಿ (ಖಾನೇಷುಮಾರಿಯಲ್ಲಿ) ಲಿಂಗವಂತರು (ಲಿಂಗಧಾರಿಗಳು) ಎಲ್ಲರೂ ಲಿಂಗಾಯತ ಎಂಬುದಾಗಿ ತಮ್ಮ ಧರ್ಮವನ್ನು ಬರೆಯಿಸ ಬೇಕೆಂದು ಧಾರವಾಡದಲ್ಲಿ ಈ ಹಿಂದೆ ಶ್ರೀ ನಿ. ಪ್ರ. ಸಂಗನಬಸವ ಸ್ವಾಮಿಗಳವರು ಬಂಥನಾಳ ಇವರ ಅಧ್ಯಕ್ಷತೆಯಲ್ಲಿ ನಡೆದ ಶಿವಾನುಭವ ಸಮ್ಮೇಳನದಲ್ಲಿ ನಿರ್ಣಯ ಮಾಡಿದ್ದಾರೆ. ಜನಪರಿಗಣನೆಯಲ್ಲಿ ಲಿಂಗವಂತರ ಸಂಖ್ಯೆ ಎಷ್ಟೆಂದು ತಿಳಿಯುವುದು ಆವಶ್ಯಕವಾಗಿದೆ. ಕೆಲವರು ತಮ್ಮ ಧರ್ಮವು ವೀರಶೈವ ಎಂದು ತಿಳಿದು ಹಾಗೆ ಬರೆಯಿಸಿದರೆ ವೀರಶೈವರ ಸಂಖ್ಯೆ ಲಿಂಗವಂತರ ಸಂಖ್ಯೆ ಬೇರೆಬೇರೆಯಾಗಿ ಒಟ್ಟು ಸಂಖ್ಯೆಯ ಗಣನೆಗೆ ಅನುಕೂಲವಾಗುವುದಿಲ್ಲ. ಕೆಲವರು ಒಕ್ಕಲಿಗ, ಕುಂಬಾರ ಮುಂತಾದ ಉದ್ಯೋಗದ ಹೆಸರಿನಿಂದ ಬರೆಯಿಸಿದರೆ ಒಟ್ಟು ಸಂಖ್ಯೆಯ ಗಣನೆಗೆ ಇನ್ನೂ ತೊಡಕಾಗುತ್ತದೆ. ಆದುದರಿಂದ ಲಿಂಗವಂತರೆಲ್ಲರೂ ಒಂದೇ ಗುಂಪಿನಲ್ಲಿ ಎಣಿಸಲ್ಪಡಬೇಕೆಂಬ ಮುಖ್ಯ ಉದ್ದೇಶದಿಂದ "ಲಿಂಗಾಯತ" ಎಂದು ಬರೆಯಿಸುವುದು ಅವಶ್ಯಕವಾಗಿದೆ. ಈ ವಿಷಯವನ್ನು ಅಧ್ಯಕ್ಷ ಮಹಾಶಯರು ಬಹಳ ಚೆನ್ನಾಗಿ ವಿವರಿಸಿ ಅಪ್ಪಣೆ ಕೊಡಿಸಿದ್ದಾರೆ. ಹೀಗೆ ಬರೆಯಿಸುವುದರಿಂದ ಲಿಂಗವಂತರ ಧರ್ಮ ಸಂಸ್ಕಾರದ ಯಾವ ಹಕ್ಕುಬಾಧ್ಯತೆಗಳಿಗೂ ಕೊರತೆ ಬರುವುದಿಲ್ಲ ಎಂಬುದನ್ನು ಸರ್ವ ಲಿಂಗವಂತರೂ ಮುಖ್ಯವಾಗಿ ಗಮನದಲ್ಲಿಡಬೇಕು. ಖಾನೇಷುಮಾರಿಯು ಸಂಖ್ಯೆಯ ಗಣನೆಗೆ ಮಾತ್ರ ಇದೆಯೇ ಹೊರತು ಉಳಿದ ಧಾರ್ಮಿಕ ವಿಷಯಗಳಿಗೆ ಅದು ಮುಖ್ಯವಲ್ಲವೆಂಬುದನ್ನು ಸರ್ವರೂ ಚೆನ್ನಾಗಿ ತಿಳಿದಿರಬೇಕಾಗಿದೆ.

– ಪ್ರಕಾಶಕ, ಸದ್ಧರ್ಮದೀಪಿಕೆ, ಮೈಸೂರು

1960 ನೆಯ ಇಸವಿಯಲ್ಲಿ ಸದ್ಧರ್ಮದೀಪಿಕೆ, ಮೈಸೂರು ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಒಂದು ತುಣುಕು ಇದು. ಪ್ರಕಾಶಕರು ಜನಗಣತಿ (1961ರ ಜನಗಣತಿ) ಯಲ್ಲಿ ಲಿಂಗಧಾರಿಗಳು ಲಿಂಗಾಯತ ಎಂದು ಮಾತ್ರ ಬರೆಸಬೇಕೆಂದು ಕರೆ ನೀಡಿದ್ದಾರೆ. ತಮ್ಮ ಹೇಳಿಕೆಗೆ ಪೂರಕವಾಗಿ ಲಿಂ॥ ಶ್ರೀ ನಿ.ಪ್ರ. ಸಂಗನಬಸವ ಸ್ವಾಮಿಗಳು, ಬಂಥನಾಳ ಇವರ ಅಧ್ಯಕ್ಷತೆಯಲ್ಲಿ ನಡೆದ ಶಿವಾನುಭವ ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯವನ್ನು ಉಲ್ಲೇಖಿಸಿದ್ದಾರೆ. ಮೊದಲಿನಿಂದಲೂ ಲಿಂಗಾಯತ ಸಮಾಜದಲ್ಲಿ ಇದೊಂದೇ ಪದವು ಬಳಕೆಯಲ್ಲಿದ್ದು ಕಾಲಾನಂತರದಲ್ಲಿ ವೀರಶೈವವಾದಿಗಳು ಗೊಂದಲವನ್ನು ಹುಟ್ಟುಹಾಕಿದ್ದಾರೆ. ಈ ಸಮಾಜದ ದುರಂತವೇನೆಂದರೆ 1960ರಲ್ಲಿ ಶ್ರೀ ನಿ.ಪ್ರ. ಬಂಥನಾಳ ಸಂಗನಬಸವ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆದ ಶಿವಾನುಭವ ಸಮ್ಮೇಳನ ಕಾಲದಿಂದಲೂ (ನಾನು ಇನ್ನು ಧಾರ್ಮಿಕ ರಂಗವನ್ನೇ ಪ್ರವೇಶಿಸಿರಲಿಲ್ಲ) ಹೇಳಿಕೆ ನೀಡುತ್ತಾ ಬಂದಿದ್ದರೂ ಈ ವಿಷಯವನ್ನು ಎಲ್ಲ ಲಿಂಗಾಯತರಿಗೂ ಮುಟ್ಟಿಸಲು ಆಗಿಲ್ಲದುದು ಮತ್ತು ಕೇಂದ್ರ ಸರ್ಕಾರದಿಂದ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಲು ಆಗದೆ ಇರುವುದು. ಅತ್ಯಂತ ವಿಷಾದನೀಯ. ಇಲ್ಲಿ ಪರಸ್ಪರ ಆಂತರಿಕವಾಗಿ ಹೋರಾಡುವ ಶಕ್ತಿಗಳು ಬಹಳ ಇರುವುದರಿಂದ ಯಾವುದರಲ್ಲಿಯೂ ನೆಲೆ ಕಾಣಲು ಲಿಂಗಾಯತ ಸಮಾಜಕ್ಕೆ ಆಗುತ್ತಲಿಲ್ಲ.

–ಮಾತಾಜಿ

ಧನ್ಯವಾದ ಅರ್ಪಣೆ

ಶಿವಲಿಂಗ ಸ್ವಾಮಿ, ಹುಲ್ಸೂರು.- ನನಗೆ ಕನ್ನಡದೊಡನೆ ಮರಾಠಿ ಅಭ್ಯಾಸವಿದೆ ; ಮರಾಠಿಯಲ್ಲಿ ಪ್ರವಚನ ಮಾಡುವುದರಿಂದ ಮಹಾರಾಷ್ಟ್ರದಲ್ಲಿ ಸಂಚರಿಸುತ್ತೇನೆ. " ನಿಮಗೆ ಭಾಷೆ ತಿಳಿಯದೆ ಇದ್ದರೂ ಅಷ್ಟೇ ಶರಣ ಮೇಳಕ್ಕೆ ಬಂದು ಜನರನ್ನು ನೋಡಿರಿ, ಕಾರ್ಯಕ್ರಮ ವೀಕ್ಷಿಸಿರಿ" ಎಂದು ಜನರನ್ನು ಕರೆತಂದೆ. ಶರಣ ಮೇಳ ನೋಡಿ ನಿಜಕ್ಕೂ ಪ್ರಭಾವಿತರಾದರು. ಸಂಗಮೇಶ್ವರ ದೇವಾಲಯಕ್ಕೆ ಕರೆದೊಯ್ದಾಗ ಅವರು "ಬಸವಣ್ಣನವರು ಕೂಡಲಸಂಗಮದೇವ ಎಂದು ಪೂಜಿಸಿದ್ದು ಇದೇ ಲಿಂಗವನ್ನೇ ? ಹಾಗಾದರೆ ನೀವೇಕೆ ಏಕದೇವೋಪಾಸನೆ ಹೇಳುತ್ತೀರಿ ?" ಎಂದು ಕೇಳಿದರು. ಅವರ ಪ್ರಶ್ನೆಯಿಂದ ಚಕಿತನಾದರೂ ನಿಮ್ಮನ್ನು (ಮಾತಾಜಿಯವರನ್ನು) ಮನದಲ್ಲೇ ಪರಿಹಾರ ಕೊಟ್ಟುದಕ್ಕೆ ವಂದಿಸಿ ಅವರಿಗೆ ಹೇಳಿದೆ." ಬಸವಣ್ಣನವರು ಬಾಲ್ಯದಲ್ಲಿ ಸಂಗಮೇಶ್ವರ ದೇವಾಲಯದಲ್ಲಿ ಪೂಜಾರಿಯಾಗಿದ್ದರು. ಆಗ ಬರೆದ ವಚನಗಳಲ್ಲಿ ಕೂಡಲ ಸಂಗಮೇಶ್ವರನನ್ನು ಸ್ತುತಿಸಿದರು. ನಂತರ ಇಷ್ಟಲಿಂಗವನ್ನು ಕೊಟ್ಟರು. ಸೃಷ್ಟಿಕರ್ತನನ್ನು ಲಿಂಗದೇವನೆಂದು ಕರೆದು ಅವನ ಕುರುಹಾದ ಇಷ್ಟಲಿಂಗವನ್ನು ಏಕನಿಷ್ಠೆಯಿಂದ ಪೂಜಿಸಲು ಹೇಳಿದರು. ಇದನ್ನು ಕೇಳಿ ಆ ವ್ಯಕ್ತಿಗೆ ಬಹಳ ಸಂತೋಷ, ಸಮಾಧಾನವಾಯಿತು. ಬಹುದೊಡ್ಡ ಒಂದು ಸಮಸ್ಯೆಯನ್ನು 'ಲಿಂಗದೇವ'ನ ಮೂಲಕ ಪರಿಹರಿಸಿದ ನಿಮಗೆ ಧನ್ಯವಾದಗಳು.

ಬಸವ ಕಲ್ಯಾಣದಲ್ಲಿ ನಡೆಯುವ ಕಲ್ಯಾಣ ಪರ್ವದ ದಿನಾಂಕಗಳಲ್ಲಿ ಕೊಂಚ ಬದಲಾವಣೆ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಎಂಬ 3 ದಿನಗಳ ಕಾರ್ಯಕ್ರಮ ಸಂಯೋಜಿಸಲಾಗಿದ್ದು ಈ ಬಗ್ಗೆ 15ನೆಯ ಶರಣ ಮೇಳದಲ್ಲಿ ಘೋಷಣೆ ಮಾಡಿ, ಕರಪತ್ರ, ರಸೀದಿ ಪುಸ್ತಕ ಸಹಿತ ವಿತರಿಸಲಾಗಿದೆ. ಆ ದಿನಾಂಕಗಳೆಂದರೆ ಏಪ್ರಿಲ್ 30, ಮೇ 1 ಮತ್ತು 2.

ಇದೇ ಇಂದು (16-2-2002) ಶರಣೆ. ಮಹಾನಂದಾತಾಯಿ ಮುಗಳಿ ಇವರಿಂದ ಪತ್ರ (ದಿ. 11-2-2002) ಬಂದಿದೆ. ಅದರಲ್ಲಿ ಮಹತ್ವಪೂರ್ಣವಾದ ಒಂದು ಬೇಡಿಕೆ /ಸೂಚನೆ ಮುಂದಿಟ್ಟಿದ್ದಾರೆ. ಬಸವ ಕಲ್ಯಾಣದಲ್ಲಿ ಒಂದು ಮಠವನ್ನು ಕಟ್ಟುವ ಯೋಜನೆ ಹಾಕಿದ್ದು ಮತ್ತು 3 ದಿವಸಗಳ ಕಾರ್ಯಕ್ರಮವೊಂದನ್ನು ಹಾಕಿಕೊಂಡಿದ್ದು ತುಂಬಾ ಸಂತೋಷದ ಸಂಗತಿ ಎಂದು ಬಸವ ಕಲ್ಯಾಣವು ಮಹಾರಾಷ್ಟ್ರ, ಆಂಧ್ರಗಳಿಗೆ ಸಮೀಪವಿರುವುದರಿಂದ ಅಲ್ಲಿಯ ಜನರಿಗೆ ತುಂಬಾ ಸಂತೋಷವಾಗಿದೆಯೆಂದೂ ತಿಳಿಸಿದ್ದಾರೆ. ಮಹಾರಾಷ್ಟ್ರ ರಾಜ್ಯೋತ್ಸವವು ಮೇ 1 ರಂದು ಇದ್ದು, ರಾಜ್ಯೋತ್ಸವದಲ್ಲಿ ಭಾಗಿಗಳಾಗಲು ಶಿಕ್ಷಕರಿಗೆ ಕಡ್ಡಾಯಗೊಳಿಸಲಾಗಿದೆ. ಆದ್ದರಿಂದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಗಳಾದ ನಂತರ ಅವರು ಕಲ್ಯಾಣ ಪರ್ವ ಕಾರ್ಯಕ್ರಮಕ್ಕೆ ಹೊರಡಲು ಸಾಧ್ಯ. ಏಪ್ರಿಲ್ 30ಕ್ಕೆ ಕಾರ್ಯಕ್ರಮ ಆರಂಭವಾದರೆ ಅವರಿಗೆ ಕೇವಲ ಮೇ 2 ರ ಕಾರ್ಯಕ್ರಮ ಮಾತ್ರ ಲಭ್ಯವಾಗುತ್ತದೆ. ಆದ್ದರಿಂದ ಕಾರ್ಯಕ್ರಮವು ಮೇ 1, 2, 3 ರಂದು ನಡೆದರೆ ಮಹಾರಾಷ್ಟ್ರದ ಶಿಕ್ಷಕರು, ವಿದ್ಯಾರ್ಥಿಗಳು ರಾಜ್ಯೋತ್ಸವ ಕಾರ್ಯಕ್ರಮ ಮುಗಿಸಿಕೊಂಡು ಹೊರಟರೆ ಮೇ 2 ಮತ್ತು 3 ರ ಕಾರ್ಯಕ್ರಮ ಲಭ್ಯವಾಗುತ್ತದೆ.

ದಿನಾಂಕ ಬದಲಾವಣೆಗೆ ಅತ್ಯುತ್ತಮವಾದ ಕಾರಣವನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ, ಮಹಾರಾಷ್ಟ್ರದ ಶರಣ ಬಂಧುಗಳಿಗೆ ಅನುಕೂಲ ಮಾಡಿಕೊಡಲು ಕಲ್ಯಾಣ ಪರ್ವವನ್ನು ಮೇ 1, 2 ಮತ್ತು 3 ರಂದು ಏರ್ಪಡಿಸಲು ನಿರ್ಧರಿಸಲಾಗಿದೆ. ಮೇ 2ರಿಂದ ಆರಂಭವಾದರೆ ಇನ್ನೂ ಉತ್ತಮ ಎಂಬ ಸಲಹೆಯನ್ನು ಶರಣೆ ಮಹಾನಂದಾತಾಯಿ ಮುಂದಿಟ್ಟಿರುವರಾದರೂ ಜಾಗತಿಕ ಕಾರ್ಮಿಕ ದಿನ ಮೆ 1 ಇರುವುದರಿಂದಲೂ, ಮಡಿವಾಳ ಮಾಚಿದೇವರ ಜಯಂತಿಯ ದಿನವನ್ನಾಗಿ ನಾವು ಘೋಷಿಸಿರುವುದರಿಂದಲೂ ಕಲ್ಯಾಣ ಪರ್ವವನ್ನು ಮೇ 1 ರಂದು ಆರಂಭಿಸಲಾಗುವುದು. ಈ ಬದಲಾವಣೆಯನ್ನು ಗಮನಿಸಿ ಶರಣ ಬಂಧುಗಳು ಪ್ರಚಾರ ಮಾಡಬೇಕು.

–ಮಾತಾಜಿ

Digitalized by e-Sahithya Documentation Forum
Sponsored by arayu Foundation Trust

ಪತ್ರ ವಿಮರ್ಶೆ :

ಲಿಂಗಾಯತ - ವೀರಶೈವ ತೌಲನಿಕ ಚಿತ್ರಣ

ಮಾತೆ ಮಹಾದೇವಿ ಹೇಳಿದ ಅಪ್ಪಟ ಸತ್ಯ

ಮಾನ್ಯರೇ

ಕೂಡಲಸಂಗಮದಲ್ಲಿ ನಡೆದ ಶರಣ ಮೇಳದ ಕೊನೆಯ ದಿನ ಮಾತೆ ಮಹಾದೇವಿಯವರು "ಬಸವಣ್ಣ ವೀರಶೈವನಲ್ಲ" ಎಂದು ಹೇಳಿದ್ದಾರೆ. ಅದಕ್ಕೆ ನನ್ನ ಅನಿಸಿಕೆ. ಬಸವಣ್ಣನು ವೀರಶೈವನೆಂದು ಯಾರು ಹೇಳುತ್ತಾರೆ ? ಅವನು ಸ್ಮಾರ್ತ ಬ್ರಾಹ್ಮನನೇ ಹೊರತು ವೀರಶೈವನಲ್ಲವೆಂಬುದು ಸರ್ವವಿಧಿತ. ಅದನ್ನೇ ಇವರು ಹೇಳಿದ್ದಾರೆ. ಅಂದರೆ ಇವರಿಗೆ ನಿಜ ಹೇಳಲಿಕ್ಕೂ ಬರುತ್ತದೆ. ಆದ್ದರಿಂದ ಇದು ಅಪ್ಪಟ ಸತ್ಯ ಮುಂದುವರಿಯುತ್ತಾ ಅವರು " ಬಸವಣ್ಣ ಲಿಂಗಾಯತ ಧರ್ಮದ ಸಂಸ್ಥಾಪಕನೇ ಹೊರತು ವೀರಶೈವನಲ್ಲ" ಎಂದು ತಮ್ಮ ಹಳೆಯ ರಾಗವನ್ನೇ ಹಾಡಿದ್ದಾರೆ. ಲಿಂಗಾಯತವೆಂಬುದು ಮತವೇ ಹೊರತು ಧರ್ಮವಲ್ಲ. ಬಸವಣ್ಣನು ತಾನು ಹುಟ್ಟಿದ ಮತಕ್ಕಿಂತ ವೀರಶೈವ ಮತದಲ್ಲಿ ತನಗೆ ಇಷ್ಟವಾದ ಅಂಶಗಳಿರುವುದರಿಂದ ಈ ವೀರಶೈವ ಮತವನ್ನು ಅಪ್ಪಿಕೊಂಡು ಉದ್ದರಿಸಿದನೇ ಹೊರತು ಸ್ಥಾಪಿಸಲಿಲ್ಲ. ಆತನೇ ಸ್ಥಾಪಕನೆಂಬ ಭ್ರಮೆಯಿಂದ ಮಾತೆ ಮಹಾದೇವಿಯವರು ಹೊರಬರಲಿ.

ಲಿಂಗಾಯತ ಮತ್ತು ವೀರಶೈವ ಎರಡೂ ಪದಗಳು ಒಂದೇ ಅರ್ಥವನ್ನು ಹೇಳುತ್ತವೆಯೇ ಹೊರತು ಬೇರೆ ಅಲ್ಲ. ಬೇರೆ ಬೇರೆ ಎಂದು ವಾದಿಸುವ ಮಾತೆ ಮಹಾದೇವಿಯವರು ಸಮಾಜವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಇದರಿಂದ ಅವರಿಗೇನು ನಷ್ಟ. ನಷ್ಟವಾಗುವುದು ಸಮಾಜಕ್ಕೆ. ಆದರೂ ಇವರು ಸಮಾಜ ಸುಧಾರಕರು.

ಬಸವಣ್ಣನು ವೀರಶೈವ ಮತವನ್ನು ಉದ್ಧಾರ ಮಾಡಿದನೆಂಬುದಕ್ಕೆ ಮಗ್ಗ ಮಾಯಿದೇವರು ತಮ್ಮ "ಶತಕತ್ರಯ"ದ ಆದಿಯಲ್ಲಿ "ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ ವೀರಶೈವ ನಿರ್ಣಯ ಪರಮಾವತಾರ ಎಂದು "ಲಿಂಗಾಯತ" ಎಂಬ ಪದಕ್ಕೆ ಬದಲಾಗಿ "ವೀರಶೈವ" ಪದವನ್ನು ಬಳಸಿದ್ದಾರೆ. ಅಂದರೆ ಎರಡೂ ಒಂದೇ ಎಂದು ಅರ್ಥ. ಇದನ್ನು ಮಾತೆ ಮಹಾದೇವಿಯವರು ಅರಿತುಕೊಳ್ಳುವುದು ಸೂಕ್ತ. ಅಲ್ಲದೆ ಬಸವಣ್ಣನ ಅಂಕಿತವನ್ನೇ ಅಳಿಸಿರುವ ಇವರಿಗೆ ಬಸವಣ್ಣನ ಬಗ್ಗೆ ಮಾತನಾಡು ಅಧಿಕಾರವಿದೆಯಾ ?

ಇನ್ನು ಅವರು ತಿಳಿದುಕೊಂಡಂತೆ ವೀರಶೈವರಲ್ಲಿ ಸಂಕುಚಿತ ಮನೋಭಾವವಾಗಲಿ, ಜಾತಿ ಪದ್ಧತಿಯಾಗಲಿ ಇಲ್ಲವೇ ಇಲ್ಲ. ವೃಥಾ ಆರೋಪ ಮಾಡುವುದು ವೀರಶೈವರಾದ ಮಾತೆ ಮಹಾದೇವಿಯವರಿಗೆ ಉಚಿತವಾದುದಲ್ಲ. ಸರ್ವರನ್ನು ಸಮಾನವೆಂದು ತಿಳಿದು ಸರ್ವರ ಏಳಿಗೆಯನ್ನು ಸಾಧಿಸುವುದೇ ವೀರಶೈವವೆಂಬುದೂ ಅಪ್ಪಟ ಸತ್ಯವೆ. ಆದ್ದರಿಂದ ಮಾತೆ ಮಹಾದೇವಿಯವರು ತಾವೇ ಹೇಳಿಕೆ ಕೊಟ್ಟ ಅಪ್ಪಟ ಸತ್ಯದೊಂದಿಗೆ ಈ ಅಪ್ಪಟ ಸತ್ಯವನ್ನೆ ಒಪ್ಪಿಕೊಂಡರೆ ಇಡೀ ಸಮಾಜಕ್ಕೆ ಕ್ಷೇಮ.

- ಜಿ.ಎಸ್. ಬಸವರಾಜಶಾಸ್ತ್ರೀ

(ನೋವು ನಲಿವು ವಿಭಾಗ, ಸಂಜೆವಾಣಿ, ದಿ.5-2-2002 , ಬೆಂಗಳೂರು ಸಂಚಿಕೆ)

ಪತ್ರ ವಿಮರ್ಶೆ : ನಾನು ಈ ದೃಷ್ಟಾಂತವನ್ನು ಯಾವಾಗಲಾದರೂ ಹೇಳಿರಬಹುದು, ಬರೆದಿರಬಹುದು ಆದರೆ ಈ ಹಿನ್ನಲೆಯಲ್ಲಿ ಮತ್ತೊಮ್ಮೆ ಹೇಳುತ್ತೇನೆ.

ಓರ್ವ ಪ್ರತಿಭಾವಂತ ಕೀರ್ತನಕಾರರಿದ್ದರು. ಒಂದೂರಿಗೆ ಕೀರ್ತನ ಮಾಡಲು ಬಂದರು, ಜನರನ್ನು ಆಕರ್ಷಿಸಿದರು. ಆ ಊರಿನ (ಮೂಢ? ಧೂರ್ತ ?) ಭಕ್ತರಿಗೆ ಸ್ವಾಮಿಗಳ

ಬಗ್ಗೆ ಅಪಾರ ಅಭಿಮಾನ ಬೆಳೆಯಿತು. ಅಲ್ಲಿಯ ಕಾರ್ಯಕ್ರಮ ಮುಗಿಸಿ ಧರ್ಮ ಪ್ರಚಾರಾರ್ಥ ಇನ್ನೊಂದು ಊರಿಗೆ ಹೊರಡಬೇಕು ಎನ್ನುವಾಗ ಅಲ್ಲಿಯ ಜನ, "ಸ್ವಾಮಿಗಳೇ, ನಮ್ಮ ಊರು ಬಿಟ್ಟು ಎಲ್ಲಿಯೂ ಹೋಗಬೇಡಿರಿ." ಎಂದು ದುಂಬಾಲು ಬಿದ್ದರು. "ಇಲ್ಲಪ್ಪ ; ನಾನು ಧರ್ಮಪ್ರಚಾರಕ. ಊರಿಂದ ಊರಿಗೆ ಹೋಗಿ ಧರ್ಮ ಬೋಧೆ ಮಾಡಬೇಕು. ನಿಂತ ನೀರಿನಂತೆ ಒಂದೇ ಕಡೆ ಇರಲಾರೆ." ಎಂದರು. ಆಗ ಆ ಧೂರ್ತ ಭಕ್ತರು ಹೇಳಿದರು, "ನಿಮ್ಮ ಮೇಲೆ ನಮಗೆ ಬಹಳ ಅಭಿಮಾನ ; ನೀವು ಇರಲೇ ಬೇಕು. ನಾವು ಹೇಳಿದಂತೆ ಕೇಳದಿದ್ದರೆ ಹಿಂದಿನ ಸ್ವಾಮಿಗಳಿಗೆ ಮಾಡಿದಂತೆ ನಿಮಗೂ ಮಾಡುತ್ತೇವೆ." ಎಂದರು. ಆಗ ಸ್ವಾಮಿಗಳಿಗೆ ಆಶ್ಚರ್ಯವಾಯಿತು. "ಹಿಂದಿನ ಸ್ವಾಮಿಗಳಿಗೆ ಏನು ಮಾಡಿದಿರಿ ? ಎಂದು ಕೇಳಿದರು. "ಅವರು ನಮ್ಮೂರಲ್ಲಿ ಇರಲು ಒಪ್ಪದುದಕ್ಕೆ ಅವರನ್ನು ಕೊಂದು ಸಮಾಧಿ ಮಾಡಿ ಮೇಲೆ ಗುಡಿ ಕಟ್ಟಿ, ಪೂಜಿಸುತ್ತಿದ್ದೇವೆ. ವರ್ಷಕೊಮ್ಮೆ ಅದ್ದೂರಿಯಾಗಿ ಜಾತ್ರೆ, ರಥೋತ್ಸವ ಮಾಡುತ್ತೇವೆ" ಎಂದಾಗ ಸ್ವಾಮಿಗಳು ದಿಗ್ಭ್ರಾಂತರಾದರು. ವೀರಶೈವವಾದಿಗಳಾದ ಬಸವರಾಜ ಶಾಸ್ತ್ರಿಗಳಂತಹವರ ಬಸವಾಭಿಮಾನವೂ ಇಷ್ಟೇ ಅದ್ಭುತವಾಗಿದೆ. ಕ್ರಾಂತಿ ಪುರುಷ ಬಸವಣ್ಣನವರ ಪ್ರಗತಿಪರ ಚಿಂತನೆ, ಸಮತಾವಾದ ಮುಂತಾದುವನ್ನೆಲ್ಲ ವೀರಶೈವದ ನಿರ್ಜೀವ ವಿಚಾರಧಾರೆಯ ಮಣ್ಣಿನಲ್ಲಿ ಹುಗಿದು, ಸಮಾಧಿ ಮಾಡಿ ಬಸವಣ್ಣನವರಿಗೆ ಗೌರವ ಸಲ್ಲಿಸಲು ತುಟಿ ಮರುಕ ತೋರಿಸಿ, ಮೊಸಳೆ ಕಣ್ಣೀರು ಸುರಿಸುವ ಧೂರ್ತರಿವರು. ಬಸವರಾಜ ಶಾಸ್ತ್ರಿಯವರು ಧರ್ಮಪಿತ ಬಸವಣ್ಣನವರ ಬಗ್ಗೆ ಏಕ ವಚನದಲ್ಲಿ ಬಳಸಿರುವ ಭಾಷೆಯ ಶೈಲಿ ನೋಡಿದರೆ ನಮಗೆ ರಕ್ತ ಕುದಿಯುತ್ತದೆ.

ವಿಜಯನಗರ ಸಾಮ್ರಾಜ್ಯವನ್ನು ಶ್ರೀ ಕೃಷ್ಣದೇವರಾಯನು ಆಳುತ್ತಿದ್ದ ಸಮಯ. ಓರ್ವ ಹಿಂದೂ ವಿದ್ವಾಂಸನು ಬಂದ. ಅವನು ಬಹುಭಾಷಾ ಕೋವಿದ. ಸಂಸ್ಕೃತದಿಂದ ಹಿಡಿದು ಕನ್ನಡ, ತೆಲುಗು, ಉರ್ದು ಎಲ್ಲವನ್ನು ನಿರರ್ಗಳವಾಗಿ ಮಾತನಾಡಬಲ್ಲವನಾಗಿದ್ದ. ವಿದ್ವಾಂಸ ಪ್ರೇಮಿಯಾದ ಶ್ರೀ ಕೃಷ್ಣದೇವರಾಯನು ಆತನಲ್ಲಿ ವಿಶ್ವಾಸವಿಟ್ಟು ಗೌರವಿಸುತ್ತಿದ್ದ. ಮಂತ್ರಿ ತಿಮ್ಮರಸನಿಗೆ ಮಾತ್ರ ಅವನ ಬಗ್ಗೆ ಸಂಶಯ. ಅದನ್ನು ವ್ಯಕ್ತ ಪಡಿಸಿದ. ಆದರೆ ರಾಜನು ಸಂದೇಹ ಪಡಲು ಇಚ್ಛಿಸಲಿಲ್ಲ. "ಈತ ವಿರೋಧಿಗಳ ಪರವಾಗಿ ಬಂದ ಗೂಢಚಾರ ; ಎಚ್ಚರದಿಂದಿರಬೇಕು." ಎಂದು ತಿಮ್ಮರಸ ನುಡಿದಾಗ ರಾಜನು ಇದು ವಿನಾಕಾರಣ ಸಂಶಯ ಎಂದು ನುಡಿದನು. ಆಗಂತುಕನ ಮಾತೃಭಾಷೆ ಏನಿರಬಹುದು ಎಂದು ನಾನಾ ವಿಧದಿಂದ ಪ್ರಯತ್ನಿಸಿದರೂ ತಿಳಿಯಲಾಗದಷ್ಟು ಅವನು ಎಲ್ಲ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಲಿದ್ದ. ತಿಮ್ಮರಸ ಒಂದು ಉಪಾಯ ಮಾಡಿದ. ಒಂದು ದಿನ ಆಗಂತುಕನನ್ನು ಅತಿಥಿಯನ್ನಾಗಿ ಆಹ್ವಾನಿಸಿ, ಸುಗ್ರಾಸ ಭೋಜನ ಮಾಡಿಸಿ, ಸುಪ್ಪತ್ತಿಗೆ ಹಾಸಿ, ಮಲಗಲು ಅನುವು ಮಾಡಿಕೊಟ್ಟ. ಆತನಿಗೆ ಗಡದ್ದಾಗಿ ನಿದ್ದೆ ಬಂದಿತು. ಗೊರಕೆ ಹೊಡೆಯಲು ತೊಡಗಿದ. ಆಗ ತಿಮ್ಮರಸ ತಣ್ಣೀರನ್ನು ಮುಖದ ಮೇಲೆ ಎರಚಿದ. ತಟ್ಟನೆ ಬೆಚ್ಚಿಬಿದ್ದ ಆಗುಂತಕ "ಅರೆ ಅಲ್ಲಾ" ಎಂದು ಉದ್ಗರಿಸಿ ಎದ್ದ. ಆತ ವಿರೋಧಿ ಮುಸಲೀಮ್ ರಾಜರ ಪರವಾಗಿ ಗೂಢಚರ್ಯೆ ಮಾಡಲು ಬಂದವನಾಗಿದ್ದ. "ಜಾಗ್ರತ ಮನಸ್ಸು ಎಷ್ಟೇ ಭಾಷೆ ಕಲಿತು

Digitalized by e-Sahithya Documentation Forum
Sponsored by arayu Foundation Trust

ಮಾತನಾಡಿದರೂ ಅಜಾಗೃತ ಮನಸ್ಸು ಮಾತ್ರ ಮಾತೃಭಾಷೆಯನ್ನೇ ಮಾತನಾಡುವುದು'' ಎಂಬುದನ್ನು ಆತ ತೋರಿಸಿಕೊಟ್ಟ.

ವೀರಶೈವವಾದಿಗಳ ಸ್ಥಿತಿಯೂ ಇದೇ ಆಗಿದೆ. ಬಸವ ಸಂಸ್ಥಾಪಿತ ಲಿಂಗಾಯತ ಧರ್ಮವನ್ನು ಪ್ರವೇಶ ಮಾಡಿದ ವಿವಿಧ ಶೈವ ಪಂಥೀಯರು ಲಿಂಗಾಯತದ ಮುಖವಾಡ ಹಾಕಿದ್ದರು. 2001ನೆಯ ಇಸವಿಯ ಜನಗಣತಿಯ ಸಂದರ್ಭವು ಅವರ ಮುಖವಾಡವನ್ನು ಕಳಚಿತು. ತನು ಭಕ್ತ - ಮನ ಭವಿ ಎಂಬಂತೆ ಅಂಗದ ಮೇಲೆ ಲಿಂಗವು ಆಯತವಾಗಿದ್ದರೂ ಒಳಗೆ ಇದ್ದುದು ವೀರಶೈವದ ಮೋಹ. ಮುಖವಾಡ ಒಬ್ಬೊಬ್ಬರದೇ ಕಳಚ ತೊಡಗಿದೆ.

1. ''ಆರೆ ಅಲ್ಲಾ'' ಎಂದು ಆ ಗೂಢಚಾರ ತಟ್ಟನೆ ಎದ್ದಂತೆ, ಲಿಂಗಾಯತ - ವೀರಶೈವ ಬೇರೆ ಬೇರೆ ಎಂದು ನಾವು ಸಾಧಾರಪೂರ್ವಕವಾಗಿ ಬಿಂಬಿಸುತ್ತಲೇ ವೀರಶೈವ ಹಿಡಿದುಕೊಂಡು ಮೊದಲು ಹೊರಬಿದ್ದವರು ಅಪ್ಪಟ ವೀರಶೈವವಾದಿಗಳಾದ ಪಂಚಾಚಾರ್ಯರು.

2. ನಂತರದ ಸರತಿ ಕೆಲವು ವಿರಕ್ತರದು. ಹುಬ್ಬಳ್ಳಿಯ ಮೂರುಸಾವಿರ ಮಠಾಧೀಶರು, ಮುಂಡರಗಿಯ ಅನ್ನದಾನ ಸ್ವಾಮಿಗಳು, ಶಿವಯೋಗ ಮಂದಿರದಲ್ಲಿ ತರಬೇತಿ ಹೊಂದಿದ ಬಹುಪಾಲು ಸ್ವಾಮಿಗಳು ವೀರಶೈವದ ಸೆರಗು ಹಿಡಿದು ತಮ್ಮ ಅಂತರಂಗವನ್ನು ತೆರೆದಿಟ್ಟರು.

3. ಇನ್ನು 3ನೆಯ ಕೊಡುಗೆ ಕೆಲವು ಸಾಹಿತಿಗಳದು. ವೇದಿಕೆಯ ಆಮಿಷ, ಪ್ರಶಸ್ತಿ-ಸನ್ಮಾನಗಳ ಹಂಬಲ, ತಮ್ಮ ಒಳಜಾತಿಯ ಅಭಿಮಾನಗಳಿಂದ ಲಿಂಗಾಯತ ಧರ್ಮದ ಇತಿಹಾಸವನ್ನು ಕೆಡಿಸಿ ವೀರಶೈವವನ್ನು ಕೃತಕವಾಗಿ ಬರವಣಿಗೆಯಲ್ಲಿ ಸೇರಿಸಿ 'ವೀರಶೈವ' ಪದವನ್ನೇ ಕೇಳರಿಯದಿದ್ದ ಲಿಂಗಾಯತರ ಕಿವಿಯ ಮೇಲೆ 'ನಾವು ವೀರಶೈವರು' ಎಂದು ಹೇಳಿಕೊಳ್ಳುವಂತೆ ಮಾಡಿ ಗೊಂದಲ ವೃದ್ಧಿ ಮಾಡಿದ ಪುಣ್ಯ ಪುರುಷರಿವರು.

ದೊಡ್ಡ ದೊಡ್ಡ ಸಾಹಿತಿಗಳೆಂದು ನಂಬಿ, ಅವರು ಬರೆದುದನ್ನು ಶ್ರದ್ಧೆಯಿಂದ ಓದಿ ನಾವೂ ಬಹುಕಾಲ ಅದನ್ನೇ ಸತ್ಯವೆಂದು ನಂಬಿದುದುಂಟು. ಜಾಗತಿಕ ಧರ್ಮಗಳ, ಜಾಗತಿಕ ಪ್ರವಾದಿಗಳ ತೌಲನಿಕ ಅಧ್ಯಯನ ಮಾಡಲು ತೊಡಗಿದ ಮೇಲೆಯೇ ಬಸವಣ್ಣನವರ ವಿರಾಟ್ ವ್ಯಕ್ತಿತ್ವ ದರ್ಶನ ಲಿಂಗಾಯತ ಧರ್ಮದ ವಿಶಾಲತೆ, ಸಾರ್ವಭೌಮತೆ ನಮಗೆ ಅರ್ಥವಾಗಿ ನಂತರ ಸಾಹಿತಿಗಳ ಕೃತಿಗಳನ್ನು ಈ ದಿಶೆಯಲ್ಲಿ ವಿಮರ್ಶಿಸುವ ಆತ್ಮವಿಶ್ವಾಸ ಮೂಡಿತು.

ಈ ವೀರಶೈವವಾದಿಗಳಿಂದ ಆಗುತ್ತಿರುವ ಕಿರಿಕಿರಿ ಒಂದಲ್ಲ ಎರಡಲ್ಲ.

1. ವೀರಶೈವವಾದಿಗಳು ಧರ್ಮಗುರು ಬಸವಣ್ಣನವರನ್ನು ಪೂರ್ಣಪ್ರಮಾಣದಲ್ಲಿ ಗೌರವಿಸದೆ, ಅವರ ಮತ್ತು ಶರಣರ ವಚನಗಳನ್ನು ಜನಪ್ರಿಯತೆಗಾಗಿ ಅನುಕೂಲ ಸಿಂಧುವಾಗಿ ಬಳಸುವರು.

2. ಕ್ರಾಂತಿ ಪುರುಷ ಬಸವಣ್ಣನವರು ಮತ್ತು ಪ್ರಗತಿಪರ ಚಿಂತಕರಾದ ಶರಣರ ವಿಚಾರಧಾರೆಗಳಾದ ಸಮಾನತೆ, ಏಕದೇವೋಪಾಸನೆ ಮುಂತಾದವು ಇವರಿಗೆ ಸಹ್ಯವೂ ಆಗದು.

3. ಆದರೆ ಇವರು ವೀರಶೈವ ಒಂದು ಸ್ವತಂತ್ರ ಧರ್ಮವೆಂದು ತಮ್ಮದೇ ಆದ ಆಗಮಶಾಸ್ತ್ರಗಳಿಂದ ಸಮರ್ಥಿಸಿಕೊಳ್ಳುವ ಆತ್ಮಬಲವೂ ಇಲ್ಲದೆ, ಆಧಾರವೂ ಇಲ್ಲದೆ ಬಸವ ಪ್ರಣೀತ ಲಿಂಗಾಯತ ಧರ್ಮಕ್ಕೆ ತೆಕ್ಕೆ ಬೀಳುವರು, ತೊಡರುಗಾಲನ್ನಿಕ್ಕುವರು.

ಲಿಂಗಾಯತ ಧರ್ಮವು ತನ್ನದೇ ಆದ ಸಿದ್ಧಾಂತ, ಸಾಧನೆ, ಸಾಹಿತ್ಯ, ಯೋಗ, ಸಂಸ್ಕೃತಿ, ಪರಂಪರೆಗಳಿಂದ ಕೂಡಿ ಜಾಗತಿಕ ಧರ್ಮಗಳ ಸಾಲಿನಲ್ಲಿ ಸ್ಪರ್ಧಿಸುವ ಶಕ್ತಿ ಹೊಂದಿದೆ. ವೀರಶೈವ ಈ ಯಾವೂ ಲಕ್ಷಣಗಳನ್ನು ಹೊಂದದ ಮತವಾಗಿ, ಪಂಥವಾಗಿ ತನ್ನ ಉಳಿವಿಗಾಗಿ ಲಿಂಗಾಯತ ಧರ್ಮವನ್ನು ಆಶ್ರಯಿಸಿದೆ. ಗಿಡವೊಂದಕ್ಕೆ ಸುತ್ತಿ ಕೊಂಡ ಬಳ್ಳಿಯಂತೆ, ಹೂ ಬಿಟ್ಟು ಗಿಡಕ್ಕೆ ಅಲಂಕಾರ ಪ್ರಾಯವಾಗುವ ಬದಲು ಪರಾವಲಂಬಿ ಬಳ್ಳಿ (Parasitic creeper) ಯಾಗಿ ಲಿಂಗಾಯತ ಧರ್ಮದ ಕಾಂಡಕ್ಕೆ ಉರುಲಾಗಿ ಬಿಗಿಯ ತೊಡಗಿದೆ. ವೀರಶೈವವಾದಿಗಳ ಅಪ್ರಾಮಾಣಿಕತೆ ಅರಿಯಲು 15ನೆಯ ಶತಮಾನದಿಂದ ಈವರೆಗೆ ಸಾಧ್ಯವಾಗದೆ ಈಗೀಗ ನಿಜ ಸಂಗತಿ ಗುರುತಿಸಲು ಸಾಧ್ಯವಾಯಿತು. ಲಿಂಗಾಯತ ಮತ್ತು ವೀರಶೈವ ಎರಡನ್ನೂ ಕೃತಕವಾಗಿ ಮೆತ್ತಿ, ಸಾಲಾರ್ ಜಂಗ್ ಮ್ಯೂಸಿಯಮ್‌ನಲ್ಲಿ ಎದೆಸೆಟೆಸಿ ನಿಂತ ಯೋಧ, ಬಾಗಿ ನಿಂತ ಮಹಿಳೆ ಎರಡೂ ಚಿತ್ರಗಳು ಮೆತ್ತಿಕೊಂಡಂತೆ ಆಗಿದೆ. ಶ್ರೀ ಎಚ್. ಎಚ್. ಸಂಗಮದ ರಂಥ ಶರಣ ಮಾರ್ಗಿಗಳು ಬಸವಣ್ಣನವರು ವೀರಶೈವ ಮತ ಸ್ಥಾಪಕರು ಎಂದು ತಪ್ಪು ತಪ್ಪಾಗಿ ನುಡಿದರೆ, ವೀರಶೈವವಾದಿಗಳಾದ ಪಂಚಾಚಾರ್ಯರು ಬಸವಣ್ಣನವರು ವೀರಶೈವ ಮತ ಪ್ರಚಾರಕರು ಎನ್ನುತ್ತಾರೆ, ಎರಡೂ ತಪ್ಪೆ ! ಬಸವಣ್ಣನವರಿಗೂ ವೀರಶೈವಕ್ಕೂ ಏನೂ ಸಂಬಂಧವಿಲ್ಲ, ನಂಟಿಲ್ಲ. ಕೃಷ್ಣಾನದಿಯಂತಹ ಜೀವನದಿಯಲ್ಲಿ ಮಿಲನಗೊಂಡ ಒಂದು ಸಣ್ಣ ಹಳ್ಳ ಹನ್ನೆರಡೂ ತಿಂಗಳು ನೀರನ್ನು ಹೊಂದಿರದಿದ್ದರೂ ಕನಿಷ್ಟ ಪಕ್ಷ ದೊಡ್ಡ ನದಿಯ ಜೊತೆ ಸೇರಿ, ಬಲಗೊಂಡು ಸಮುದ್ರವನ್ನು ಸೇರುವಂತೆ ವೀರಶೈವ ಪಂಥ ಬಸವ ಪ್ರಣೀತ ಲಿಂಗಾಯತ ಧರ್ಮದೊಡನೆ ಸೇರಿದ್ದರಿಂದ ಅದರ ಹೆಸರಾದರೂ ಕರ್ನಾಟಕದಲ್ಲಿ ಜೀವಂತವಾಗಿ ಉಳಿದಿದೆ. ಅದೇ ಆಂಧ್ರ, ತಮಿಳುನಾಡು, ಕೇರಳದಲ್ಲಿ 'ವೀರಶೈವ' ಪಂಥಕ್ಕೆ ಯಾವುದೇ ಸ್ಥಾನಮಾನ ಸಾಹಿತ್ಯಿಕವಾಗಿಯಾಗಲಿ ಅಥವಾ ಸಾಮಾಜಿಕವಾಗಿಯಾಗಲಿ ಇಲ್ಲ. ಕರ್ನಾಟಕದಲ್ಲಿ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಹೆಚ್ಚಿನ ಭಾಗವನ್ನು ಆವರಿಸಿಕೊಂಡಿದೆ, ಲಿಂಗಾಯತ ಸಮಾಜ ಪ್ರಭಾವಶಾಲಿಯಾಗಿ ಬೆಳೆದಿದೆ.

ಕೆಲವರು, ಉದಾಹರಣೆಗೆ ಬಸವರಾಜ ಶಾಸ್ತ್ರಿಗಳಂತಹವರು ಮಗ್ಗೆಯ ಮಾಯಿದೇವ ಮುಂತಾದವರ ವಾಕ್ಯಗಳನ್ನು ತಪ್ಪಾಗಿ ಉದಾಹರಿಸುತ್ತಾರೆ.

ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ ವೀರಶೈವ
ನಿರ್ಣಯ ಪರಮಾವತಾರ, ಶರಣಾಗತ ರಕ್ಷಕ ಚಿದ್ಘನ ಪ್ರಭಾ
ಮಯ ಜಗದಾದಿ ದೇಶಿಕ ಪುರಾತನ ಪುಂಗವ ಜಯ ಶಾಂಭವೈಪುರಾ
ಶ್ರಯ ಜಯ ಸೋಮನಾಥ ಜಯದೇವ ಜಯಾ ವಿರತಂ ಶಿವಾಧವಾ

ಇದನ್ನು ಅರ್ಥವಿಸೋಣ.

ಬಸವೇಶನೆ ಜಯತು ; ನೀನು ಭಕ್ತಜನ ಭಾಗ್ಯ ಶುಭೋದಯನು. ವೀರಶೈವವನ್ನು ನಿರ್ಣಯಿಸಲಿಕ್ಕೆ ಅವತರಿಸಿದ ಅವತಾರ ಪುರುಷನು ; ಶರಣಾಗತ ರಕ್ಷಕನು. ಚಿದ್ಘನ ಪ್ರಭಾಮಯನು. ಜಗತ್ತಿನ ಆದಿ ದೇಶಿಕ ಅಂದರೆ ಆದಿ ಗುರು, ಪುರಾತನರಲ್ಲಿ ಅಂದರೆ ಹಿಂದಿನವರಲ್ಲಿ ಪುಂಗವನು - ಅತಿ ಮುಖ್ಯನು. ಶಾಂಭವಿಪುರ ಅಂದರೆ ಸಹಸ್ರಾರದಲ್ಲಿ ಆಶ್ರಯ

Digitalized by e-Sahithya Documentation Forum
Sponsored by arayu Foundation Trust

ಹೊಂದಿದವನು ಇತ್ಯಾದಿ.

ಜಗದ ಆದಿ ದೇಶಿಕ, ಪುರಾತನ ಪುಂಗವ ಎಂಬ ಪದಗಳು ಬಸವಣ್ಣನವರು ಲಿಂಗಾಯತ ಧರ್ಮಕ್ಕೆ ಪ್ರಥಮ ಆಚಾರ್ಯ ಎಂಬುದನ್ನು ದೃಢಪಡಿಸುತ್ತವೆ. ಗುರುವರ್ಗದವನಾಗಿದ್ದ ಮಗ್ಗೆಯ ಮಾಯಿದೇವ ಆದಿ ದೇಶಿಕ ಎಂಬ ಪದವನ್ನು ಬಸವಣ್ಣನವರಿಗೆ ಏಕೆ ಅನ್ವಯಿಸಬೇಕಿತ್ತು ? ಇಂದಿನ ಪಂಚ ಪೀಠಾಧೀಶರು ಹೇಳುವಂತೆ ವೀರಶೈವ ಮತ ಸ್ಥಾಪಕರು ರೇಣುಕಾಚಾರ್ಯರಾಗಿದ್ದರೆ ಅವರನ್ನು ಆದಿ ದೇಶಕರು ಎನ್ನಬೇಕಿತ್ತಷ್ಟೆ ? ಪುರಾತನರಲ್ಲಿ ಮುಖ್ಯನು ಎಂದೂ ಏಕೆ ಬಣ್ಣಿಸಬೇಕಿತ್ತು ?

<u>ವೀರಶೈವ ನಿರ್ಣಯ ಪರಮಾವತಾರ</u> ಎಂಬ ಮಾಯಿದೇವರ ಮಾತನ್ನು ಪರಿಗಣಿಸಿಯೇ ಪ್ರೊ. ಎ.ವಿ.ಸಂಗಮದರಂಥವರು ಬಸವಣ್ಣನವರು ವೀರಶೈವ ಮತ ಸ್ಥಾಪಕರು ಎನ್ನುವುದು.

ಅದೇ ರೀತಿ ಮರಿ ತೋಂಟದಾರ್ಯರು ವರ ವೀರಶೈವವ ನೆಲೆಗೊಳಿಸಿದ ಎನ್ನುತ್ತಾರೆ. ಸಂಗಮದರಂಥವರ ವಾದಕ್ಕೆ ಪುಷ್ಟಿಕೊಡುವ ಇನ್ನೊಂದು ಮಾತೆಂದರೆ ಜಗನ್ಮಾತಾ ಅಕ್ಕಮಹಾದೇವಿಯ ವಚನ ವಾಕ್ಯ ''ವೀರಶೈವ ಮಾರ್ಗವನರುಪುವುದಕ್ಕೆ ಬಾವನ್ನ ವಿವರವನ್ನೊಳಗೊಂಡು ಚರಿಸಿದನು, ಅದೆಂದಡೆ.''

ನಾವು ಬಸವಣ್ಣನವರು ವೀರಶೈವ ಸ್ಥಾಪಕರು ಎನ್ನುವುದನ್ನು ಏಕೆ ನಿರಾಕರಿಸುತ್ತೇವೆ ಎಂದರೆ ವೀರಶೈವ ಪಂಥದ ಲಕ್ಷಣಗಳು ಅತ್ಯಂತ ಸಂಕುಚಿತವಾಗಿವೆ. ಲಿಂಗಾಯತ-ವೀರಶೈವಗಳನ್ನು ಸಮೀಕರಿಸುವುದೆಂದರೆ ವಿಶ್ವಸುಂದರಿಯೊಡನೆ (Miss universe) ವಿಶ್ವಕುರೂಪಿಣಿ (Miss ugliest) ಯೊಡನೆ ಹೋಲಿಸಿದಂತಾಗುತ್ತದೆ. ಹಾಗಾದರೆ ಮಗ್ಗೆಯ ಮಾಯಿದೇವರು, ಮರಿತೋಂಟದಾರ್ಯರು, ಅಕ್ಕಮಹಾದೇವಿ ಹೀಗೆ ಬಳಸಲು ಕಾರಣವೇನು ? ಎಂಬುದನ್ನು ವಿಶ್ಲೇಷಿಸೋಣ.

ಲಿಂಗಾಯತ ಧರ್ಮವನ್ನು ಬಸವಣ್ಣನವರು ಸರ್ವಾಂಗ ಪರಿಪೂರ್ಣ ಧರ್ಮವನ್ನಾಗಿ ಕೊಟ್ಟಾಗ 12ನೆಯ ಶತಮಾನದಿಂದ ಈವರೆಗೆ ಅನೇಕರು ಬಂದು ಸೇರಿದರು. ವೀರಶೈವ ಮೂಲದಿಂದ ಬಂದ ಅಕ್ಕಮಹಾದೇವಿ, ಮಗ್ಗೆಯ ಮಾಯಿದೇವರು ಮುಂತಾದವರು ಸರಿಯಾದ ನೆಲೆ ಇಲ್ಲದೆ ಅನಿಶ್ಚಯ ಪರಿಸ್ಥಿತಿ ಎದುರಿಸುತ್ತಿದ್ದ ವೀರಶೈವ ಪಂಥದವರಿಗೆ ಒಂದು ಧರ್ಮ, ಸಮಾಜದ ನೆಲೆ ಸಿಕ್ಕಾಗ ಅಪಾರವಾದ ಆನಂದ ಹೊಂದಿದರು. ತಮ್ಮ ವೀರಶೈವಕ್ಕೆ ಬಸವಣ್ಣನವರು ಹಾಕಿಕೊಟ್ಟ ಮಾರ್ಗದಲ್ಲಿಯೇ ನೆಲೆ, ನಿಶ್ಚಿತತೆ ಇದೆ ಎಂಬುದನ್ನು ಮನಗಂಡು, ಉಳಿದ ವೀರಶೈವರಿಗೆ ಅದನ್ನೇ ಅವಲಂಬಿಸಲು ಸಾರಿ ಹೇಳಿದರು.

ವೀರಶೈವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರಲು ಮುಖ್ಯ ಕಾರಣ ಹೀಗಿದೆ.

ಚತುರ್ವರ್ಣಗಳ ಯಾರೇ ಆದರೂ ವೀರಶೈವ ದೀಕ್ಷೆ ಹೊಂದಬಹುದಿತ್ತು. ಅದರಲ್ಲಿ ತಾರತಮ್ಯವಿದ್ದುದು ಸತ್ಯ ಮತ್ತು ಪಂಚಮವರ್ಣೀಯರಾದ ಅಸ್ಪೃಶ್ಯರಿಗೆ ದೀಕ್ಷೆಯು ನಿಷಿದ್ಧ. ಶ್ರೀ ಸೋಮಶೇಖರ ಶರ್ಮ ಎಂಬ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಶೂದ್ರ ವರ್ಣದವರಿಗೆ ಸಹಿತ ಆಂಧ್ರ ವೀರಶೈವರಲ್ಲಿ ದೀಕ್ಷೆ ನಿಷಿದ್ಧ. ಈ ವೀರಶೈವ ದೀಕ್ಷೆ ಪಡೆದುಕೊಂಡರೂ ಅದು

ಕೇವಲ ಪಾಂಥಿಕ ದೀಕ್ಷೆಯಾಗುತ್ತಿತ್ತು. ಬ್ರಾಹ್ಮಣ ವೀರಶೈವರು, ಕ್ಷತ್ರಿಯ ವೀರಶೈವ, ವೈಶ್ಯ ವೀರಶೈವ, ಶೂದ್ರ ವೀರಶೈವರಲ್ಲಿ ಯಾವುದೇ ಪರಸ್ಪರ ವ್ಯವಹಾರ ಇರುತ್ತಿರಲಿಲ್ಲ.

ಆದರೂ, ಉಳಿದ (ಹಿಂದುಗಳ)ವರಿಗಿಂತ ಇವರು ವೀರಶೈವ ದೀಕ್ಷೆ ಪಡೆದು ಒಂದು ಹೆಜ್ಜೆ ಮುಂದಿರುತ್ತಿದ್ದುದರಿಂದ, ನಿತ್ಯ ಸ್ನಾನ, ಪೂಜೆ, ಅಹಿಂಸೆ, ಮಾಂಸಾಹಾರ ನಿಷೇಧ, ಭವಿಸಂಗ ನಿಷೇಧ ಮುಂತಾದವುಗಳಿಗೆ ಬದ್ಧರಾಗಿ ಇರುತ್ತಿದ್ದರಿಂದ ಆ ವೀರಶೈವರಿಗೆ ಲಿಂಗಾಯತ ಧರ್ಮದ ಆಚರಣೆ ಉಳಿದವರಿಗಿಂತ ಸುಲಭ ಸಾಧ್ಯವೆನಿಸಿತು.

ಹೀಗಾಗಿಯೇ ವೀರಶೈವ ಮೂಲದಿಂದ ಬಂದವರು ತಮ್ಮ ಹಳೆಯ ತಪ್ಪು ಆಚರಣೆಗಳನ್ನು ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದ ಮೇಲೂ ಮುಂದುವರಿಸುತ್ತಿದುದಕ್ಕಾಗಿ ವಚನಕಾರರು ಅವರ ಕೆಲವು ಆಚರಣೆಗಳನ್ನು ತೀಕ್ಷ್ಣವಾಗಿ ಖಂಡಿಸಿದ್ದಾರೆ.

1. ವೀರಶೈವರು ತಾವು ಇತರ ಮತಾಂತರಿಗಳಿಗಿಂತಲೂ ಶ್ರೇಷ್ಠರು ಎಂದು ಬೀಗುತ್ತಿದ್ದುದು. ಗುಣ-ನಡತೆಯಿಂದ ವ್ಯಕ್ತಿ ಶ್ರೇಷ್ಠನೇ ವಿನಾ ಹುಟ್ಟಿನಿಂದಲ್ಲ ಎಂದು ಈ ಅಭಿಪ್ರಾಯವನ್ನು ಶರಣರು ಖಂಡಿಸುತ್ತಾರೆ.

2. ಭವಿಗಳನ್ನು ಅಂದರೆ ಲಿಂಗಧಾರಣೆ ಇಲ್ಲದವರನ್ನು ಅತ್ಯಂತ ಕಟುವಾಗಿ ನಿಂದಿಸಿ ದೂರವಿಡುತ್ತಿದ್ದುದು. ಲಿಂಗವಿಲ್ಲದವರನ್ನು ಭವಿ ಎನ್ನಲೇಕೆ ? ಕಾಮಕ್ರೋಧಾದಿಗಳು ಅಂತರಂಗದ ಭವಿಗಳಲ್ಲವೆ ? ಎಂದು ಪ್ರಶ್ನಿಸುತ್ತಾರೆ ಶರಣರು.

3. ಚಿಲುಮೆಯ ನೀರೇ ಬೇಕು ಎಂದೆಲ್ಲ ವಿಪರೀತ ಮಡಿಮಾಡುತ್ತಿದ್ದುದು. ಚಿಲುಮೆಯ ನೀರು ಮುಖ್ಯವಲ್ಲ ಅಂತರಂಗ ಶುದ್ಧಿ ಮುಖ್ಯ ಎಂದು ಶರಣರು ಖಂಡಿಸುತ್ತಾರೆ.

4. ದೀಕ್ಷಿತರಲ್ಲಿ ಕುಲವನ್ನು, ಪೂರ್ವಾಶ್ರಮವನ್ನು ಹುಡುಕುತ್ತಿದ್ದುದು. ದೀಕ್ಷಿತರಾದವರಲ್ಲಿ ಕುಲವನ್ನು ಅರಸಬಾರದು ಎಂಬುದು ಶರಣರ ವಿಚಾರಧಾರೆ.

5. ಶಿವಲಿಂಗವು ಬಿದ್ದುಹೋದರೆ ತಮ್ಮನ್ನು ತಾವು ಕಠೋರವಾಗಿ ದಂಡಿಸಿ ಪ್ರಾಣ ಕಳೆದುಕೊಳ್ಳುತ್ತಿದ್ದುದು. ಇದನ್ನು ಶರಣರು ಸ್ಪಷ್ಟವಾಗಿ ಖಂಡಿಸಿ ಲಿಂಗವು ಬಿದ್ದರೇನಂತೆ, ಗುರುವು ಇರುವುದಿಲ್ಲವೆ ? ಆಕಸ್ಮಾತ್ ಮೊದಲಿನ ದೀಕ್ಷಾಗುರು ಸಿಗದಿದ್ದರೇನು ಜಂಗಮ ಇರುವುದಿಲ್ಲವೇ ? ಅವರಿಂದ ಬೇರೊಂದು ಇಷ್ಟಲಿಂಗ ಪಡೆಯಬೇಕೇ ವಿನಾ ಪ್ರಾಣ ಕಳೆದುಕೊಳ್ಳಬಾರದು ; ಜೀವನವು ಮುಖ್ಯ ಎಂಬುದು ಶರಣರ ಧೋರಣೆ.

6. ಏನಾದರೂ ಶಸ್ತ್ರ, ಪ್ರಾಣಿದಾಳಿ ಇತ್ಯಾದಿಗಳಿಂದ ಅಂಗಾಂಗ ಊನವಾದರೆ ಅವರನ್ನು ಕಾಡಿಗೆ ಅಟ್ಟುತ್ತಿದ್ದರು. ಇದನ್ನು ಚನ್ನಬಸವಣ್ಣನವರು ಖಂಡಿಸುತ್ತಾರೆ.

7. ಅಂಗಹೀನರು ಜ್ಞಾನಿಗಳಾಗಿದ್ದರೂ ಅವರನ್ನು ಗೌರವಿಸುತ್ತಿರಲಿಲ್ಲ. ಬಸವಣ್ಣನವರು ಇದನ್ನು ಖಂಡಿಸಿ, ''ಶರಣರ ಅಂಗಹೀನರೆಂದರೆ ನಾಯಕ ನರಕ'' ಎಂದು ತಿಳಿಸಿದರು.

8. ವೀರಶೈವರಿಗೆ ಸ್ಥಾವರಲಿಂಗದ ನಂಟು ಬಹಳವಾಗಿತ್ತು. ಇದನ್ನು ಟೀಕಿಸಿ ಬಸವಣ್ಣನವರು ವೀರಶೈವರು ಲಿಂಗಾಯತರಾದ ಬಳಿಕ ಏಕಲಿಂಗ ನಿಷ್ಠೆ ಬೆಳೆಸಿಕೊಳ್ಳಬೇಕು, ಅಂಗದ ಮೇಲೆ ಲಿಂಗವಿದ್ದಾಗ ಸ್ಥಾವರದ ಮೋಹ ಬೆಳೆಸಿಕೊಳ್ಳಬಾರದು ಎನ್ನುತ್ತಾರೆ.

Digitalized by e-Sahithya Documentation Forum
Sponsored by arayu Foundation Trust

9. ವೀರಶೈವ ಗುರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಣದವರಿಗೆ ಬೇರೆ ಬೇರೆ ರೀತಿಯ ಶಿವಲಿಂಗಗಳನ್ನು ಕೊಟ್ಟು ಮಂತ್ರೋಪದೇಶ ಮಾಡಿದರೂ ಅವರ ಮನೆಗೆ ಹೋಗಿ ಪ್ರಸಾದ ಸ್ವೀಕರಿಸದೆ ಅವರ ಮನೆಗಳಿಂದ ಅಕ್ಕಿ, ಬೇಳೆ, ಬೆಲ್ಲ ಮುಂತಾದ ಪದಾರ್ಥಗಳನ್ನು ಮಾತ್ರ ಪಡೆಯುತ್ತಿದ್ದ. ತಾ ದೀಕ್ಷೆ ಕೊಟ್ಟೂ ಆ ಶಿಷ್ಯನ ಮನೆಯ ಹೋಗಲೊಲ್ಲದೆ ಅಕ್ಕಿ ಬೇಳೆ ಬೆಲ್ಲ ಪಡೆದು ಉಳ್ಳುವ ವೀರಶೈವ ಗುರುವನ್ನು ಲಿಂಗವ ಮಾರಿಕೊಂಡುಂಬುವ ಭಂಗಗಾರ ಎಂದು ಚನ್ನಬಸವಣ್ಣನವರು ಟೀಕಿಸುತ್ತಾರೆ.

10. ವೀರಶೈವರಲ್ಲಿ ದೀಕ್ಷೆ ಐಚ್ಛಿಕ, ಮನೆಯಲ್ಲಿ ಯಾರೋ ಒಬ್ಬರೋ ಇಬ್ಬರೋ ಪಡೆದಿರಬಹುದಿತ್ತು. ಅವರು ತಮ್ಮ ಮನೆಯವರು ದೀಕ್ಷಿತರಾಗಿ ಇರದಿದ್ದರೆ ಅವರನ್ನು ಭವಿಗಳೆಂದು ಪರಿಗಣಿಸಿ ಊಟೋಪಚಾರ ಮಾಡದೆ ಸ್ವಯಂಪಾಕ ಮಾಡಿಕೊಳ್ಳುತ್ತಿದ್ದರು.

ಲಿಂಗಾಯತ ಧರ್ಮದಲ್ಲಿ ದೀಕ್ಷೆ ಕಡ್ಡಾಯ. ತಾಯಿಯ ಗರ್ಭದಲ್ಲಿರುವಾಗಲೇ ಲಿಂಗಧಾರಣೆ, ಹುಟ್ಟಿದ ತಕ್ಷಣ ಅದೇ ಲಿಂಗವನ್ನು ಕೂಸಿಗೆ ಕಟ್ಟಲಾಗುತ್ತದೆ. ದಿ. 11-2-2002ರಂದು ತಮಿಳುನಾಡಿನ ಕಾಂಚೀಪುರದಿಂದ ಇಬ್ಬರು ದಂಪತಿಗಳು ಬಂದರು. ಬೆಂಗಳೂರಿನ ಓರ್ವ ಲಿಂಗಾಯತರು ಆ ವೀರಶೈವರನ್ನು ಕರೆತಂದರು. ಅವರಿಗೆ ಲಿಂಗಧಾರಣೆ ಎಂಬುದೇ ಗೊತ್ತಿಲ್ಲ. ಅವರ ತಾತ ಮಾತ್ರ ಶಿವಲಿಂಗಧಾರಣೆ ಮಾಡಿಕೊಂಡಿದ್ದರಂತೆ. ಇವರಿಗೆ ಹುಟ್ಟಿದ ಮಗುವಿಗೆ ಮಾಡುವ ಲಿಂಗಧಾರಣೆ, ನಂತರ ದೊಡ್ಡವರಾದಾಗ ಮಾಡುವ ಲಿಂಗದೀಕ್ಷೆ ಬಗ್ಗೆ ಏನೇನೂ ತಿಳಿದೇ ಇಲ್ಲ. ಬರಿದೇ ವೀರಶೈವರು ಎಂದು ಕರೆದುಕೊಳ್ಳುತ್ತಾರಂತೆ. ಅದೇ ಲಿಂಗಾಯತ ಸಮಾಜವನ್ನು ನೋಡಿದಾಗ ಓರ್ವ ನಾಸ್ತಿಕ, ದುರ್ವ್ಯಸನಿ, ದುರಹಂಕಾರಿ ಲಿಂಗಾಯತನಾಗಿದ್ದರೂ, ತಾನು ಲಿಂಗಕಟ್ಟಿ ಪೂಜಿಸದಿದ್ದರೂ ಮನೆಯಲ್ಲಿ ಮಗು ಹುಟ್ಟಿದಾಗ ಕಾಟಾಚಾರಕ್ಕಾದರೂ ಲಿಂಗಧಾರಣೆ ಮಾಡಿಸುತ್ತಾರೆ. ನಂತರ ಕಟ್ಟಿಕೊಳ್ಳದಿದ್ದರೂ ಮದುವೆಯ ಸಮಯದಲ್ಲಿ ಕಾಟಾಚಾರಕ್ಕಾದರೂ ವಧುವರರಿಗೆ ಲಿಂಗದೀಕ್ಷೆ ಕೊಡಿಸುತ್ತಾರೆ.

ಹೀಗಿರುವಾಗ ಏನೇನೂ ಸಿದ್ಧಾಂತ, ಸಾಧನೆ, ವಿಧಿ-ವಿಧಾನ (Rights and rituals) ಸಮಾಜ ಶಾಸ್ತ್ರ, ಸ್ವತಂತ್ರ ಸಾಹಿತ್ಯ ಇಲ್ಲದೆ ಇರುವ 'ವೀರಶೈವ' ಎಂಬ ಪದವನ್ನು ಇಟ್ಟುಕೊಂಡು ಕೆಲವು ಸ್ವಾರ್ಥಿಗಳು, ಧೂರ್ತರು ಲಿಂಗಾಯತ ಧರ್ಮ-ಸಮಾಜಗಳನ್ನು ಹಾಳು ಮಾಡುತ್ತಿದ್ದಾರಲ್ಲ ಎನ್ನಿಸಿ ಅತೀವ ದುಃಖವಾಗುತ್ತದೆ. ಲಿಂಗಾಯತರಿಗೆ ವೀರಶೈವ ಪದದಿಂದ ಏನೂ ಲಾಭವಿಲ್ಲ. ಬಸವಾದಿ ಪ್ರಮಥರನ್ನು, ಶರಣರನ್ನು, ವಚನ ಸಾಹಿತ್ಯವನ್ನು ಮನ್ನಿಸಬಾರದು ಎಂಬ ಉದ್ದೇಶದಿಂದಲೂ ಅಡ್ಡಪಲ್ಲಕ್ಕಿ, ಕಿರೀಟ, ವಜ್ರದುಂಗುರ, ಪಟ್ಟೆ ಪೀತಾಂಬರಧಾರಿಗಳ ಹಿತಾಸಕ್ತಿ ಕಾಪಾಡಲೋಸ್ಕರವೂ ಆ ಸವಕಳಿ ಪದ ವೀರಶೈವವನ್ನು ತಂದೆಳೆದು ಲಿಂಗಾಯತ ಧರ್ಮದ ಸ್ವಾತಂತ್ರ್ಯ- ಸಾರ್ವಭೌಮತೆಯನ್ನು ಹಾಳುಗೆಡವುತ್ತಿದ್ದಾರೆ ಈ ವೀರಶೈವವಾದಿಗಳು.

ಹರಿಹರ ಶೈವಬ್ರಾಹ್ಮಣ ; ಆದರೆ ಬಸವರಾಜದೇವರ ರಗಳೆಯಲ್ಲಿ ''ಹೊಂಗಡದ ಲಿಂಗವಂತ'', ''ಬಸವ ದೀಕ್ಷೆ'' ಎಂಬ ಪದಗಳನ್ನು ಬಹುಪ್ರೀತಿಯಿಂದ ಬಳಸುತ್ತಾನೆ. ಚಾಮರಸನು ಶೈವಬ್ರಾಹ್ಮಣನಾದರೂ ವೀರಶೈವ ದೀಕ್ಷೆ ಪಡೆದಿದ್ದವನು. ಹೀಗಾಗಿ ವೀರಶೈವ ಪದ

ಮೋಹಿ. ಆದರೆ ಎಷ್ಟು ಪ್ರಾಮಾಣಿಕವಾಗಿ ಈ ಮಾತು ಬರೆಯುತ್ತಾನೆ ನೋಡಿರಿ.

ಕಾಯದೊಳು ಗುರುಲಿಂಗ ಜಂಗಮ
ದಾಯತವನರಿಯಲ್ಕೆ ಸುಲಭೋ
ಪಾಯದಿಂದಿರಿಟ್ಟು ಬಾಹ್ಯ ಸ್ಥಲಕ್ಕೆ ಕುರುಹಾಗಿ
ದಾಯದೋರಿ ಸಮಸ್ತ ಭಕ್ತನಿ
ಕಾಯವನು ಪಾವನವ ಮಾಡಿದ
ರಾಯ ಪೂರ್ವಾಚಾರ್ಯ ಸಂಗನ ಬಸವ ಶರಣಾರ್ಥಿ.

ಈ ಜನ್ಮದಲ್ಲಿ, ಇದೇ ದೇಹದಲ್ಲಿಯೇ ಗುರು-ಲಿಂಗ-ಜಂಗಮ ಎಂಬ ತ್ರಿತತ್ವಗಳನ್ನು ಅಳವಡಿಸಿಕೊಳ್ಳಲು ಅನುಕೂಲವಾಗಲೆಂದು ಇಷ್ಟಲಿಂಗ ಎಂಬ ಸುಲಭ ಸಾಧನವನ್ನು ಕೊಟ್ಟು ಸಮಸ್ತ ಭಕ್ತ ಸಮೂಹವನ್ನು ಪಾವನವ ಮಾಡಿದ 'ರಾಯ', 'ಪೂರ್ವಾಚಾರ್ಯ' ಎಂದು ಬಸವಣ್ಣನವರನ್ನು ಚಾಮರಸ ಹೊಗಳುತ್ತಾನೆ. ಹಾಗೆಯೇ ಚನ್ನಬಸವಣ್ಣನವರನ್ನು ಷಟಸ್ಥಲಾಚಾರ್ಯ ಎಂದು ಕೊಂಡಾಡುತ್ತಾನೆ. ಪ್ರಾರಂಭದ ಶರಣಾರ್ಥಿಯಲ್ಲಿ ಪ್ರಭುಲಿಂಗ ಲೀಲೆಯ ಕಥಾನಾಯಕ ಅಲ್ಲಮಪ್ರಭು (ಲಿಂಗ)ವನ್ನು, ಪೂರ್ವಾಚಾರ್ಯ ಸಂಗನ ಬಸವಣ್ಣನವರನ್ನು, ಷಡುಸ್ಥಲಾಚಾರ್ಯ ಚನ್ನಬಸವಣ್ಣನವರನ್ನು, ವೀರವಿರಾಗಿಣಿ ಅಕ್ಕ-ಮಹಾದೇವಿಯನ್ನು, ಶಿವಯೋಗಿ ಸಿದ್ಧರಾಮೇಶ್ವರರನ್ನು, ವೀರಗಣಾಚಾರಿ ಮಡಿವಾಳ ಮಾಚಿದೇವರನ್ನು ವಂದಿಸುತ್ತಾನೆ.

(ಈ ಆರು ಜನರನ್ನು ನಾವು ಷಡುಗಣಾಧೀಶರೆಂದು ಗುರುತಿಸಲು ಧರ್ಮಪಿತರು ಪ್ರೇರಣೆ ನೀಡಿದ್ದರಿಂದ ಬಸವ ಧರ್ಮ ಪೀಠದ ಪೀಠದಲ್ಲಿ ಈ ಆರು ಜನ ಚಿತ್ರ ಹಾಕಿದ್ದೇವೆ ಎಂಬುದನ್ನು ಸ್ಮರಿಸಿಕೊಂಡರೆ ಸಂತೋಷ, ಹೆಮ್ಮೆ ಉಂಟಾಗುತ್ತಿವೆ.)

ನಾವೇನೋ ಆದಿ ಪಂಚಾಚಾರ್ಯರ ಬಗ್ಗೆ (ಶರಣರ ಸಮಕಾಲೀನ ಆಚಾರ್ಯರ ಬಗ್ಗೆ ಮಾತ್ರ ನಮಗೆ ಗೌರವವಿದೆ.) ಪೂರ್ವಾಗ್ರಹ ಪೀಡಿತರಾಗಿ ಒಪ್ಪುತ್ತಿಲ್ಲ ಎಂದು ಪಂಚಾಚಾರ್ಯವಾದಿಗಳು ನಮಗೆ ಆರೋಪಿಸಬಹುದು. ಆದರೆ ಚಾಮರಸ ಕವಿ ಏಕೆ ಸ್ತೋತ್ರ ಮಾಡಲಿಲ್ಲ ? ಧರ್ಮಪಿತ ಬಸವಣ್ಣನವರಿಂದಲೇ ಇಷ್ಟಲಿಂಗವೆಂಬ ಕುರುಹು ದೊರೆಯಿತು ಎಂದೇಕೆ ಹೇಳಿ ಅವರನ್ನು ಪೂರ್ವಾಚಾರ್ಯ ಎಂದು ಕರೆಯಬೇಕಿತ್ತು ? ನಾವೇನಾದರೂ ಚಾಮರಸನಿಗೆ ಕಿವಿ ಊದಿದ್ದೇವೆಯೆ ?

ಬಸವರಾಜ ಶಾಸ್ತ್ರಿಗಳು ಮಗ್ಗೆಯ ಮಾಯಿದೇವರನ್ನು ಆಧಾರವಾಗಿ ಉಲ್ಲೇಖಿಸಿದ್ದಾರೆ. ಮಾಯಿದೇವರ ಶತಕತ್ರಯದ ಮೊದಲ 6 ಪದ್ಯಗಳನ್ನು ಓದಿರಿ.

ಶ್ರೀ ಗುರುವೇ ಮಹಾಗುರುವೆ ಶಾಂತಿಕಳಾಗುರುವೇ ಶಿವಾತ್ಮ ವಿ
ದ್ಯಾಗುರುವೇ ಪುರಾಗುರುವೆ ವಿಶ್ವಜಗದ್ಗುರುವೇ ವಿಶುದ್ಧ ಚೇ
ಷ್ಟಾಗುರುವೇ ಸುಧೀ ಗುರುವೆ ಭಕ್ತಿ ಯಶೋಗುರುವೇ ಪ್ರಸಾದ ತೇ
ಜೋ ಗುರುವೇ ಕೃಪಾ ಗುರುವೆ ಮದ್ಗುರುವೇ ಗುರುವೇ ಶಿವಾಧವಾ ॥1॥

Digitalized by e-Sahithya Documentation Forum
Sponsored by arayu Foundation Trust

ಜಯ ಬಸವೇಶ ಭಕ್ತಜನ ಭಾಗ್ಯ ಶುಭೋದಯ, ವೀರಶೈವ ನಿ
ರ್ಣಯ ಪರಮಾವತಾರ ಶರಣಾಗತ ರಕ್ಷಕ ಚಿದ್ಘನ ಪ್ರಭಾ
ಮಯ ಜಗದಾದಿ ದೇಶಿಕ ಪುರಾತನ ಪುಂಗವ, ಶಾಂಭವೈ ಪುರಾ-
ಶ್ರಯ ಜಯಸೋಮನಾಥ ಜಯದೇವ ಜಯಾವಿರತಂ ಶಿವಾಧವಾ ||2||

ಬಸವ ಕುಮಾರ ಭಾಕ್ತಿಕ ಪುರಸ್ಸರ ಷಟಸ್ಥಲ ಧೀರ ಚಿತ್ಸುಧಾ
ರಸ ಭರಿತಾಂತರಂಗ ಸಕಲಾಕ್ಷ ಸಮರ್ಪಿತ ಲಿಂಗ, ತತ್
ಪ್ರಸಾದ ಸುಖ ವಿಶೇಷ ತೃಪ್ತ ಶಿವಯೋಗ ಪದೈಕ್ಯ ಸಮಾಪ್ತ, ರ
ಕ್ಷಿಸು ಗಡ ಜೀಯ ಚನ್ನಬಸವಯ್ಯ ಕೃಪಾನಿಧಿಯೇ ಶಿವಾಧವಾ ||3||

ಪ್ರಭುವೇ ಮಹಾಗುರು ಪ್ರಭುವೇ ಲಿಂಗಕಳಾ ಪ್ರಭುವೇ ಚರಾಭಿದ
ಪ್ರಭುವೇ ಶಿವಾತ್ಮ ವಿತ್ಪ್ರಭುವೇ ಯೋಗಿವರ ಪ್ರಭುವೇ ಚಿದಂಗನಾ
ಪ್ರಭುವೇ ಸದಮಲ ಪ್ರಭುವೇ ರಕ್ಷಿಸು ದೇವಾ ಗುಹೇಶ್ವರಾಲ್ಲಮ
ಪ್ರಭುವೇ ನಿರಂಜನ ಪ್ರಭುವೇ ಮತ್ಪ್ರಭುವೇ ಪ್ರಭುವೇ ಶಿವಾಧವಾ ||4||

ಬಸವನನೊರ್ಮೆ ಚನ್ನಬಸವಣ್ಣನನೊರ್ಮೆ ಗುಹೇಶ್ವರಾಲ್ಲಮ ಪ್ರಸವ
ಯಶೋಮಯ ಪ್ರಭುವನನೊರ್ಮೆ ಸಮಾಹಿತಮಾದ ಭಾಕ್ತಿಕಂ
ಮೊಸಗೆ ಪುನಃ ಪುನಃ ಸ್ಮರಿಸಿ ಕೀರ್ತಿಸಿ, ಪಾಡಿ, ಭವ ಪ್ರಪಂಚಮಂ
ನುಸುಳುವರಯ್ಯ ವೀರ ನಿಯಮ ವ್ರತ ಧರ್ಮಪರರ್ ಶಿವಾಧವಾ ||5||

ಬಸವ ಪುರಾತನರ್ ಚರಿಸಿ ತೋರಿದ ಷಟಸ್ಥಲ ಮಾರ್ಗದೋಳ್, ಪ್ರವ
ರ್ತಿಸುತ ಅನೂನ ಭಕ್ತಿರತಿಯಿಂ ತನು ವಿತ್ತ ಮನಂಗಳಂ, ಸಮ
ರ್ಪಿಸುತ ಗುರುಲಿಂಗ ಜಂಗಮಕೆ ವಂಚನೆ ಇಲ್ಲದೆ ಮಾಡಿ ಕೂಡಿ, ರಾ
ಜಿಸುವ ಮಹಾತ್ಮರಂ ನೆನೆವುದೇ ಘನ ಮುಕ್ತಿಪದಂ ಶಿವಾಧವಾ ||6||

ಮಾಯಿದೇವರು ಬಸವಣ್ಣನವರನ್ನು ಆದಿ ದೇಶಿಕ(ಗುರು) ಎಂದು ಕರೆದುದೇ ಅಲ್ಲದೆ 6ನೇ ಪದ್ಯದಲ್ಲಿ ಬಸವ ಪುರಾತನರ್ ಚರಿಸಿ ತೋರಿದ ಮಾರ್ಗ ಎನ್ನುತ್ತಾನೆ. ರೇಣುಕರು (ಆ) ಚರಿಸಿ ತೋರಿದ ಮಾರ್ಗ ಎಂದೇಕೆ ಹೇಳಲಿಲ್ಲ? ಪದ್ಯ 5 ರಲ್ಲಿ (ಬಸವನನೊರ್ಮೆ) ಅದು ಏಕೆ ಬಸವ, ಚನ್ನಬಸವ, ಪ್ರಭುದೇವರನ್ನು ನೆನೆದು ಭವಸಾಗರವ ದಾಂಟಬೇಕು ಎನ್ನುತ್ತಾನೆ? ಗುರುವರ್ಗದ ಮಠಾಧಿಕಾರಿಯಾದ ಮಾಯಿದೇವರಿಗೆ ಪಂಚಾಚಾರ್ಯರ ನೆನಪೇಕೆ ಬರಲಿಲ್ಲ?

ಆದ್ದರಿಂದ ಇನ್ನು ಮುಂದಾದರೂ ಲಿಂಗಾಯತರು ಧರ್ಮಗುರು ಬಸವಣ್ಣ, ಧಾರ್ಮಿಕ ಸಂವಿಧಾನ ವಚನ ಸಾಹಿತ್ಯದಲ್ಲಿ ಪೂರ್ಣ ಶ್ರದ್ಧೆ- ನಿಷ್ಠೆ ಇಡಲಿ, ಲಿಂಗಾಯತ ಧರ್ಮಮಾಣಿಕ್ಯವನ್ನು ವೀರಶೈವದ ಮಸಿಬಟ್ಟೆಯಿಂದ ಮುಚ್ಚಿ, ಧರ್ಮದ್ರೋಹ ಸಮಾಜದ್ರೋಹ ಮಾಡುವುದು ಬಿಡಲಿ. ಇದು ಇಷ್ಟವಿಲ್ಲದಿದ್ದರೆ ತಮ್ಮ ವೀರಶೈವವನ್ನು ವಚನ ಸಾಹಿತ್ಯ- ಬಸವಾದಿ ಪ್ರಮಥರ ಉಸಾಬರಿಗೆ ಬರದೆ, ಪ್ರತಿಪಾದಿಸಿಕೊಳ್ಳಲಿ. ■

ಅಂಚೆಯಲ್ಲಿ ಕಲ್ಯಾಣ ಕಿರಣ ಮಾಸ ಪತ್ರಿಕೆಯ 2 ಪ್ರತಿಗಳು ಬರುತ್ತಿದ್ದರೆ ಒಂದನ್ನು ನಿರಾಕರಿಸಿ ಒಂದನ್ನು ಮಾತ್ರ ಸ್ವೀಕರಿಸಿರಿ ಅಥವಾ ಚಂದಾ ಸಂಖ್ಯೆ ತಿಳಿಸಿ ಪತ್ರ ಬರೆಯಿರಿ.

ವ್ಯವಸ್ಥಾಪಕರು




ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ,
ಕಾಯಕದ ದಿನದ ಅಂಗವಾಗಿ ಮೊದಲನೆಯ

ಕಲ್ಯಾಣ ಪರ್ವ



ಗಣಧ್ವಜ

2002ರ ಮೇ 1, 2 ಮತ್ತು 3 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 15ನೆಯ ಶರಣ ಮೇಳವು ಇದೇ ತಾನೆ ಯಶಸ್ವಿಯಾಗಿ ಜರುಗಿದೆ.

ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ. 1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ. 1196) ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು

Digitalized by e-Sahithya Documentation Forum
Sponsored by arayu Foundation Trust

ಇದೇ 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿದೆ. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. ''ಕಾಯಕವೇ ಕೈಲಾಸ'' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಇಂಥ ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಮೇ 1, 2 ಮತ್ತು 3ರಂದು ''ಕಲ್ಯಾಣ ಪರ್ವ'' ವನ್ನು ನಡೆಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು (ಕಲ್ಯಾಣ). ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು.

ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು.'' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಏಪ್ರಿಲ್ 30ರ ರಾತ್ರಿಯಿಂದ ಮೇ 4ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು	4. ಹಿತೈಷಿಗಳು	: 500 ರೂ
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು	5. ಸ್ವಾಗತ ಸಮಿತಿ ಸದಸ್ಯತ್ವ	: 250 ರೂ
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು	6. ಪ್ರತಿನಿಧಿ ಶುಲ್ಕ	: 100 ರೂ

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ವಿಶೇಷ ಮನವಿ : ಶರಣ ಬಂಧುಗಳೇ, ಕರ್ನಾಟಕ ರಾಜ್ಯ ಈ ವರ್ಷ ಮಳೆಯ ಕೊರತೆಯಿಂದಾಗಿ ಬರಗಾಲವನ್ನು ಎದುರಿಸುತ್ತಿದೆ. ಮಳೆಯ ಆಶ್ರಯದಲ್ಲಿ ವ್ಯವಸಾಯ ಮಾಡುವವರು, ಕೃಷಿಯ ಕೂಲಿಯನ್ನು ಅವಲಂಬಿಸಿರುವವರು ಕಷ್ಟಕರವಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಶ್ರೀಮಂತರು, ಕಾಯಂ ಉದ್ಯೋಗಿಗಳು, ನೀರಾವರಿ ಕೃಷಿಯ ಅನುಕೂಲತೆಯುಳ್ಳವರು, ಸರ್ಕಾರಿ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ಅನ್ನ ದಾಸೋಹಕ್ಕೆ ತಮ್ಮ ಕಾಣಿಕೆಗಳನ್ನು ಸ್ವಯಂ ಪ್ರೇರಣೆಯಿಂದ ನೀಡಿ ಕಲ್ಯಾಣ ಪರ್ವದ ಯಶಸ್ಸಿಗೆ ಸಹಕರಿಸಬೇಕೆಂದು ಕೋರುತ್ತೇವೆ.

ಜ್ಯೋತಿ ಯಾತ್ರೆಯ ಯೋಜನೆ

ಶರಣ ಬಂಧುಗಳೆ, ಲಿಂಗಾಯತ ಧರ್ಮದ ಇತಿಹಾಸದಲ್ಲಿ ಅತ್ಯಂತ ನೋವಿನ ಪ್ರಸಂಗ ಕಲ್ಯಾಣ ಕ್ರಾಂತಿ. ಜಾತಿವರ್ಣವರ್ಗರಹಿತ ಧರ್ಮ ಸಹಿತ ಶರಣ ಸಮಾಜವನ್ನು ಕಟ್ಟಬಯಸುವ ಪ್ರಯತ್ನಕ್ಕೆ ಪೋಷಕವಾಗಿ ಧರ್ಮಪಿತ ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರಾಗಿ ಶರಣ ಧರ್ಮ ಸ್ವೀಕರಿಸಿದ ಶರಣ ಮಧುವರಸರ ಮಗಳು ಲಾವಣ್ಯವತಿಯನ್ನು, ಹುಟ್ಟಿನಿಂದ ಸಮಗಾರರಾಗಿ ಶರಣ ಧರ್ಮ ಸ್ವೀಕರಿಸಿದ ಹರಳಯ್ಯನವರ ಮಗ ಶೀಲವಂತನಿಗೆ ವಿವಾಹ ಮಾಡಿಕೊಡಲು ಪ್ರೋತ್ಸಾಹ ನೀಡಿದಾಗ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳರಾಜನನ್ನು ಪ್ರಚೋದಿಸಿ ಧರ್ಮಪಿತರನ್ನು ಗಡಿಪಾರು ಮಾಡಿಸಿದರು. ಧರ್ಮಗುರುವಿನ ನಿರ್ಗಮನಾನಂತರ ಹರಳಯ್ಯ-ಮಧುವರಸ-ಶೀಲವಂತರ ಕಣ್ಣು ಕೀಳಿಸಿ ಆನೆ ಕಾಲಿಗೆ ಕಟ್ಟಿ ಎಳೆಹೂಟೆ ಶಿಕ್ಷೆ ನೀಡಿ ಕೊಲ್ಲಿಸಲಾಯಿತು. ಅಸಂಖ್ಯಾತ ಶರಣರು ರಚಿಸಿದ ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನವಾಗಿದ್ದ ವಚನ ವಾಙ್ಮಯವನ್ನು ನಾಶಮಾಡಲು ಸಂಪ್ರದಾಯವಾದಿಗಳು ಯತ್ನಿಸಿದಾಗ ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ವೀರಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರು ನಾಯಕತ್ವ ವಹಿಸಿ ವಚನ ಸಾಹಿತ್ಯವನ್ನು ಕಲ್ಯಾಣದಿಂದ ಹೊರಗೆ ಸಾಗಿಸಿದ್ದಲ್ಲದೆ ಬೆನ್ನು ಹತ್ತಿ ಬಂದ ಸೈನ್ಯದೊಡನೆ ಕಾದಿ ವಚನ ಸಾಹಿತ್ಯವನ್ನು ಸಹ್ಯಾದ್ರಿಯ ಬೆಟ್ಟಗಳ ಗರ್ಭದಲ್ಲಿದ್ದ ಗುಹೆಗಳಲ್ಲಿ ಇಟ್ಟು ಸಂರಕ್ಷಿಸಿದರು. ಆದಿ ಶರಣರ ಆ ಋಣವನ್ನು ತೀರಿಸಲು ಎಷ್ಟು ಜನ್ಮಗಳ ಕಾಲ ದುಡಿದರೂ ಸಾಲದು. ಕಲ್ಯಾಣದಿಂದ ಹೊರಟು ಧರ್ಮಪಿತರು ಕೂಡಲ ಸಂಗಮಕ್ಕೆ ಹೋದರೆ ಮಾಚಿದೇವರು ಸಹ್ಯಾದ್ರಿಯತ್ತ ಸಾಗಿದರು. ಕಲ್ಯಾಣದಿಂದ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಮತ್ತು ವೀರಮಾತೆ ಅಕ್ಕನಾಗಲಾಂಬಿಕೆ ಸೊನ್ನಲಾಪುರಕ್ಕೆ ತೆರಳಿ ಶೂನ್ಯ ಪೀಠದ ಅಧಿಕಾರವನ್ನು ವಹಿಸಿಕೊಟ್ಟು ಧರ್ಮ ವಿಸ್ತರಣೆಯ ಹೊಣೆಯನ್ನು ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಹಸ್ತಾಂತರಿಸಿ ತಾವೂ ಸಹ್ಯಾದ್ರಿಯತ್ತ ಸಾಗಿದರು. ಜಗನ್ಮಾತಾ

Digitalized by e-Sahithya Documentation Forum
Sponsored by arayu Foundation Trust

ಅಕ್ಕಮಹಾದೇವಿ, ಶೂನ್ಯ ಪೀಠಾಧೀಶ ಅಲ್ಲಮಪ್ರಭುಗಳು ಕದಳಿಗೆ ಹೋದರು. ನಾಗಲಾಂಬಿಕೆಯ ಗದ್ದುಗೆ ತರೀಕೆರೆಯಲ್ಲಿದೆ. ಹರಳಯ್ಯನವರು ಮಾಡಿದ ಪಾದುಕೆಗಳು ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೋಕಿನ ಬಿಜನಳ್ಳಿ ಗ್ರಾಮದಲ್ಲಿವೆ. ಆದ್ದರಿಂದ ಕೂಡಲಸಂಗಮ, ಉಳಿವೆ, ಬಳ್ಳಿಗಾವಿ, ಕದಳಿ, ಬಿಜನಳ್ಳಿ ಮತ್ತು ಸೊನ್ನಲಾಪುರ (ಸೊಲ್ಲಾಪುರ) ದಿಂದ ಆರು ಜ್ಯೋತಿ ಯಾತ್ರೆಗಳನ್ನು ನಿಯೋಜಿಸಿ ಬಸವ ಜ್ಯೋತಿ, ಚನ್ನಬಸವ ಜ್ಯೋತಿ, ಅಲ್ಲಮಪ್ರಭು ಜ್ಯೋತಿ, ಅಕ್ಕ ಮಹಾದೇವಿ ಜ್ಯೋತಿ, ಹರಳಯ್ಯ ಜ್ಯೋತಿ ಮತ್ತು ಸಿದ್ಧರಾಮ ಜ್ಯೋತಿಗಳನ್ನು ಆ ಸ್ಥಳಗಳಿಂದ ತಂದು ಮೊಟ್ಟ ಮೊದಲನೆಯ ಕಲ್ಯಾಣ ಪರ್ವ ಕಾರ್ಯಕ್ರಮದ ಉದ್ಘಾಟನಾ ಜ್ಯೋತಿಯನ್ನು ಉದ್ದೀಪಿಸುವ ಪ್ರೇರಣೆ ಉಂಟಾಗಿದೆ.

ಆದ್ದರಿಂದ ಈ ಪವಿತ್ರವಾದ ಜ್ಯೋತಿ ಯಾತ್ರೆಯಲ್ಲಿ ಭಾಗಿಗಳಾಗಿ ಆದಿ ಶರಣರಿಗೆ ತಮ್ಮ ಕೃತಜ್ಞತೆ ಸಲ್ಲಿಸುವ ಅಪೇಕ್ಷೆಯುಳ್ಳ ಶರಣ ಬಂಧುಗಳು ತಮಗೆ ಬಿಡುವಾಗುವಷ್ಟು ಸಮಯ ಜ್ಯೋತಿ ಯಾತ್ರೆಯಲ್ಲಿ ಪಾಲ್ಗೊಳ್ಳಬಹುದು. ನಮಗೆ ಪತ್ರ ಬರೆದು ಕರಪತ್ರ, ರಸೀತಿ ಪುಸ್ತಕ ತರಿಸಿಕೊಂಡು ದೇಣಿಗೆ ಸಂಗ್ರಹಿಸಿಕೊಡಬಹುದು. ಕರಪತ್ರ, ಭಿತ್ತಿಪತ್ರ (ಪೋಸ್ಟರ್) ತರಿಸಿಕೊಂಡು ತಮ್ಮ ಊರುಗಳಲ್ಲಿ ಪ್ರಚಾರ ಮಾಡಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಿ ಕಲ್ಯಾಣ ಪರ್ವವನ್ನು ಯಶಸ್ವಿಗೊಳಿಸಬೇಕಾಗಿ ಕೋರುತ್ತೇವೆ.

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರದಷ್ಟೇ ಮಹತ್ವಪೂರ್ಣವಾದುದು ಬೀದರ ಜಿಲ್ಲೆಯಲ್ಲಿರುವ ಶರಣ ಭೂಮಿ ಬಸವಕಲ್ಯಾಣ. ಲಿಂಗಾಯತ ಸಮಾಜದ ಎರಡು ಕಣ್ಣುಗಳಂತೆ ಈ ಎರಡು ಸ್ಥಾನಗಳು. ಕೂಡಲಸಂಗಮದಲ್ಲಿ ಲಿಂಗಾಯತ ಧರ್ಮವು ಸ್ಥಾಪನೆಗೊಂಡರೆ ಅದು ಕ್ರಿಯಾರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ. ಕೂಡಲ ಸಂಗಮವು ತಂದೆಯ ತಾಯಿಯ ಮನೆಯಂತಿದ್ದರೆ ಬಸವ ಕಲ್ಯಾಣ ತಾಯಿಯ ತಾಯಿಯ ಮನೆಯಂತೆ. ಈ ಎರಡೂ ಶ್ರದ್ಧಾಕೇಂದ್ರಗಳ ಅಭಿವೃದ್ಧಿಗಾಗಿ ದುಡಿಯಬೇಕಾದುದು ನಮ್ಮ-ನಿಮ್ಮೆಲ್ಲರ ಕರ್ತವ್ಯ.

ಶರಣ ಮೇಳಕ್ಕೆಂದು ನೀವು ಬಹಳಷ್ಟು ಶ್ರಮಿಸಿದ್ದೀರಿ, ದೇಣಿಗೆ ಸಂಗ್ರಹಿಸಿದ್ದೀರಿ. ಈಗ ಕೇವಲ 3 ತಿಂಗಳ ಅವಧಿಯಲ್ಲಿ ಕಾಣಿಕೆಯನ್ನು ಪುನಃ ನೀವು ಹೇಗೆ ಜನರಲ್ಲಿ ಕೇಳಬೇಕು ಎಂಬ ಸಂಕೋಚ ನಮ್ಮನ್ನು ಕಾಡುತ್ತಲಿದೆ. ಆದರೂ ಪರಿಸ್ಥಿತಿ ಅನಿವಾರ್ಯವಾಗಿದೆ. ಬಸವ ಕಲ್ಯಾಣಕ್ಕೆ ಹೊಸ ಚೈತನ್ಯ ನೀಡಬೇಕಾದುದು ಅನಿವಾರ್ಯ ಕರ್ತವ್ಯ ಎನಿಸಿದೆ. ಇನ್ನೂ ತಡಮಾಡುವುದು ಸೂಕ್ತವಲ್ಲ ಎಂಬ ಭಾವ ಮನದಲ್ಲಿ ಕಾಡುತ್ತಲಿದೆ. ಆದ್ದರಿಂದ ಪರಿಸ್ಥಿತಿಯ ಮನವರಿಕೆ ಮಾಡಿಕೊಟ್ಟು ಸ್ವಯಂ ಪ್ರೇರಣೆಯಿಂದ ಕೊಡುವವರಿಂದ ಕಾಣಿಕೆ ಪಡೆಯಿರಿ.

ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-3325335/3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕಲ್ಯಾಣ ಪರ್ವ ಉತ್ಸವ ಸಮಿತಿ
ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
ದೂರವಾಣಿ : 08486-52856

ಕಲ್ಯಾಣ ಪರ್ವಕ್ಕೆ ಬನ್ನಿ ಹೇ ಶರಣ ಬಂಧುಗಳೇ

ಕಲ್ಯಾಣಕ್ಕೆ ಬನ್ನಿ ಹೇ ಶರಣ ಬಂಧುಗಳೇ
ಅಮರ ಗಣಂಗಳನು ಸ್ಮರಿಸುವಾ ಬನ್ನಿ ||ಪಲ್ಲವಿ||

ಷಟ್ ಪ್ರಮಥರ ಸ್ಮರಿಸಿ ಕರಮುಗಿದು ನಿಂದು
ಷಟ್ ಸ್ಥಲ ಧ್ವಜವನು ಹಾರಿಸುವ ಬನ್ನಿ
ಷಟ್ ಸ್ಥಲವನೇರಿದ ಶರಣ ಗಣಂಗಳ
ವಚನವನು ಪಾಲಿಸಲು ಪಣ ತೊಡುವ ಬನ್ನಿ ||1||

ಭಾನುನಾಮ ವರ್ಷದ ಚೈತ್ರ ಮಾಸದೊಳು
ಕಾಯಕದ ದಿನದಂದು, ಬಸವಂಗೆ ಶರಣಾಗಿ,
ಹರಳಯ್ಯ, ಮದುವಯ್ಯ, ಮಾರಯ್ಯರ ಸ್ಮರಿಸುತ್ತ
ಸತ್ಯ ಧರ್ಮಕೆ ಮಣಿದು, ಮುಕ್ತಿ ಹೊಂದುವ ಬನ್ನಿ ||2||

ಕಾಯಕ ಯೋಗಿಗಳು ನಾವೆಲ್ಲಾ ಕೂಡಿ,
ಕಾಯಕವೇ ಕೈಲಾಸ ಎಂದು ನಾವ್ ಸಾರಿ
ಕಲ್ಯಾಣ ಪರ್ವದಲಿ ಕರಸೇವೆ ಗೈಯುತ್ತಾ
ಕರುಣ ಪ್ರಸಾದ, ಗಣ ಪದವಿ ಹೊಂದುವ ಬನ್ನಿ ||3||

ಶರಣ. ಶ್ರೀಕಂಠಕುಮಾರ್. ಬಸವ ಗಂಗೋತ್ರಿ, ಬೆಂಗಳೂರು

ಜ್ಯೋತಿಗಳ ಆಗಮನ

1. ಉಳಿವೆಯಿಂದ ಹೊರಡುವ ಚನ್ನಬಸವ ಜ್ಯೋತಿಯು ಧಾರವಾಡಕ್ಕೆ ಶಿವರಾತ್ರಿಯಂದು ಆಗಮಿಸಲಿದ್ದು ಬಸವವಾರ(ಮಂಗಳವಾರ) ದಿ. 12-3-2002 ಧಾರವಾಡದಲ್ಲಿ ವಿಶೇಷವಾದ ಸ್ವಾಗತ ಸಮಾರಂಭವಿದೆ. ಗಣಮೇಳದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ 57ನೆಯ ವರ್ಧಂತಿಯ ಕಾರ್ಯಕ್ರಮವನ್ನು ಧಾರವಾಡ-ಹುಬ್ಬಳ್ಳಿಯ ಶರಣ ಬಂಧುಗಳು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ದಿ. 13-3-2002 ರಂದು ಆಚರಿಸಲಿದ್ದು ಪೂಜ್ಯ ಮಾತಾಜಿಯವರು ಧಾರವಾಡದ ಕಾರ್ಯಕ್ರಮದಲ್ಲಿ ಭಾಗಿಗಳಾಗಲಿದ್ದಾರೆ.
3. ಬಳ್ಳಿಗಾವಿಯಿಂದ ಹೊರಡುವ ಅಲ್ಲಮಪ್ರಭು ಜ್ಯೋತಿಯು ದಿ. 17-3-2002 ದೇವವಾರ(ಭಾನುವಾರ)ದಂದು ಬೆಂಗಳೂರು ನಗರಕ್ಕೆ ಆಗಮಿಸಲಿದ್ದು ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದ ಬಳಿ ಸ್ವಾಗತವಿದೆ. ಅಲ್ಲಿ ಭವ್ಯವಾದ ಮೆರವಣಿಗೆ-ಯನ್ನು ಬಸವೇಶ್ವರ ನಗರದ ವಿವೇಕಾನಂದ ಉದ್ಯಾನದವರೆಗೆ ಏರ್ಪಡಿಸಲಾಗಿದೆ.

Digitalized by e-Sahithya Documentation Forum
Sponsored by arayu Foundation Trust

ಬಸವ ಕಲ್ಯಾಣ ಜ್ಯೋತಿ ಯಾತ್ರೆ

ಬಸವ ಕಲ್ಯಾಣ ಜ್ಯೋತಿಯಾತ್ರೆ ಬಂದಿತಮ್ಮ ಬಂದಿತು ।
ಹರ್ಷ ತಂದಿತಮ್ಮ ತಂದಿತು ।
ಬನ್ನಿರಿ ಬನ್ನಿರಿ ಶರಣ ಬಂಧುಗಳೇ ।
ಹೋಗುವ ನಾವು ಕಲ್ಯಾಣ ಪರ್ವಕೆ ||ಪಲ್ಲವಿ||

ಕಲ್ಯಾಣ ಬಸವನು ಬೆಳಗಿದ ನಾಡು
ವಿಶ್ವ ಸಂದೇಶವ ಸಾರಿದ ನಾಡು
ಸಕಲ ಜೀವಾತ್ಮರ ಲೇಸನೇ ಬಯಸಿ
ವಿಶ್ವಕಲ್ಯಾಣವ ಬಯಸಿದ ನಾಡು ||ಬಸವ||

ಬಳ್ಳಿಗಾವೆಯ ಅಲ್ಲಮ ಪ್ರಭುಗಳು
ಶೂನ್ಯ ಪೀಠವನೇರಿದ ನಾಡು
ಶಿವಯೋಗಿ ಸಿದ್ಧರಾಮೇಶ್ವರ
ಅರಿವನು ಪಡೆದ ಪುಣ್ಯದ ಬೀಡು ||ಬಸವ||

ಚಿನ್ಮಯ ಜ್ಞಾನಿ ಚನ್ನಬಸವಣ್ಣನು
ಷಟಸ್ಥಲ ಪಥವ ತೋರಿದ ನಾಡು
ಮಡಿಯನು ಮಾಡುತ ಮಲಿನವ ಕಳೆದ
ಮಾಚಿ ತಂದೆಯು ಶ್ರಮಿಸಿದ ನಾಡು ||ಬಸವ||

ಬಸವಾದಿ ಶರಣರ ಅರಸುತ ಬಂದ
ಉಡುತಡಿ ಅಕ್ಕನು ನುಡಿದರು ಅಂದು
ಕಲ್ಯಾಣವನ್ನೇ ಕೈಲಾಸ ಮಾಡಿದ
ಬಸವ ಗುರುವಿನ ಕ್ಷೇತ್ರವಿದೆಂದು ||ಬಸವ||

ವಚನ ಸಾಹಿತ್ಯ ರಕ್ಷಣೆಗಾಗಿ
ಹೋರಾಟ ನಡೆಸಿದ ಕ್ರಾಂತಿ ಭೂಮಿ
ಜಾತೀಯತೆಯ ಭೇದವನಳಿಸಲು
ಜೀವವ ಕೊಟ್ಟ ತ್ಯಾಗಭೂಮಿ, ಇದು ಶರಣರ ಭೂಮಿ ||ಬಸವ||

ಬಸವನ ಕರೆಯಿದು ಕೇಳಿರಿ ಶರಣರೇ
ಕೂಡುವ ನಾವು ಕಲ್ಯಾಣ ಪರ್ವದಿ
ಸಚ್ಚಿದಾನಂದ ಪ್ರಿಯೆ ಮಾತೆಯ ಕರುಣೆಯಿಂ
ಹೊಂದುವ ನಾವು ದಿವ್ಯ ಆನಂದವ ||ಬಸವ||

ಶಾರದಾ ಬಸವರಾಜ್; ಭದ್ರಾವತಿ

ಮಂಗಳೂರು ಸಮೀಪದ ಬಿ.ಸಿ. ರೋಡ್-ಮೂಡ ಗ್ರಾಮದಲ್ಲಿ ಬಸವ ಮಂಟಪ ಆರಂಭ ; ಬಸವ ಮೂರ್ತಿಯ ಪ್ರತಿಷ್ಠಾಪನೆ

ದಕ್ಷಿಣ ಕನ್ನಡ ಜಿಲ್ಲೆಯ ಬಂಟಾಳ ತಾಲ್ಲೋಕಿನ ಮೂಡ ಗ್ರಾಮ ಮಂಗಳೂರು ನಗರಕ್ಕೆ ಹೊಂದಿಕೊಂಡು, ಬೆಂಗಳೂರು-ಮಂಗಳೂರು ಹೆದ್ದಾರಿಯ ಬಳಿ ಇದೆ. ಇಲ್ಲಿಯ ಕೃಷಿಯೋಗಿಗಳಾದ ಶರಣ. ಎ. ಚಂದಪ್ಪನವರು ಬಸವ ಪಥಿಕರಾಗಿ ನಿಷ್ಠೆಯಿಂದ ನಡೆಯುತ್ತ ಬಸವ ತತ್ವ ಪ್ರಚಾರಕ್ಕಾಗಿ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ ಎಂಬ ಒಂದು ಸಂಘಟನೆಯನ್ನು ರೂಪಿಸಿಕೊಂಡು ಬರುತ್ತಿದ್ದಾರೆ. ಬಸವ ತತ್ವದ ಪ್ರಚಾರವು ಅತ್ಯಂತ ಅಗತ್ಯವಾಗಿರುವುದರಿಂದ ಅಲ್ಲಿ ಒಂದು ಬಸವ (ದಿವ್ಯಜ್ಞಾನ) ಮಂಟಪ ಆಗಬೇಕೆಂದು ಹಂಬಲ ಹೊಂದಿದ್ದರು. ಇಂಥ ಶರಣರು ತಮ್ಮದೇ ಆದ ಅತ್ಯಂತ ಬೆಲೆಬಾಳುವ ತೋಟದ ಜಮೀನಿನಲ್ಲಿ ಕೊಂಚ ಭಾಗ ಬಿನ್‌ಶೇತಗಿ ಮಾಡಿಸಿ, ಸುಮಾರು 2-3 ಲಕ್ಷ ಬೆಲೆ ಬಾಳುವ ಪ್ರಾರ್ಥನಾ ಮಂದಿರವನ್ನು ಕಟ್ಟಿಸಿದರು.

ಇದೇ ಸ್ಥಳದಲ್ಲಿ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಸದ್ಗುರು ಅಲ್ಲಮ ಪ್ರಭು ಸ್ವಾಮಿಗಳ ಪ್ರವಚನವನ್ನು ದಿ. 14-2-2002 ರಂದು ಏರ್ಪಡಿಸಿದರು. ದಿ. 14-2-2002 ರಿಂದ 24-2-2002 ರವರೆಗೆ ವಿಶ್ವಧರ್ಮ ಪ್ರವಚನ ನಡೆದು, ದಿ. 25-2-2002 ರಂದು ಬಸವಣ್ಣನವರ ಅಭಯ ಮುದ್ರೆಯ ಅಮೃತ ಶಿಲಾಪುತ್ಥಳಿಯನ್ನು ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿದರು. ಸಹಸ್ರಾರು ಜನರಿಗೆ ಅನ್ನದಾಸೋಹ ಮಾಡಿಸಲಾಯಿತು. ದಿ. 25-2-2002 ರಂದು ಜಾಗವನ್ನು, ಕಟ್ಟಲಾದ ಸುಂದರ ಪ್ರಾರ್ಥನಾ ಮಂದಿರ ಸಹಿತವಾಗಿ ಬಸವ ಧರ್ಮ ಪೀಠಕ್ಕೆ ಶರಣ. ಎ. ಚಂದಪ್ಪನವರು ದಾನಪತ್ರ (Gift Deed) ಮಾಡಿ, ಫೀ ತುಂಬಿ ಕಾನೂನು ಬದ್ಧವಾಗಿ ನೋಂದಣಿ ಮಾಡಿಸಿದರು. ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು ಬಸವ ಧರ್ಮ ಪೀಠದ ಪ್ರತಿನಿಧಿಯಾಗಿ ಸಬ್-ರಿಜಿಸ್ಟ್ರಾರ್ ಮುಂದೆ ಕೊಡುಗೆಯನ್ನು ಸ್ವೀಕರಿಸಿದರು. ಇಂಥ ಪವಿತ್ರ ಕಾರ್ಯವನ್ನು ಮಾಡಿದ ಶರಣ. ಎ. ಚಂದಪ್ಪನವರು ಮತ್ತು ಅವರ ಮಕ್ಕಳು, ಮೊಮ್ಮಕ್ಕಳು, ಪರಿವಾರದವರಿಗೆಲ್ಲ ಶುಭವನ್ನು ಹಾರೈಸುತ್ತೇವೆ. ದಿ. 25-2-2002 ರಿಂದ ನಿತ್ಯವೂ ಬೆಳಗಿನ ಹೊತ್ತು ಬಸವೇಶ್ವರ ಪೂಜೆ ನಡೆಯುತ್ತದೆ, ಸಂಜೆ 7 ಗಂಟೆಗೆ ಸಂಕ್ಷಿಪ್ತ ಪ್ರಾರ್ಥನೆ-ನೆನಹು, ಪ್ರತಿ ಭಾನುವಾರ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ, ಸಂಜೆ 5 ರಿಂದ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಆದ್ದರಿಂದ ಪೂಜೆ-ಪ್ರಾರ್ಥನೆಗಳಲ್ಲಿ ಭಾಗವಹಿಸಲು ಎಲ್ಲ ಜಾತಿಮತ ಪಂಥ ಧರ್ಮಗಳವರಿಗೂ ಅವಕಾಶವಿದೆ.

ತಮ್ಮ ಇಷ್ಟಾರ್ಥಗಳ ಸಿದ್ಧಿಗಾಗಿ ಸಂಕಲ್ಪ ಹೊತ್ತು ಪೂಜೆ ಮಾಡುವವರಿಗೆ/ಮಾಡಿಸುವವರಿಗೆ ಅವಕಾಶವಿದೆ. ತಮ್ಮ ತಮ್ಮ ಮನೆಗಳಿಗೆ ಆಹ್ವಾನಿಸಿದರೂ ಕ್ರಿಯಾ ಮೂರ್ತಿಗಳು ಬಂದು ಪೂಜಾದಿ ಕಾರ್ಯಗಳನ್ನು ನೆರವೇರಿಸಿಕೊಡುವರು.

ಶರಣ. ಮಹಾಂತೇಶ್ ಯೋಗಾಚಾರ್ಯರು ಪ್ರತಿನಿತ್ಯ ಯೋಗ ತರಗತಿಗಳನ್ನು ನಡೆಸುತ್ತಿಲಿದ್ದು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸ : ದೂರವಾಣಿ ಸಂಖ್ಯೆ : 08255-30031
ಶರಣ. ಎ. ಚಂದಪ್ಪನವರು, ಶ್ರೀ ಬಸವೇಶ್ವರ ದಿವ್ಯಜ್ಞಾನ ಮಂಟಪ
ಅಗ್ರ ಬಯಲು, ಬಿ-ಮೂಡಗ್ರಾಮ, ತಾ-ಬಂಟವಾಳ
ಪೋ-ಜೋಡುಮಾರ್ಗ-574219, ಜಿ-ದಕ್ಷಿಣ ಕನ್ನಡ.
ಸಂಚಾಲಕರು : ಶರಣ. ಡಿ. ಎಂ. ಕುಲಾಲ್, ಅರ್ಚಕರು : ಶರಣ. ವಿರುಪಾಕ್ಷಪ್ಪ

Digitalized by e-Sahithya Documentation Forum
Sponsored by arayu Foundation Trust

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಬಸವ ಧರ್ಮ ಪೀಠ (ರಿ.)

ಮಹಾಮನೆ ಮಹಾಮಠ, ಶರಣಲೋಕ

ಕೂಡಲ ಸಂಗಮ ಸುಕ್ಷೇತ್ರ-587115

ತಾ-ಹುನಗುಂದ, ಜಿ-ಬಾಗಲಕೋಟೆ. ಕರ್ನಾಟಕ ರಾಜ್ಯ, ಭಾರತ

ಗಣಮೇಳಕ್ಕೆ ಕರೆ

ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವೆಲ್ಲವ
ಕೋಳಿಯೊಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ

ಎಂದು ಧರ್ಮಪಿತರು ಹೇಳುವಂತೆ ಭಕ್ತಿಪಕ್ಷದ ಸದಸ್ಯರಾಗಬೇಕಾದುದು ಎಲ್ಲ ಬಸವ ಭಕ್ತರ ಆದ್ಯ ಕರ್ತವ್ಯ.

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡುಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರುಪಥವೆ ಮೊದಲು ;
ನಮ್ಮ ಲಿಂಗದೇವರನರಿವೊಡೆ ಶರಣರ ಸಂಗವೇ ಮೊದಲು ಮೊದಲು !

ಆದ್ದರಿಂದ ಗಣ ಸಮಾವೇಶಗಳಲ್ಲಿ ಭಾಗವಹಿಸುವುದು ಅತ್ಯಂತ ಅವಶ್ಯಕ. ನೆನಹು-ಪ್ರತಿನಿತ್ಯ ಸಂಜೆ 7 ಗಂಟೆಗೆ ಮಾಡುವ ಸಂಕ್ಷಿಪ್ತ ಪ್ರಾರ್ಥನೆ, ಶರಣ ಸಂಗಮ-ವಾರದ ಸಾಮೂಹಿಕ ಪ್ರಾರ್ಥನೆ, ಗಣ ಮೇಳ-ಶಿವರಾತ್ರಿಯಂದು ಮಾಡುವ ಸಮುದಾಯ ಪ್ರಾರ್ಥನಾ ಸಭೆ, ಶರಣ ಮೇಳ-ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಜನವರಿ 11 ರಿಂದ 15ರ ವರೆಗೆ ನಡೆಯುವ ಶರಣ ಯಾತ್ರೆ; ಇದಲ್ಲದೆ ಶರಣ ಬಂಧುಗಳು ತಮ್ಮ ಮನೆಯ ಸುಖದ ಸಮಾರಂಭಗಳಾದ ವಿವಾಹ, ನಾಮಕರಣ, ಗೃಹ ಪ್ರವೇಶ ಮುಂತಾದವು. ಧಾರ್ಮಿಕ ವಿಧಿಗಳಾದ ವಿಭೂತಿ ವೀಳ್ಯ, ಲಿಂಗೈಕ್ಯ ಸಂಸ್ಕಾರ, ಲಿಂಗೈಕ್ಯರ ಸಂಸ್ಮರಣೆ ಮುಂತಾದವುಗಳನ್ನು ನಡೆಸುವ ಸಮಯದಲ್ಲಿ ಮಾಡುವ ಗಣ ಸಮಾವೇಶವಾದ ಶರಣ ಸಮಾಗಮ ಇವೆಲ್ಲವೂ ಶರಣ ಬಂಧುಗಳನ್ನು ಪರಸ್ಪರ ಒಂದು ಕಡೆ ಬೆರೆಯುವಂತೆ, ಬೆಸೆಯುವಂತೆ ಮಾಡುವ ಅಪೂರ್ವ ಕಾರ್ಯಕ್ರಮಗಳು. ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆದ ಏಳನೆಯ ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ದಿ. 15-1-1994 ರಂದು ಶರಣರ ಮಹಾಸಭೆಯು ಒಂದು ಚಾರಿತ್ರಿಕ ನಿರ್ಣಯವನ್ನು ತೆಗೆದುಕೊಂಡಿದೆ. ಅದೆಂದರೆ ಪ್ರತಿ ವರ್ಷವೂ ಮಹಾಶಿವರಾತ್ರಿಯಂದು ಎಲ್ಲ ಗ್ರಾಮ, ಊರು, ಜಿಲ್ಲಾ ಕೇಂದ್ರ, ನಗರಗಳಲ್ಲಿ "ಶರಣ ಗಣ ಮೇಳ" ಎಂಬ ಸಮಾವೇಶವನ್ನು ನಡೆಸಿ ಸೃಷ್ಟಿಕರ್ತ ಲಿಂಗದೇವನನ್ನು-ಧರ್ಮಗುರು ಬಸವಣ್ಣನವರನ್ನು ಕೊಂಡಾಡಬೇಕೆಂಬುದು. ಈ ಗಣಮೇಳವನ್ನು ನೀವು ನಡೆಸಬೇಕೆಂಬ ದಿವ್ಯ ಆದೇಶವನ್ನು ಬಸವ ಧರ್ಮದ ಮಹಾಜಗದ್ಗುರು ಪೀಠವು ಕಳಿಸಿಕೊಟ್ಟಿದೆ. ಈ ದಿವ್ಯ ಆದೇಶ ಪಾಲನೆ ನಿಮ್ಮ ಪವಿತ್ರ ಕರ್ತವ್ಯ ಎಂದೇ ಭಾವಿಸಿದ್ದೇವೆ.

ಶಿವರಾತ್ರಿಯು ಬಸವ(ಮಂಗಳ)ವಾರ ದಿ. 12-3-2002 ರಂದು ಒದಗಿ ಬಂದಿದ್ದು ಅಂದು

ಗಣಮೇಳವನ್ನು ತಾವು ನಡೆಸಬೇಕು. ಊರಿನ ಮಧ್ಯದಲ್ಲಿರುವ ಒಂದು ವಿಶಾಲವಾದ ಮೈದಾನದಲ್ಲಿ ಅಥವಾ ವಿಶಾಲವಾದ ಸಭಾ ಭವನದಲ್ಲಿ ಪ್ರಾರ್ಥನೆಯನ್ನು ನಡೆಸಬೇಕು. ಗಣ್ಯರಿಂದ ಧ್ವಜಾರೋಹಣ, ಬಸವ ಭಾವಚಿತ್ರ ಪೂಜೆ ಮಾಡಬೇಕು. ಅಂದು ಯಾವುದೇ ವ್ಯಕ್ತಿಗೆ ಅವರು ಎಷ್ಟೇ ದೊಡ್ಡವರಿರಲಿ ಅವರಿಗೆ ಮಾಲಾರ್ಪಣೆ ಮಾಡದೆ ಅವರಿಂದ ಧರ್ಮಪಿತರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿಸಬೇಕು. ಬಸವ ಧರ್ಮಪೀಠದಿಂದ ಕಳಿಸಿಕೊಡುವ (ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ಮುದ್ರಿಸಲಾಗುವ) ಸಂದೇಶವನ್ನು ಓದಬೇಕು. ಶ್ರದ್ಧಾ-ಭಕ್ತಿಯಿಂದ ಉಪನ್ಯಾಸ ಮಾಡುವವರಿದ್ದರೆ ಮಾಡಿಸಬೇಕು. ಧಾರ್ಮಿಕ ಶ್ರದ್ಧೆಯೇ ಇರದ ಉಪನ್ಯಾಸಕರಿಂದ ಗೊಂದಲಪೂರ್ಣ ಭಾಷಣಗಳನ್ನು ಮಾಡಿಸಲು ಹೋಗಬಾರದು. ಬೆಳಿಗ್ಗೆ ಮಾಡುವ ಸಮುದಾಯ ಪ್ರಾರ್ಥನೆ-ಶರಣ ಸಂಗಮ ಕಡ್ಡಾಯ ವಿಧಿ. ಸಾಮೂಹಿಕ ಇಷ್ಟಲಿಂಗಾರ್ಚನೆ, ಜಾಗರಣೆ ಮುಂತಾದುವನ್ನು ಅವರವರ ಅನುಕೂಲತೆಗೆ ತಕ್ಕಂತೆ ಇಟ್ಟುಕೊಳ್ಳಬಹುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

"ಕಲ್ಯಾಣ ಕಿರಣ" ಮಾಸ ಪತ್ರಿಕೆ

ಬಸವ ಧರ್ಮ ಪೀಠ, ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳ ಚಟುವಟಿಕೆ, ಕಾರ್ಯಕ್ರಮ ವಿವರ ಮುಂತಾದುವನ್ನು ತಿಳಿಯಲು, ತಾತ್ವಿಕವಾಗಿ ಮಾಹಿತಿ ಪಡೆಯಲು ಬಸವ ತತ್ವಾನುಯಾಯಿಗಳು ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ತಪ್ಪದೇ ಓದುವುದು ಅತ್ಯಗತ್ಯ. ಕೆಲವೊಂದು ವಿಷಯಗಳನ್ನು ಬೇರೆ ಪತ್ರಿಕೆಗಳ ಮೂಲಕ ಕೊಡುವುದು ತಿಳಿಸುವುದು ಸಾಧ್ಯವಾಗದು. ಅವರು ಹಾಕುವುದೂ ಇಲ್ಲ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು ಕಡ್ಡಾಯವಾಗಿ ಕಲ್ಯಾಣ ಕಿರಣ ಮಾಸಪತ್ರಿಕೆಯನ್ನು ವೈಯಕ್ತಿಕವಾಗಿ ಮತ್ತು ಪ್ರಾರ್ಥನಾ ಸಭೆಗಳಲ್ಲಿ ಓದುವುದು ಅತ್ಯಗತ್ಯವಾಗಿರುತ್ತದೆ. ಕೆಲವು ಪತ್ರಿಕೆಗಳು ಪೂರ್ವಾಗ್ರಹ ಪೀಡಿತವಾಗಿ ಉತ್ಪ್ರೇಕ್ಷಿತ ವರದಿಗಳನ್ನು, ಸುಳ್ಳು ವಿವರಗಳನ್ನೂ ಕೊಡುತ್ತಿರುತ್ತವೆ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು 500 ರೂ. ಕಟ್ಟಿ ಆಜೀವ ಸದಸ್ಯರು ಅಥವಾ 50 ರೂ. ಕಟ್ಟಿ ವಾರ್ಷಿಕ ಚಂದಾದಾರರಾಗುವುದು ಅವಶ್ಯವಿರುತ್ತದೆ.

ವಿಳಾಸ : ಕಲ್ಯಾಣ ಕಿರಣ ಮಾಸಪತ್ರಿಕೆ, ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

ತಮಿಳುನಾಡು, ಆಂಧ್ರ, ಮಹಾರಾಷ್ಟ್ರದಲ್ಲಿರುವ ರಾಷ್ಟ್ರೀಯ ಬಸವ ದಳಗಳವರು ಕನ್ನಡ ಬಲ್ಲ ಯಾರಾದರೂ ಒಬ್ಬರನ್ನು ಆಹ್ವಾನಿಸಿ ಕಲ್ಯಾಣ ಕಿರಣವನ್ನು ಪೂರ್ಣವಾಗಿ ಓದಿ, ತಿಳಿಯುವ ಪರಿಪಾಠ ಇರಿಸಿಕೊಳ್ಳಬೇಕು.

ಶರಣ ಮೇಳ ರಸೀತಿ ಪುಸ್ತಕ ವಾಪಸ್ಸು

2002 ನೆಯ ಜನವರಿಯಲ್ಲಿ ನಡೆದ 15ನೆಯ ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು ರಸೀತಿ ಪುಸ್ತಕಗಳನ್ನು ಕಳಿಸಲಾಗಿತ್ತು. ಕೆಲವರು ಶರಣ ಮೇಳದ ಸಮಯದಲ್ಲಿ ತಂದು ಕೊಟ್ಟಿದ್ದಾರೆ ಮತ್ತೆ ಕೆಲವರು ಕೊಡುತ್ತಿದ್ದಾರೆ. ಆದರೆ ಎಲ್ಲರೂ ಮಾರ್ಚ್ ಕೊನೆಯೊಳಗೆ ರಸೀದಿ ಪುಸ್ತಕವನ್ನು ತಲುಪಿಸಲೇಬೇಕೆಂದು ಕೋರುತ್ತೇವೆ. ಸಂಗ್ರಹ ಮಾಡಿದ ಹಣಕ್ಕೆ ಡಿ.ಡಿ.ತೆಗೆಸಿ ಕಳಿಸಬೇಕು. ಒಂದು ವೇಳೆ ಏನೂ ಸಂಗ್ರಹ ಮಾಡಿರದಿದ್ದರೆ ರಸೀತಿ ಪುಸ್ತಕಗಳನ್ನು ವಾಪಸ್ಸು ಕಳಿಸಬೇಕು. ಬೆಂಗಳೂರು ವಿಳಾಸಕ್ಕೇ ಕಳಿಸಬೇಕೆಂದು ಕೋರುತ್ತೇವೆ. ಶರಣ ಮೇಳ ಉತ್ಸವ ಸಮಿತಿಯು ನೋಂದಾಯಿತ ಟ್ರಸ್ಟ್ ಇರುವುದರಿಂದ ನಾವು ಸರಿಯಾಗಿ ಲೆಕ್ಕವಿಡಬೇಕಾದುದು ಕರ್ತವ್ಯವಾಗಿದೆ. ಆದ್ದರಿಂದ ಸಹಕರಿಸಿರಿ.

Digitalized by e-Sahithya Documentation Forum
Sponsored by arayu Foundation Trust

ಮಾರ್ಚ್‌ವಲ್ಲಿ ಬರುವ ಹಬ್ಬ - ಹುಣ್ಣಿಮೆಗಳು.

೧. ಚನ್ನಹುಣ್ಣಿಮೆ - ಮಾಘ ಪೌರ್ಣಿಮೆ. ಅಂದು ಶರಣ ಗಣ ಸಮಾವೇಶ ಮಾಡಿ ಬೆಳುದಿಂಗಳ ಊಟವನ್ನು ಸಾಮೂಹಿಕ ಪ್ರಾರ್ಥನಾ ನಂತರ ಮಾಡುವುದು. ದಿ.27-2-2002

2. ದಿ. 12-3-2002 ಬಸವ (ಮಂಗಳ)ವಾರ ಮಹಾಶಿವರಾತ್ರಿಯಂದು ಗಣಮೇಳ.

೨. ಹೋಳಿ ಹುಣ್ಣಿಮೆಯು ದಿ.28-3-2002 ರಂದು ಬಂದಿದ್ದು, ಆದರ ಹಿಂದಿನ ದಿನಗಳಲ್ಲಿ ಕ್ರಿ.ಶ. 1196 ರಲ್ಲಿ ಕಲ್ಯಾಣ ಕ್ರಾಂತಿ ಸಂಭವಿಸಿದುದು, ಹೋಳಿ ಹುಣ್ಣಿಮೆಯಂದು ಇನ್ನಿತರ ಜನರು ಅತ್ಯಂತ ಕೆಳಮಟ್ಟದ ಆಚರಣೆ ಮಾಡುವ ಕಾರಣ ಬಸವಾಯತರು ತಮ್ಮ ತಮ್ಮ ಮನೆಗಳಲ್ಲೇ 807ನೆಯ ಕಲ್ಯಾಣ ಕ್ರಾಂತಿ ಸಂಸ್ಮರಣಾ ಕಾರ್ಯಕ್ರಮವನ್ನು ಆಚರಿಸಬೇಕು.

ಫಾಲ್ಗುಣ ದ್ವಾದಶಿಯಂದು	ದಿ. 25-3-2002	ಧರ್ಮಪಿತರ ಬಸವಣ್ಣನವರ ಗಡಿಪಾರು
ತ್ರಯೋದಶಿಯಂದು	ದಿ. 26-3-2002	ಹರಳಯ್ಯ-ಮಧುವರಸ-ಶೀಲವಂತರ ಬಂಧನ
ಚತುರ್ದಶಿಯಂದು	ದಿ. 27-3-2002	ಶರಣರ ವಧೆ ಎಳೆಹೂಟೆ
ಹೋಳಿ ಹುಣ್ಣಿಮೆಯಂದು	ದಿ. 28-3-2002	ಬಿಜ್ಜಳನ ವಧೆ
ಪಾಡ್ಯದಂದು	ದಿ. 29-3-2002	ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ
ದ್ವಿತೀಯಾದಂದು	ದಿ. 30-3-2002	ಕಲ್ಯಾಣ ಕ್ರಾಂತಿ ಸಂಸ್ಮರಣಾ ದಿನ

ಈ ಆರೂ ದಿವಸಗಳು ಬಸವ ಧರ್ಮದ ಇತಿಹಾಸದಲ್ಲಿ ಕರಾಳ ದಿನಗಳು. ಆದ್ದರಿಂದ ಶರಣ ಬಂಧುಗಳು ಆರು ದಿವಸಗಳ ಕಾಲ ತಮ್ಮ ತಮ್ಮ ಮನೆಗಳಲ್ಲಿ ಕಲ್ಯಾಣ ಕ್ರಾಂತಿಯ ಪುಸ್ತಕವನ್ನು ಸಂಜೆಯ ವೇಳೆ ಪಾರಾಯಣ ಮಾಡಬೇಕು. ಕಲ್ಯಾಣ ಕ್ರಾಂತಿ ಪುಸ್ತಕ 142 ಪುಟಗಳಿಂದ ಕೂಡಿದ್ದು ಆರು ದಿನಗಳಿಗೆ ವಿಂಗಡಿಸಿಕೊಳ್ಳಬೇಕು. ಪ್ರತಿದಿನ ಸಂಜೆ 7 ಗಂಟೆಗೆ ಧರ್ಮಪಿತರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ನೆನಹು ಮಾಡಿ, ಕಲ್ಯಾಣ ಕ್ರಾಂತಿಯ 24 ಪುಟಗಳನ್ನು ಪಠಣ ಮಾಡಬೇಕು. ಇನ್ನಿತರರು ಕುಳಿತು ಕೇಳಬೇಕು. ಫಾಲ್ಗುಣ ಮಾಸದ ಬಹುಳ ದ್ವಿತೀಯ ದಿ.30-3-2002 ರಂದು ಮಹಾಮಂಗಲದೊಡನೆ ಪಠಣವನ್ನು ಮುಕ್ತಾಯ ಮಾಡಬೇಕು. ನಾನು ಬರೆದಿರುವ ಕಲ್ಯಾಣ ಕ್ರಾಂತಿ ಪುಸ್ತಕವು ಮರಾಠಿ ಭಾಷೆಯಲ್ಲೂ ತರ್ಜುಮೆಗೊಂಡಿದೆ. ಮರಾಠಿ ಮಾತೃಭಾಷೆಯವರು ಅದನ್ನೇ ಪಠಣ ಮಾಡಬೇಕು. ಈ ಎಲ್ಲ ಧಾರ್ಮಿಕ ಆದೇಶಗಳನ್ನು ಶ್ರದ್ಧಾ-ಭಕ್ತಿಯಿಂದ ಪಾಲಿಸಬೇಕೆಂದು ಹೃತ್ಪೂರ್ವಕವಾಗಿ ಸೂಚಿಸುತ್ತೇವೆ.

ದಿ. 25-2-2002

ಶುಭಹಾರೈಕೆಗಳೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ವಚನಾಮೃತ

ದೇವನೊಬ್ಬ ನಾಮ ಹಲವು ?
ಪರಮ ಪತಿವ್ರತೆಗೆ ಗಂಡನೊಬ್ಬ !
ಮತ್ತೊಂದಕ್ಕೆರಗಿದಡೆ
ಕಿವಿ-ಮೂಗ ಕೊಯ್ಯುವನು !
ಹಲವು ದೈವದ ಎಂಜಲ
ತಿಂಬುವವರನೇನೆಂಬೆ ಲಿಂಗದೇವಾ ? -ಬ.ವ.ದೀ 612

ಗಣಮೇಳದಲ್ಲಿ ಸಂದೇಶ ವಾಚನ

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ 'ಗಣಮೇಳ'ದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣಮೇಳ'ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು. ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣಧರ್ಮ' ಒಂದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು ; ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ

Digitalized by e-Sahithya Documentation Forum
Sponsored by arayu Foundation Trust

ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು, ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣಮೇಳಾಪ' ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ನಾವೆಲ್ಲ ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage)ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಶಿವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ ಇವರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈ ವರೆಗೆ ಆಗಿ ಹೋಗಿರುವ ಶಿವಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ - ಲಿಂಗೈಕ್ಯ ದಿನ ಆಚರಿಸಲು ವರ್ಷದ ೩೬೫ ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನೂ ಆದ ವೇದಪೂರ್ವ ಪ್ರವಾದಿ 'ಯೋಗಿಶಿವ'ನ ತಪಸ್ಸಿನ ದಿನವಾದ 'ಶಿವರಾತ್ರಿಯಂದು' ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸಾರವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. ೧೧೩೪ ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು. ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು

ಬೆಳಿಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನಿಂದ ದಿವ್ಯ ಆದೇಶವನ್ನು ಪಡೆದರು. ಸಾಕ್ಷಾತ್ಕಾರದ ಅನುಭವವಾಗಿ ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ-ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು. ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ, ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು. ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು. ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟಿನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು. ಅವರ ನಿರ್ಗಮನದ ನಂತರ ಕಲ್ಯಾಣದಲ್ಲಿ ಕ್ರಾಂತಿಯಾಗಿ ಶರಣರ ವಧೆಯಾಯಿತು. ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರು ನಳನಾಮಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ ಕ್ರಿ.ಶ.೧೧೯೬ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಬಸವಾದಿ ಪ್ರಮಥರು ವಿಶೇಷ ಪಥವನ್ನು ತೋರಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

೧. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
೨. ದೇವನು ಒಬ್ಬ (ಲಿಂಗಾಚಾರ)
೩. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
೪. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
೫. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
೬. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ -ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ ನೆಲೆ -ಪರಮಾತ್ಮನಲ್ಲಿ ಒಡವೆರೆದು ಒಂದಾಗುವುದು, ಜೀವನು ಪರಶಿವನೊಡನೆ ಒಂದಾಗಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರುಸ್ಥಲ (stages)ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು ! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ- ಜಂಗಮ- ವಿಭೂತಿ-ರುದ್ರಾಕ್ಷಿ-ಮಂತ್ರ, ಕರುಣೋದಕ-ಕರುಣಪ್ರಸಾದ ಅಳವಡಿಸಿಕೊಳ್ಳುವುದು.

Digitalized by e-Sahithya Documentation Forum
Sponsored by arayu Foundation Trust

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟುಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿ ಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ಈ ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಲ್ಲ

ವಿಶ್ವಗುರು ಬಸವಣ್ಣನವರು ವಿಶ್ವಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ, ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣಮೇಳದ ಇಂದು ತೊಡೋಣ. ★

"ಜಯಗುರು ಬಸವೇಶ ಹರಹರ ಮಹಾದೇವ"

ಜ್ಯೋತಿ ಯಾತ್ರೆಯ ದಿನಾಂಕಗಳಲ್ಲಿ ಬದಲಾವಣೆ ಸಾಧ್ಯತೆ

ಕೆಲವು ಊರುಗಳವರ ವಿಶೇಷ ಆಹ್ವಾನಗಳ ಮೇರೆಗೆ ಜ್ಯೋತಿ ಯಾತ್ರೆ ಅಲ್ಲಿಗೆ ಹೋದರೆ ಆಗ ದಿನಾಂಕಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ. ಆ ಬದಲಾವಣೆಯನ್ನು ಮೊದ ಮೊದಲೇ ತಿಳಿಸಲಾಗುವುದು.

ಅಲ್ಲಮ ಪ್ರಭು ಜ್ಯೋತಿ ಸಂಚಾರ

2002ರ ಮೇ 1-2-3 ರಂದು ಬಸವ ಕಲ್ಯಾಣದಲ್ಲಿ ನಡೆಯಲಿರುವ ಕಲ್ಯಾಣ ಪರ್ವದ ನಿಮಿತ್ತ

ಬಳ್ಳಿಗಾವಿ - ಬಸವಕಲ್ಯಾಣ ಜ್ಯೋತಿ ಯಾತ್ರೆ

ನೇತೃತ್ವ: ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಬಸವ ಧರ್ಮ ಪೀಠ, ಕೂಡಲಸಂಗಮ

27-2-2002	ಬಳ್ಳಿಗಾವಿ
28-2-2002	ಶಿರಾಳಕೊಪ್ಪ
1-3-2002	(ಉಡುತಡಿ) ಶಿಕಾರಿಪುರ
2-3-2002	ಶಿವಮೊಗ್ಗ
3-3-2002	ಶಿವಮೊಗ್ಗ
4-3-2002	ಭದ್ರಾವತಿ
5-3-2002	ತರೀಕೆರೆ
6-3-2002	ಬೀರೂರು
	(ಲಿಂಗದಹಳ್ಳಿ, ನಂದಿ)
7-3-2002	ಕಡೂರು
8-3-2002	ಅರಸೀಕೆರೆ
9-3-2002	ಸಕ್ಕರೆಪಟ್ಟಣ
10-3-2002	ಚಿಕ್ಕಮಗಳೂರು
11-3-2002	ಸಕಲೇಶಪುರ
12-3-2002	ಅರಕಲಗೂಡು
13-3-2002	ಹಾಸನ
14-3-2002	ಚನ್ನರಾಯಪಟ್ಟಣ
15-3-2002	ಕುಣಿಗಲ್
16-3-2002	ನೆಲಮಂಗಲ
17-3-2002	ಬೆಂಗಳೂರು
18-3-2002	ವಿಜಯಪುರ
19-3-2002	ದೇವನಹಳ್ಳಿ
20-3-2002	ದೊಡ್ಡಬಳ್ಳಾಪುರ
21-3-2002	ತುಮಕೂರು
22-3-2002	ಕೊರಟಗೆರೆ
23-3-2002	ಮಧುಗಿರಿ
24-3-2002	ಹಿರಿಯೂರು
25-3-2002	ಚಿತ್ರದುರ್ಗ
26-3-2002	ಚಳ್ಳಕೆರೆ
27-3-2002	ದೊಡ್ಡ ಉಳ್ಳರ್ತಿ
28-3-2002	ಕಲ್ಯಾಣ ದುರ್ಗ
29-3-2002	ರಾಯದುರ್ಗ

30-3-2002	ಮೊಳಕಾಲ್ಮುರು
31-3-2002	ಗುಡೇಕೋಟೆ
1-4-2002	ರಾಂಪುರ
2-4-2002	ಬಳ್ಳಾರಿ
3-4-2002	ಹೊಸಪೇಟೆ
4-4-2002	ಕೊಪ್ಪಳ
5-4-2002	ಅಳವಂಡಿ
6-4-2002	ಗಂಗಾವತಿ
7-4-2002	ಸಿದ್ದಾಪುರ
8-4-2002	ಸಿರಗುಪ್ಪ
9-4-2002	ಸಿಂಧನೂರು
10-4-2002	ಮಾನ್ವಿ
11-4-2002	ರಾಯಚೂರು
12-4-2002	ಶಕ್ತಿನಗರ
13-4-2002	ದೇವದುರ್ಗ
14-4-2002	ಯಾದಗಿರಿ
15-4-2002	ಯಡಹಳ್ಳಿ, ಹಂಗರಗಿ
16-4-2002	ಚಿತ್ತಾಪುರ
17-4-2002	ಗುಲಬರ್ಗಾ
18-4-2002	ಬಿಜನಳ್ಳಿ
19-4-2002	ಸೇಡಂ
20-4-2002	ನಿಡಗುಂದಾ
21-4-2002	ಚಿಂಚೋಳಿ
22-4-2002	ನಿರ್ಣಾ
23-4-2002	ಜಹೀರಾಬಾದ್
24-4-2002	ಬೀದರ್
25-4-2002	ಹಲಬರ್ಗಾ
26-4-2002	ಸಿದ್ದೇಶ್ವರ
27-4-2002	ಭಾಲ್ಕಿ
28-4-2002	ಹುಲಸೂರು
29-4-2002	ಬಂದವರ ಓಣಿ
30-4-2002	ಬಸವ ಕಲ್ಯಾಣ
1-5-2002	ಬಸವ ಕಲ್ಯಾಣ ಸಮ್ಮೇಳನ

Digitalized by e-Sahithya Documentation Forum
Sponsored by arayu Foundation Trust

ಚನ್ನಬಸವ ಜ್ಯೋತಿ ಸಂಚಾರ

2002ರ ಮೇ 1,2 ಮತ್ತು 3 ರಂದು ಬಸವ ಕಲ್ಯಾಣದಲ್ಲಿ ನಡೆಯಲಿರುವ ಕಲ್ಯಾಣ ಪರ್ವದ ನಿಮಿತ್ತ

ಉಳವಿ - ಬಸವಕಲ್ಯಾಣ ಜ್ಯೋತಿ ಯಾತ್ರೆ

ನೇತೃತ್ವ : ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಬಸವ ಧರ್ಮ ಪೀಠ, ಕೂಡಲಸಂಗಮ

27-2-2002	ಉಳವಿಯ ಮಹಾಮನೆ	31-3-2002	ಗೋಕಾಕ
28-2-2002	ಉಳವಿ, ಜೋಯಿಡಾ	1-4-2002	ಹಿಡಕಲ್
1-3-2002	ಕುಂಬಾರವಾಡ	2-4-2002	ಅಂಕಲಗಿ
2-3-2002	ಪಾಟೋಳಿ	3-4-2002	ಬೆಳಗಾಂವ್
3-3-2002	ಅಂಬಿಕಾನಗರ	4-4-2002	ಕಾಕತಿ
4-3-2002	ದಾಂಡೇಲಿ	5-4-2002	ಹತ್ತರಕಿ
5-3-2002	ಕದ್ರಾ	6-4-2002	ಸಂಕೇಶ್ವರ
6-3-2002	ಗಣೇಶಗುಡಿ	7-4-2002	ನಿಪ್ಪಾಣಿ
7-3-2002	ಸೂಪಾ	8-4-2002	ಗಡ್ಹಿಂಗ್ಲಾಜ್
8-3-2002	ಲೊಂಡಾ	9-4-2002	ಹುಕ್ಕೇರಿ
9-3-2002	ರಾಮನಗರ	10-4-2002	ಘಟಪ್ರಭಾ
10-3-2002	ಹಳ್ಯಾಳ	11-4-2002	ಮೂಡಲಗಿ
11-3-2002	ಉಣಕಲ್	12-4-2002	ತೇರದಾಳ
12-3-2002	ಧಾರವಾಡ	13-4-2002	ಉಗಾರಖುರ್ದ
13-3-2002	ಅಳ್ನಾವರ	14-4-2002	ಮೀರಜ್
14-3-2002	ಲಿಂಗನಮಠ	15-4-2002	ಅಥಣಿ
15-3-2002	ಕಕ್ಕೇರಿ	16-4-2002	ಬನಹಟ್ಟಿ
16-3-2002	ಖಾನಾಪೂರ	17-4-2002	ಮಹಾಲಿಂಗಪುರ
17-3-2002	ನಂದಗಡ	18-4-2002	ಮುಧೋಳ್
18-3-2002	ಹಲಸಗಿ	19-4-2002	ಜಮಖಂಡಿ
19-3-2002	ಬೀಡಿ	20-4-2002	ಹುನ್ನೂರು
20-3-2002	ಇಟಗಿ	21-4-2002	ತಿಕೋಟಾ
21-3-2002	ಕಾದರವಳ್ಳಿ	22-4-2002	ಕಡಗಂಚಿ
22-3-2002	ಎಂ.ಕೆ. ಹುಬ್ಬಳ್ಳಿ	23-4-2002	ಆಳಂದ
23-3-2002	ಶುಗರ್ ಫ್ಯಾಕ್ಟರಿ	24-4-2002	ಬೋಧನ್
24-3-2002	ಹಿರೇಬಾಗೇವಾಡಿ	25-4-2002	ಸಲಗರ್
25-3-2002	ಗೊಡಚಿ	26-4-2002	ಬೋಸಗಾ
26-3-2002	ಮುರಗೋಡ	27-4-2002	ಹಾರುಗೋಡ್
27-3-2002	ಬೈಲಹೊಂಗಲ	28-4-2002	ಹಂದ್ರಾಳ್
28-3-2002	ತಲ್ಲೂರ	29-4-2002	ಹೊನ್ನಳ್ಳಿ
29-3-2002	ಯರಗಟ್ಟಿ	30-4-2002	ಮಾಟಾಳ್
30-3-2002	ಕಡಕೋಳ	1-5-2002	ಬಸವ ಕಲ್ಯಾಣ ಸಮ್ಮೇಳನ

ಅಕ್ಕಮಹಾದೇವಿ ಜ್ಯೋತಿ ಸಂಚಾರ

2002ರ ಮೇ 1,2 ಮತ್ತು 3 ರಂದು ಬಸವ ಕಲ್ಯಾಣದಲ್ಲಿ ನಡೆಯಲಿರುವ
ಕಲ್ಯಾಣ ಪರ್ವದ ನಿಮಿತ್ತ

ಶ್ರೀಶೈಲ (ಕದಳಿ ಬನ) - ಬಸವ ಕಲ್ಯಾಣ ಜ್ಯೋತಿ ಯಾತ್ರೆ

ನೇತೃತ್ವ : ಶರಣ. ವೀರಭದ್ರಯ್ಯ ಸ್ವಾಮಿ ಗುರುಮಠ, ಔರಾದ್ ಸಿರ್ಸಿ, ವಯಾ: ಕಮಠಾಣ,
ಜಿ-ಬೀದರ್-585226

ಸಹಕಾರ : ಕೊಂಡಾ ಬಸವರಾಜ್, ವಿಶ್ವಲಿಂಗಾಯತ್ ಪರಿಷತ್, ಮೆಹಬೂಬ್ ನಗರ

14-4-2002	ಕದಳಿ ವನ (ಆಂಧ್ರಪ್ರದೇಶ್)
15-4-2002	ದುವಲಪೆಂಟಾ
16-4-2002	ವಟವರ್ಲಾಪಳ್ಳಿ
17-4-2002	ಮನ್ನಾನೂರು
18-4-2002	ಅಚ್ಚಂ ಪೇಟ
19-4-2002	ತೆಲಕಾಪಳ್ಳಿ
20-4-2002	ಮಂಗಾನೂರು
21-4-2002	ಮೆಹಬೂಬ್ ನಗರ
22-4-2002	ಕಾಮರೆಡ್ಡಿ ಪಳ್ಳಿ
23-4-2002	ಕೋಡಂಗಲ್
24-4-2002	ತಾಂಡೂರ್
25-4-2002	ಚಿಂಚೋಳಿ (ಕರ್ನಾಟಕ)
26-4-2002	ನಿರ್ಣಾ
27-4-2002	ಹುಡಗಿ
28-4-2002	ರಾಜೇಶ್ವರ
29-4-2002	ನಾರಾಯಣಪುರ
30-4-2002	ಬಂದವರ ಓಣಿ
1-5-2002	ಬಸವ ಕಲ್ಯಾಣ ಸಮ್ಮೇಳನ

Digitalized by e-Sahithya Documentation Forum
Sponsored by arayu Foundation Trust

ಬಸವ ಜ್ಯೋತಿ ಸಂಚಾರ

2002ರ ಮೇ 1,2 ಮತ್ತು 3 ರಂದು ಬಸವ ಕಲ್ಯಾಣದಲ್ಲಿ ನಡೆಯಲಿರುವ ಕಲ್ಯಾಣ ಪರ್ವದ ನಿಮಿತ್ತ

ಕೂಡಲಸಂಗಮ - ಬಸವಕಲ್ಯಾಣ ಜ್ಯೋತಿ ಯಾತ್ರೆ

ನೇತೃತ್ವ : ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಬಸವ ಧರ್ಮ ಪೀಠ, ಕೂಡಲಸಂಗಮ

25-3-2002	ಕೂಡಲಸಂಗಮ	13-4-2002	ಶಿವಣಗಿ
26-3-2002	ಬೆಳಗಲ್	14-4-2002	ದೇವರ ಹಿಪ್ಪರಗಿ
27-3-2002	ಇದ್ದಲಗಿ	15-4-2002	ಕನ್ನೊಳಿ
28-3-2002	ಧನ್ನೂರು	16-4-2002	ಸಿಂದಗಿ
29-3-2002	ಮರೋಳ	17-4-2002	ಮೋರಟಗಿ
30-3-2002	ತಂಗಡಗಿ	18-4-2002	ಗಾಣಗಾಪುರ
31-3-2002	ಮುದ್ದೇಬಿಹಾಳ	19-4-2002	ಗೊಬ್ಬೂರ
1-4-2002	ಹೊಕ್ರಾಣಿ	20-4-2002	ಜೇವರಗಿ
2-4-2002	ಕುಂಟೋಜಿ	21-4-2002	ಫರಹತಾಬಾದ್
3-4-2002	ತಾಳೀಕೋಟೆ	22-4-2002	ಗುಲಬರ್ಗಾ
4-4-2002	ಧವಳಗಿ	23-4-2002	ಮಹಾಗಾಂವ
5-4-2002	ಹೂವಿನ ಹಿಪ್ಪರಗಿ	24-4-2002	ಕಮಲಾಪುರ
6-4-2002	ಬಸವನ ಬಾಗೇವಾಡಿ	25-4-2002	ಹಳ್ಳಿಖೇಡ
7-4-2002	ಇಂಗಳೇಶ್ವರ	26-4-2002	ಹುಮನಾಬಾದ
8-4-2002	ಮನಗೋಳಿ	27-4-2002	ಇಸ್ಲಾಂಪುರ
9-4-2002	ಬಿಜಾಪುರ	28-4-2002	ರಾಜೇಶ್ವರ
10-4-2002	ಕೌಲಗಿ	29-4-2002	ತಡೋಲ
11-4-2002	ಕಗ್ಗೋಡ	30-4-2002	ಗೋರ್ಟಾ
12-4-2002	ಹಡಗಲಿ	1-5-2002	ಬಸವಕಲ್ಯಾಣ

ಬಸವ ಜಯಂತಿ ಶುಭಾಶಯ ಪತ್ರ

2002 ನೆಯ ಇಸವಿಯ ಬಸವ ಜಯಂತಿಯು 14-5-2002ರಂದು ಒದಗಿ ಬಂದಿದ್ದು ಎಲ್ಲೆಡೆ ಆಚರಿಸುವುದು ನಿಮ್ಮ ಕರ್ತವ್ಯ. ಈ ನಿಮಿತ್ತ ಬಂಧು ಮಿತ್ರರು ಪರಿಚಿತರಿಗೆ ಶುಭಾಶಯ ಪತ್ರ ಕಳಿಸಬೇಕು ಎನ್ನುವವರಿಗೆ ಸುಂದರವಾದ ಬಹುವರ್ಣೀಯ ಭಾವಚಿತ್ರವುಳ್ಳ ಗ್ರೀಟಿಂಗ್ ಮಾರಾಟಕ್ಕೆ ಎನ್‌ವಲಪ್ ಸಹಿತ ದೊರೆಯುತ್ತದೆ. 1 ಪ್ರತಿ 5 ರೂ. (ಅಂಚೆ ವೆಚ್ಚ 3 ರೂ. ಪ್ರತ್ಯೇಕ). 5 ಪ್ರತಿಗಳಿಗೆ ರೂ. 22-50 ಪೈ. (ಅಂಚೆ ವೆಚ್ಚ 7 ರೂ. ಪ್ರತ್ಯೇಕ). 10 ಪ್ರತಿಗಳಿಗೆ ಮೀರಿ ಕೊಳ್ಳುವವರಿಗೆ ಒಂದು ಪತ್ರಕ್ಕೆ ಒಂದು ರೂ. ರಿಯಾಯಿತಿ. 45 ರೂ. (ಅಂಚೆ ವೆಚ್ಚ 11 ರೂ.)

ವಿ.ಸೂ. ನಿಮ್ಮಲ್ಲಿ ತರಿಸಿಕೊಂಡು ಪುನಃ ನೀವು ಕಳಿಸುವುದಕ್ಕಿಂತಲೂ ಕಳಿಸಬೇಕಾದವರ ವಿಳಾಸ ಕಳಿಸಿ, ಗ್ರೀಟಿಂಗ್ ಕಾರ್ಡ್ ವೆಚ್ಚ + ಅಂಚೆ ವೆಚ್ಚ ಪ್ರತಿ ಒಂದಕ್ಕೆ 4 ರೂ. ನಂತೆ ಕಳಿಸಿದರೆ ನಿಮ್ಮ ಹೆಸರಿನಲ್ಲಿ ನೇರವಾಗಿ ನೀವು ಬಯಸಿದವರಿಗೆ ಕಳಿಸಲಾಗುವುದು.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮುಖ್ಯ ರಸ್ತೆ,
ರಾಜಾಜಿನಗರ, 2ನೇ ಬ್ಲಾಕ್, ಬೆಂಗಳೂರು-560010

2001 ಡಿಸೆಂಬರ್ ಮತ್ತು 2002 ಜನವರಿ, ಫೆಬ್ರವರಿ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು

(ಡಿಸೆಂಬರ್ ತಿಂಗಳಿನ ಕಲ್ಯಾಣ ಕಿರಣದಲ್ಲಿ ಪಟ್ಟಿಯನ್ನು ಪ್ರಕಟಿಸಲಾಗಿತ್ತು ಸ್ಥಳಭಾವ ಮತ್ತು ಸಮಯಾಭಾವದಿಂದ ಜನವರಿ, ಫೆಬ್ರವರಿ ಸಂಚಿಕೆಗಳಲ್ಲಿ ಪ್ರಕಟಿಸಲು ಆಗಿರಲಿಲ್ಲ)

ಬಸವ ಧರ್ಮಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

1.	ಎಚ್. ವಿ. ನಾಗಪ್ಪ, ಪಿರಿಯಾಪಟ್ಟಣ. ಡಬ್ಬಲ್ ರೂಂ	71000-00
2.	ಸಿದ್ಧರಾಮಪ್ಪ ಗುರುಪಾದಪ್ಪ ಲಖಮಣ್, ಗುಲಬರ್ಗಾ ಸೋಮಶೇಖರ್ ಬಸವಂತರಾವ್, ಮಹಾಗಾಂವ. ಸಿಂಗಲ್ ಕೋಣೆಗೆ	51000-00
3.	ಸರಸ್ವತಮ್ಮ ಮತ್ತು ಮಕ್ಕಳು, ಬಳ್ಳಾರಿ	51000-00
4.	ಅಮೃತಪ್ಪ ಪಾಪಡೆ ಮತ್ತು ಶರಣರು ರಾಷ್ಟ್ರೀಯ ಬಸವ ದಳ, ಕೋಳಾರ, ಬೀದರ ಜಿಲ್ಲೆ	51000-00
5.	ಎಸ್. ಬಿ. ಜುಗತಿ, ಜಲನಗರ, ಬಿಜಾಪುರ	51000-00
6.	ಮಲ್ಲಿಕಾರ್ಜುನಪ್ಪ ಶರಣಪ್ಪ ಪಡಶೆಟ್ಟಿ, ಹರಸೂರು, ಗುಲಬರ್ಗಾ	51000-00
7.	ಕೆ. ಬಸವರಾಜ್. ಆದವಾನಿ, ಆಂಧ್ರ	51000-00
8.	ಶ್ರೀ ಪ್ರಭುಲಿಂಗೇಶ್ವರ ಷುಗರ್ ಫ್ಯಾಕ್ಟರಿ, ಸಿದ್ಧಾಪುರ, ಜಮಖಂಡಿ	11000-00
8.	ಶ್ರೀಮಂತಿ ರಾಮಚಂದ್ರ, ಕುಂಬಾರ್, ಹೇರವಾಡ, ಮಹಾರಾಷ್ಟ್ರ, ಮಕ್ಕಳಾದ ಲಿಂ॥ ಮಾರುತಿ ಮತ್ತು ಲಿಂ॥ ಅಶೋಕರ ಸ್ಮರಣಾರ್ಥ	10000-00
10.	ಕಲ್ಲಪ್ಪ ನರಸಪ್ಪ ಕಪಾಳಿ, ಹಾವೇರಿ	5000-00
11.	ಕೆ. ಆರ್. ನಂಜುಂಡಪ್ಪ, ದಾವಣಗೆರೆ	5000-00
12.	ಕೆ. ಅನಸೂಯಮ್ಮ ಟೀಚರ್, ಬಳ್ಳಾರಿ	5001-00
13.	ಚ. ಬ. ಕೊರಗರ, ಗುಡ್ಡದ ಮಾದಾಪುರ	2005-00
14.	ಸಂಗಮ್ಮ ಲಿಂಗಪ್ಪ ಎಮ್ಮಿ, ಧಾರವಾಡ	1001-00
15.	ಡಾ॥ ಸಿ. ವಿ. ಟಕ್ಕಳಕಿ, ಅಫಜಲಪುರ	1001-00
16.	ಮಧುಕರ ಶೆಟಕಾರ್, ನಾರಾಯಣಖೇಡ, ಆಂಧ್ರಪ್ರದೇಶ	1001-00
17.	ಶರಣೆ. ರತ್ನಮ್ಮ ನಾಗನಗೌಡ, ಬಳ್ಳಾರಿ. (ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ಫೋಟೋ ಬರೆಸಲು)	5001-00

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ ಕಟ್ಟಡ ನಿಧಿಗೆ

1.	ಬಾಲಾಜಿ ವಿಜಯಾ ಲೊಲ್ಲಿ, ಬೆಂಗಳೂರು	11000-00
2.	ಪದ್ಮಾ ಮತ್ತು ಎಂ. ಆರ್. ತ್ರಿನೇಶ್ವರ, ಬೆಂಗಳೂರು	5001-00
3.	ಹೇಮಲತಾ. ವೈ. ಸಿ. ಚಿದಾನಂದ, ಬೆಂಗಳೂರು	2000-00
4.	ಕೆ. ಮೋಹನಲಾಲ್ ಚೌಧರಿ, ಬೆಂಗಳೂರು	2000-00
5.	ಶಿವರಾಜ್, ಬೆಂಗಳೂರು	1001-00
6.	ಜಿ. ಎಂ. ಸತೀಶ್‌ಬಾಬು, ಬೆಂಗಳೂರು	1001-00

Digitalized by e-Sahithya Documentation Forum
Sponsored by arayu Foundation Trust

ಪುಸ್ತಕ ಮುದ್ರಣಕ್ಕೆ

1.	ನರ್ಮದಾ ರುದ್ರಪ್ಪ ಮಟ್ಟಿಕಲ್ಲಿ, ಸಂಕೇಶ್ವರ	11001-00
2.	ದುಂಡಪ್ಪ ಕಬ್ಬೂರಿ, ಸಂಕೇಶ್ವರ	11000-00
3.	ಮಹಾದೇವ ಅಪ್ಪಾಸಾಹೇಬ ಕೇಸರಖಾನೆ, ಮೀರಜ್	11000-00
4.	ಮಹಾದೇವ ರಾಮಚಂದ್ರ ಪೂಜಾರಿ, ಬೈಲಹೊಂಗಲ	10005-00
5.	ಪ್ರೇಮಾ ಮತ್ತು ವೀರಭದ್ರಪ್ಪ, ಬೆಂಗಳೂರು	5111-00
6.	ಶಿವಲಿಂಗಪ್ಪ ರಾಚಪ್ಪ ಗಂಜಿ, ಸಂಕೇಶ್ವರ	5001
7.	ಎನ್. ಎಂ. ವಿಶ್ವನಾಥ ಹಳಿಜೋಳ, ಸಂಕೇಶ್ವರ	5000-00
8.	ಶಂಕರಗೌಡ ರಾಮಗೌಡ ದೇಸಾಯಿ, ಸಂಕೇಶ್ವರ	5000-00
9.	ಎಂ. ಕಂಗಳೇಶ್. ಟ. ಮಲ್ಲಪ್ಪ, ಶಿವಮೊಗ್ಗ	5001-00

ಶರಣ ಮೇಳದ ದಾಸೋಹನಿಧಿ (ಪುದುವಟ್ಟಿಗೆ)

1.	ಶರಣೆ. ಎಸ್. ಜಿ. ಸುಶೀಲಮ್ಮ, ಬೆಂಗಳೂರು	10000-00
2.	ಶರಣ. ರಾಮಚಂದ್ರ ಸಖಾರಾಂ ಮಾಳಿ, ನಾಗರಾಳ್	5000-00
3.	ಶರಣ. ಜಿ. ಧನರಾಜ್, ಹೈದರಾಬಾದ್	5000-00
4.	ಶರಣೆ. ಗೌರಮ್ಮ ರುದ್ರಪ್ಪ ಮತ್ತು ಮಕ್ಕಳು, ಬೆಂಗಳೂರು	5000-00

ಬಸವ ಕಲ್ಯಾಣದಲ್ಲಿ ನಿರ್ಮಾಣವಾಗಲಿರುವ ಬಸವ ಮಹಾಮನೆ ಯೋಜನೆಗೆ

1.	ಶರಣ. ಗುರುಬಸಪ್ಪ ಮತ್ತು ಶರಣೆ. ಪುಷ್ಪಾ, ಕಾಟೇರಿ (ತಮಿಳುನಾಡು)	196001-00
2.	ಶರಣ. ಆರ. ಬಿ. ಹೆಬ್ಬಳ್ಳಿ, ಮುಂಬಯಿ	100001-00
3.	ಶರಣ. ಅಮೃತಪ್ಪ ಪಾಪಡೆ ಮತ್ತು ಶರಣರು, ರಾಷ್ಟ್ರೀಯ ಬಸವ ದಳ, ಕೋಳಾರ, ಬೀದರ್ ಜಿಲ್ಲೆ (ಸಿಂಗಲ್ ಕೋಣೆಗೆ)	60000-00
4.	ಗುಪ್ತಕಾಣಿಕೆ (ಸಿಂಗಲ್ ಕೋಣೆ ನಿರ್ಮಾಣಕ್ಕೆ)	60000-00
5.	ಶರಣೆ. ವಿದ್ಯಾ ಮತ್ತು ಶರಣ. ಎಸ್. ಎನ್. ಚಂದ್ರಣ್ಣ, ಚಿತ್ರದುರ್ಗ	25000-00
6.	ಜಿ. ಪಿ. ಕುಮಾರ್, ಭದ್ರಾವತಿ	40000-00
7.	ಅಂಜನಾದೇವಿ ಶಿವಣ್ಣ ಶಿರೂರು, ಧಾರವಾಡ	22222-00
8.	ಶರಣ. ಎಸ್. ಪಿ. ಹಿರೇಮಠ್, ಬೆಂಗಳೂರು	20000-00
9.	ಶರಣೆ. ಸರೋಜಮ್ಮ ಮತ್ತು ಶರಣ. ನಾಗರಾಜು, ಮೈಸೂರು	10000-00
10.	ಶರಣೆ. ಉಮಾ ಚಂದ್ರಪ್ಪ D/o ಶರಣೆ. ಸರೋಜಮ್ಮ ರಾಮಸಿಂಗಪ್ಪ	10000-00
11.	ಶರಣೆ. ಪ್ರೇಮಾ, ಶರಣ. ಸಿದ್ಧರಾಮೇಗೌಡ, ಬಳ್ಳಾರಿ	10000-00
12.	ಶರಣ. ಎ. ಸಿ. ಮೂಲೆಮನೆ, ಶಿವಮೊಗ್ಗ	10000-00
13.	ಶರಣ. ಸಿದ್ಧರಾಮಪ್ಪ ಪಾಟೀಲ್, ಬೆಂಗಳೂರು	10000-00
14.	ಶರಣ. ಡಾ॥ ವಿ. ಸುಶೀಲಮ್ಮ, ಬೆಂಗಳೂರು	5000-00
15.	ಶರಣೆ. ಶ್ರೀದೇವಿ ಬಡದಾಳೆ, ಕೇಸರ ಜವಳಗಾ	5000-00
16.	ಮಂಜುನಾಥ ಗುರುಶಾಂತಪ್ಪ ಅಂಗಡಿ, ಧಾರವಾಡ	5000-00

17.	ಶರಣ. ಗುರುಪಾದಪ್ಪ ಸಿದ್ಧರಾಮಪ್ಪ ಲಖಮಣ, ಗುಲಬರ್ಗಾ	2100-00
18.	ಶರಣ. ಚನ್ನಬಸವದೇವರು, ಬೆಂಗಳೂರು	1200-00
19.	ಶರಣ. ಜಿ. ಹನುಮಂತಪ್ಪ, ಗಂಗಾವತಿ	1100-00
20.	ಶರಣ. ಬಸಪ್ಪ ಬೆಳಕೆರೆ, ಮನ್ನಳ್ಳಿ	1001-00
21.	ಶರಣ. ಎಂ. ವಿ. ಕುಸುಗಲ್, ಧಾರವಾಡ	1001-00

ಬೆಂಗಳೂರಿನ ಬಸವ ಮಂಟಪದಲ್ಲಿ ದೇವ (ರವಿ)ವಾರ ನಡೆಯುವ ದಾಸೋಹಕ್ಕೆ ಕಾಣಿಕೆ ಸಲ್ಲಿಸಿದ ಶರಣ ಬಂಧುಗಳು

2-12-2001	ಶರಣ. ಬಸವರಾಜ ಹೊಸಮನಿ, ಬೆಂಗಳೂರು
9-12-2001	ಶರಣ. ಪಂಚಾಕ್ಷರಿ, ಬೆಂಗಳೂರು
16-12-2001	ಶರಣೆ. ಪುಷ್ಪಾ ಮತ್ತು ಶರಣ. ಸಿದ್ಧರಾಮಪ್ಪ ಪಾಟೀಲ್, ಬೆಂಗಳೂರು
23-12-2001	ಶರಣ. ಕೆ.ಆರ್. ಪರಂಜ್ಯೋತಿ, ಬೆಂಗಳೂರು
	ಶರಣೆ. ಸಿದ್ಧಮ್ಮನವರು, ಬೆಂಗಳೂರು
30-12-2001	ಶರಣ. ಜೆ. ಜೈರಾಜ್
	ಶರಣ. ಬಿ. ಜಯದೇವ
	ಶರಣ. ಎಸ್.ಎನ್. ನೀಲಕಂಠ
6-1-2002	ಶರಣ. ಬಸವರಾಜ್, ಬೆಂಗಳೂರು
14-1-2002	ಶರಣ. ಸೋಮಣ್ಣ, ಬೆಂಗಳೂರು
20-1-2002	ಶರಣ. ಹೆಚ್. ಎನ್. ಶಿವಪ್ಪ, ಬೆಂಗಳೂರು
27-1-2002	ಶರಣ. ಸುಧೀರ, ಜಿ. ಕುಲಕರ್ಣಿ (ಲಿಂಗೈಕ್ಯ ಗುರುಪಾದಪ್ಪನವರ ಸಂಸ್ಮರಣೆ)
3-2-2002	ಶರಣ. ಹೆಚ್.ವಿ. ಪಂಚಾಕ್ಷರಿ, ಬೆಂಗಳೂರು
10-2-2002	ಶರಣ. ಗುರುಲಿಂಗಮೂರ್ತಿ, ಶರಣೆ. ವನಜಾ ಶ್ರೀನಿವಾಸ್, ಶರಣೆ. ಲತಾ ಶಂಕರ್
17-2-2002	ಶರಣೆ. ಆರ್. ಶಿವಕುಮಾರ್, ಬೆಂಗಳೂರು
24-2-2002	ಶರಣ. ಸಿದ್ಧಯ್ಯ ಹಿರೇಮಠ, ಬೆಂಗಳೂರು
	ಶರಣೆ. ಸಾಕಮ್ಮ, ಬೆಂಗಳೂರು

ಕೂಡಲ ಸಂಗಮದ ಬಸವ ಧರ್ಮಪೀಠದ ದಾಸೋಹ ನಿಧಿಗೆ 1111-00 ರೂ ಸಲ್ಲಿಸಿದ ಧನ ದಾಸೋಹಿಗಳು.

ಶರಣರುಗಳಾದ :

ಮಂಜುಳಾ ಮತ್ತು ಕೆ. ವಿ. ಪಾಪಣ್ಣ, ಕೊಡಿಗೇಹಳ್ಳಿ
ಸುಶೀಲಮ್ಮ ಮತ್ತು ಶ್ರೀಕಂಠಪ್ಪ, ಕೊಡಿಗೇಹಳ್ಳಿ
ಪ್ರೇಮಾ. ಎಸ್. ಪಾಟೀಲ್, ಧಾರವಾಡ
ಎ. ಆರ್. ಶಾಂತಮ್ಮ, ಬೆಂಗಳೂರು
ಶೀಲಾ ಮತ್ತು ಶಂಕರ್, ಕ್ಯಾಲಿಫೋರ್ನಿಯಾ, ಅಮೇರಿಕಾ
ಜೆ. ಪಿ. ರಾಜೇಶ್ವರಿ ರಾಜಶೇಖರ್, ಬೆಂಗಳೂರು

Digitalized by e-Sahithya Documentation Forum
Sponsored by arayu Foundation Trust

ನಾಗರಾಜು, ಬೆಂಗಳೂರು
ಪುಟ್ಟಲಿಂಗಯ್ಯ, ಕಣ್ಣಾನೂರು
ಪದ್ಮನಾಭ ಶೆಟ್ಟಿ, ಬೆಂಗಳೂರು
ಕಮಲಮ್ಮ. ವೈ. ಎಸ್. ಚನ್ನರಾಯಪ್ಪ, ಬೆಂಗಳೂರು
ಪ್ರೇಮಾ ಶ್ರೀರಾಮಮೂರ್ತಿ, ಬೆಂಗಳೂರು
ಶಾರದಮ್ಮ ಮುನಿಯಪ್ಪ, ಬೆಂಗಳೂರು
ಎಸ್. ಲಕ್ಷ್ಮಿನಾರಾಯಣ್, ಬೆಂಗಳೂರು
ಅಂಗಡಿ ರಾಮಕ್ಕ, ಬೆಂಗಳೂರು
ಯಡೆಯೂರಪ್ಪ, ಬೆಂಗಳೂರು
ಮಹಾದೇವಿ ಚನ್ನಪ್ಪ, ಬೆಂಗಳೂರು
ಚಂದ್ರಾಬಾಯಿ. ಕೆ. ರವಿ, ಬೆಂಗಳೂರು
ಸುರೇಶ ರಾಚಪ್ಪ ಗಂಜಿ, ಬೆಂಗಳೂರು
ದಯಾನಂದ ವಿಶ್ವನಾಥ ಗಂಜಿ, ಬೆಂಗಳೂರು
ವೀರಬಸಮ್ಮ ಈರಪ್ಪ ಬೆಳವಿ, ಬೆಂಗಳೂರು
ಮೇತ್ರಾಣಿ, ಹುಬ್ಬಳ್ಳಿ
ವಿ. ಬಿ. ಕಮತಗಿ, ಹುಬ್ಬಳ್ಳಿ
ಎಂ. ಎಸ್. ಪಾಟೀಲ್, ಬೆಂಗಳೂರು
ಪ್ರೇಮಾ ಬಸವರಾಜ್, ಬೆಂಗಳೂರು
ಬಿ. ಎಸ್. ಪಾಟೀಲ್, ಪೂನಾ
ಪ್ರಮೀಳಾದೇವಿ ಲಖಮಗೌಡ ದೇಸಾಯಿ, ಸಂಕೇಶ್ವರ
ಶೋಭಾದೇವಿ ಶ್ರೀಶೈಲ ಗಡ್ಡಿ, ಸಂಕೇಶ್ವರ
ಜೆ. ಬಿ. ಮಲ್ಲಿಕಾರ್ಜುನಾ, ಭದ್ರಾವತಿ
ಎಸ್. ಬಿ. ರಘು, ಎಸ್. ಕೊಪ್ಪಲು
ಬಸವ ವಾಣಿ ಕಲ್ಲಪ್ಪ ಮಾಳಗಿ, ಗಡಹಿಂಗ್ಲಾಜ
ಜಿ.ವಿ. ವೀರಬಸಪ್ಪ, ಗೋಣಿ ಸೋಮನಹಳ್ಳಿ
ಜೆ. ಷಡಕ್ಷರಪ್ಪ, ಭದ್ರಾವತಿ
ಡಾ|| ಎನ್. ಬಿ. ಬಿದರಗಡ್ಡಿ, ಆದವಾನಿ
ವಿಜಯಲಕ್ಷ್ಮಿ ವೆಂಕನಗೌಡ ದಾಧ್ಮಿ, ಮರೋಳ
ಎಸ್. ವಿ. ಪ್ರಕಾಶ್, ಹುಲ್ಲೇಕೆರೆ
ಸುಜಾತಾ ನಿರಂಜನ್, ಭದ್ರಾವತಿ
ಜ್ಯೋತಿ ಸದಾನಂದ, ಭದ್ರಾವತಿ
ಜೆ. ಹನುಮಂತಪ್ಪ, ಗಂಗಾವತಿ
ಪಾರ್ವತವ್ವ ಮಲ್ಲಿಕಾರ್ಜುನ ಕೊಪ್ಪದ, ಬೈಲಹೊಂಗಲ
ರುದ್ರಪ್ಪ ಸಾತಪ್ಪ ಗೂಳಣ್ಣನವರು, ನೇಸರಗಿ
ಗುರುನಾಥ ಬಾಚಣ್ಣ, ಹೈದರಾಬಾದ್
ಬಸವರಾಜ ಬಿರಾದಾರ, ಹೈದರಾಬಾದ
ಮಲ್ಲಪ್ಪ ಸಂಗಪ್ಪ ಮಾಲೂರು, ದಾವಣಗೆರೆ

ಪಿ. ಮಾದಪ್ಪ, ಬೆಂಗಳೂರು
ಶ್ರೀಧರ ಸದಾಶಿವ ಬುಲ್ಲೆಯವರ್, ಮಹಾರಾಷ್ಟ್ರ
ಮಲ್ಲಿಕಾರ್ಜುನ. ವಿ. ಅರಗಂಜಿ, ಧಾರವಾಡ
ಅರ್ಜುನ ಲಕ್ಷ್ಮಣ ಗಲಗಲಿ, ಮುಧೋಳ
ಜಯಶ್ರೀ ಖೇಳಗೆ, ನಿಡೋದಾ, ಜಿಲ್ಲೆ-ಬೀದರ್
ನಾಗರಾಜ ಚನ್ನಮಲ್ಲಪ್ಪ ಸೊನ್ನದ, ಬಿಜಾಪುರ
ಜೆ. ಎಲ್. ಮಂಜುನಾಥ, ಬೆಂಗಳೂರು
ಮಹಾಂತೇಶ್ವರ ಸಂಗಪ್ಪ ಎಮ್ಮಿ, ಧಾರವಾಡ
ಹೇಮಂತ ಚನ್ನಪ್ಪ ಎಮ್ಮಿ, ಧಾರವಾಡ
ಭಾಗ್ಯಮ್ಮ. ಬಿ. ಜಿ. ನಾಗರಾಜಪ್ಪ, ಶಿವಮೊಗ್ಗ
ಡಾ|| ಎನ್. ಬಿ. ಬಿದರಗಡ್ಡಿ, ಆದವಾನಿ, ಆಂಧ್ರ
ಅಪ್ಪಾರಾಯ ಹನುಮಂತರಾಯ ಪಾಟೀಲ್, ನಂದೂರು, ಮಹಾರಾಷ್ಟ್ರ
ರಾಮಗೊಂಡ ಶಿವಪ್ಪ ಚೌಗುಲೆ, ಅರಳಿ, ಮಹಾರಾಷ್ಟ್ರ
ಅಶೋಕ ಬಸವಂತ ಪಾಟೀಲ, ಬೋರಾಳೆ, ಮಹಾರಾಷ್ಟ್ರ
ನೀಲಕಂಠ ಗೌರಪ್ಪ ಬಿರಾದಾರ, ದೋನಾಜ್, ಮಹಾರಾಷ್ಟ್ರ
ಯಶವಂತರಾವ್ ಅಪ್ಪಾರಾವ ಪಾಟೀಲ್, ತಾಳಸಂಗಿ, ಮಹಾರಾಷ್ಟ್ರ
ನಾಗನಾಥ ಸಿದ್ಧಪ್ಪ ಕಳಂತ್ರೆ, ಸೊಲ್ಲಾಪುರ, ಮಹಾರಾಷ್ಟ್ರ
ರಾಚಗೊಂಡ ಪಂಡಿತ್ ಬಿರಾದಾರ್, ಸಲಗರ್, ಮಹಾರಾಷ್ಟ್ರ
ಮಲ್ಲಕಪ್ಪ ಶಿವಪ್ಪ ಹವನಾಳೆ, ಮಂಗಳವೇಡೆ, ಮಹಾರಾಷ್ಟ್ರ
ಮುರಿಗೆಪ್ಪ ಈರಪ್ಪ ವಾಲಿ, ಬಳ್ಳೊಳ್ಳಿ, ಮಹಾರಾಷ್ಟ್ರ
ಅನಿಲ ಬಾಳಗಿ, ಕುಂಭಾರಿ, ಮಹಾರಾಷ್ಟ್ರ
ಸುಮತಿ D/o ವಿಶ್ವನಾಥ ಪಾಟೀಲ್, ಬೀದರ್
ಪಾರ್ವತಿ ಗಂಗಶೆಟ್ಟಿ ಪಾಟೀಲ್, ಬೀದರ್
ವೈಜನಾಥ ಮಾಣಿಕರಾವ್ ಖೇಳಗೆ, ನಿಡೋದಾ
ಬಸವಣ್ಣೆಪ್ಪ ಬುಕ್ಕಾ, ಹಿಪ್ಪಳಗಾಂವ
ಕಲ್ಪನಾ ರವಿಕುಮಾರ್ ಮಡಿವಾಳರ, ದಾವಣಗೆರೆ
ಜಿ. ವೀರಭದ್ರಪ್ಪ, ದಾವಣಗೆರೆ
ಸುರೇಶ ಫೋಟೋಗ್ರಾಫರ್, ಕೂಡಲ ಸಂಗಮ
ಚನ್ನಬಸವದೇವರು, ಬೆಂಗಳೂರು
ಎ. ಆರ್. ಅನುಸೂಯಾದೇವಿ ಚನ್ನಬಸವದೇವರು, ಬೆಂಗಳೂರು
ಬಿ. ಸಿ. ಅವಿನಾಶ S/o ಚನ್ನಬಸವದೇವರು, ಬೆಂಗಳೂರು

(ಮುಂದುವರಿಯುವುದು)

ಈ ಎಲ್ಲ ಧನದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ನೀಡಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ - ಬಸವ ಕಲ್ಯಾಣ

Digitalized by e-Sahithya Documentation Forum
Sponsored by arayu Foundation Trust




ಶರಣೋತ್ಸವ ಮಾತೆ ನಿಮಗೆ ಶರಣೋತ್ಸವ

1. ಜ್ಞಾನದ ಸಿರಿ ಬೆಳಕಿನಲ್ಲಿ
ತತ್ವದ ಖಣಿ ಇಂಪಿನಲ್ಲಿ
ಚಿನ್ಮೂಲಾದ್ರಿ, ಚಿತ್ಕಳೆಯಾಗಿ,
ಉತ್ತುಂಗದ ನಿಲುವಿನಲ್ಲಿ
ಸತ್ಯ, ಶಾಂತಿ, ತ್ಯಾಗದಲಿ,
ಭಕ್ತಿ ಜ್ಞಾನ ವಿರಕ್ತಿಯಲಿ
ಶರಣೋತ್ಸವ ಮಾತೆ ನಿಮಗ ಶರಣೋತ್ಸವ
"ಹಾ""ಹಾ""ಹಾ"

2. ಬಸವಣ್ಣನ ನಾಡಿನಲಿ
ಶರಣರ ಭೂಮಿಯಲಿ
ಗತ ವೈಭವ ಸಾರುವ ಕಲ್ಯಾಣ ಪರ್ವದಲಿ
ಕಾಯಕದ ಮಾಟದಲಿ
ಲಿಂಗದೇವನ ಕೂಟದಲಿ
ಶರಣೋತ್ಸವ ಮಾತೆ ನಿಮಗೆ ಶರಣೋತ್ಸವ
"ಹಾ""ಹಾ""ಹಾ"

3. ಷಟಸ್ಥಲದ ಪ್ರಭೆಯಲ್ಲಿ
ಷಟ್ ಸೂತ್ರ ಮಾಲೆಯಲಿ
ಸತ್‌ಚಿದಾನಂದ ಪ್ರಿಯೆ
ವಚನಗಳ ಸಾಲಿನಲಿ
ಲಿಂಗಾಂಗ ಯೋಗದಲಿ
ಲಿಂಗದೇವನ ಲೀಲೆಯಲಿ (ತೇಜದಲಿ)
ಶರಣೋತ್ಸವ ಮಾತೆ ನಿಮಗೆ ಶರಣೋತ್ಸವ


ಶ್ರೀಕಂಠಕುಮಾರ್, ಬಸವ ಗಂಗೋತ್ರಿ, ಬೆಂಗಳೂರು



Digitalized by e-Sahithya Documentation Forum
Sponsored by arayu Foundation Trust

ಕಲ್ಯಾಣ ಕಿರಣ CPMG/KA/BGW-50 ಮಾರ್ಚ್ - 2002
R.NO. 19980/70 WPP (W) - 17

ಕರ್ನಾಟಕ



ಬಸವ ಕಲ್ಯಾಣ-ಸ್ಥಳ ನಿರ್ದೇಶನ

Digitalized by e-Sahithya Documentation Forum
Sponsored by arayu Foundation Trust